ಸಂಪುಟ: 04 ಸಂಚಿಕೆ: 235 ಪುಟಗಳು: 08 ಶುಕ್ರವಾರ 08 ನವೆಂಬರ್ 2024

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಮತ್ತೊಬ್ಬರ ಜೀವನ ಕಂಡು ಅಸೂಯೆ ಪಟ್ಟು ಹುಸಿ ನಗುವುದಕ್ಕಿಂತ ಅವರ ಆತ್ಮವನ್ನು ಅರಿತು ಆನಂದ ಪಟ್ಟರೆ ಅತ್ಯುತ್ಸಾಹ ಬರುವುದು

ಉದಯ ವಾಹಿನಿ

ವರದಿಗಾರರು ಬೇಕಾಗಿದ್ದಾರೆ

ಎಂಎ., ಜರ್ನಲಿಸಂ ಮಾಡಿರುವಂತಹ ಉತ್ಸಾಹಿ ಯುವಕ ಯುವತಿಯರು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಕೆಲಸ ಮಾಡುವಂತಹ

ರಾಜ್ಯದಾದ್ಯಂತ ವರದಿಗಾರರು ಬೇಕಾಗಿದ್ದಾರೆ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

9448225696
+91 8035841833

#: 1230 'JAYAMAHAL 13th cross, 2nd phase, Girinagar, Bangalore-560085. (Near to Bangalore one park, opposite mandya medical)
udayavahininews@gmail.com

## ಜೆಪಿಸಿ ಅಹವಾಲು ಸ್ವೀಕಾರ

## ರಾಜ್ಯ ಸರ್ಕಾರ ನಕಾರ

- ರೈತರಿಗೆ ವಕ್ಫ್ ಬೋರ್ಡ್ ನೀಡಿರುವ ನೋಟಿಸ್ ಕುರಿತು ಜೆಪಿಸಿಗೆ ಮಾಹಿತಿ
- ಎಪ್ಪತ್ತೈದಕ್ಕೂ ಹೆಚ್ಚು ಅಹವಾಲು ಸ್ವೀಕರಿಸಿದ ಸಮಿತಿ
- ಆರೋಪ ಪ್ರತ್ಯಾರೋಪಕ್ಕೆ ಕಾರಣವಾದ ಜಗದಾಂಬಿಕಾ ಭೇಟಿ

• **ಉದಯವಾಹಿನಿ, ಹುಬ್ಬಳ್ಳಿ**

ರಾಜ್ಯದಲ್ಲಿ ವಕ್ಫ್ ಬೋರ್ಡ್‌ನಿಂದ ರೈತರಿಗೆ ನೋಟಿಸ್ ನೀಡಿರುವುದನ್ನು ವಕ್ಫ್ ಕಾಯ್ದೆ ತಿದ್ದುಪಡಿ ಕುರಿತು ಪರಿಶೀಲಿಸಲು ರಚನೆಯಾಗಿರುವ ಸಂಸತ್ತಿನ ಜಂಟಿ ಸದನ ಸಮಿತಿ ಗಮನಕ್ಕೆ ತಂದಿದ್ದೇವೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ವಕ್ಫ್ ಕಾಯ್ದೆ ತಿದ್ದುಪಡಿ ಕುರಿತು ನೇಮಕವಾಗಿರುವ ಜಂಟಿ ಸದನ ಸಮಿತಿ ಅಧ್ಯಕ್ಷ ಜಗದಂಬಿಕಾ ಪಾಲ್ ಅವರನ್ನು ಬುಧವಾರ ಹುಬ್ಬಳ್ಳಿಯಲ್ಲಿ ಬಿಜೆಪಿ ನಾಯಕರ ನಿಯೋಗ ಭೇಟಿ ಮಾಡಿ ಚರ್ಚಿಸಿದೆ. ಬಳಿಕ ಬಸವರಾಜ ಬೊಮ್ಮಾಯಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾವೇರಿ ಜಿಲ್ಲೆಯ ಶಿಗ್ಗಾವಿ, ಸವಣೂರು ಸೇರಿದಂತೆ ಎಲ್ಲಾ ತಾಲ್ಲೂಕುಗಳಲ್ಲಿ ವಕ್ಫ್ ಬೋರ್ಡ್ ರೈತರಿಗೆ, ಆಸ್ಪತ್ರೆ, ಶಾಲೆ, ಕಾಗಿನೆಲೆ ಮಠಕ್ಕೆ ನೋಟಿಸ್ ನೀಡಿದೆ. ಇದನ್ನು ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್ ಗಮನಕ್ಕೆ ತಂದಿದ್ದೇವೆ. ಕೇವಲ ಹಾವೇರಿ ಜಿಲ್ಲೆಯಷ್ಟೇ ಅಲ್ಲದೆ, ಧಾರವಾಡ, ಬಿಜಾಪುರ, ಕೊಪ್ಪಳ, ಗದಗ, ಹಳೆ ಮೈಸೂರಿನ ಮಂಡ್ಯ, ಮೈಸೂರು ಜಿಲ್ಲೆ ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲಿ ರೈತರಿಗೆ ನೋಟಿಸ್ ಕೊಟ್ಟಿದ್ದಾರೆ. ವಕ್ಫ್ ಕಾಯ್ದೆ ದುರ್ಬಳಕೆ ಮಾಡಿಕೊಂಡಿರುವುದರಿಂದ ಸಮಸ್ಯೆ ಉಲ್ಬಣಗೊಂಡಿದೆ. ಈ ಬಗ್ಗೆ ಸಮಿತಿ ಗಮನಕ್ಕೆ ತಂದಿದ್ದೇವೆ. ಈ ಸಮಿತಿ ತಳಮಟ್ಟದಲ್ಲಿ ವಾಸ್ತವ ಏನಿದೆ ಎನ್ನುವುದನ್ನು ತನ್ನ ವರದಿಯಲ್ಲಿ ಪ್ರಸ್ತಾಪಿಸಿ ಕಾಯ್ದೆ ತಿದ್ದುಪಡಿಗೆ ಸದನಕ್ಕೆ ಸಲ್ಲಿಸಲಿದೆ ಎಂದು ಹೇಳಿದರು.

ರಾಜ್ಯದಲ್ಲಿ ತರಾತುರಿಯಲ್ಲಿ ವಕ್ಫ್ ಅದಾಲತ್ ಮಾಡಲಾಗಿದೆ. ಈ ಮೂಲಕ ಕೇಂದ್ರದಲ್ಲಿ ವಕ್ಫ್ ಕಾಯ್ದೆ ತಿದ್ದುಪಡಿಯಾಗುವ ಮೊದಲೇ ರೈತರ ಭೂಮಿಯನ್ನು ವಕ್ಫ್ ಆಸ್ತಿಯನ್ನಾಗಿ ಮಾಡಿಕೊಳ್ಳುವ ಹುನ್ನಾರ ನಡೆದಿದೆ.

ಕೇವಲ ಹಿಂದುಗಳಲ್ಲದೆ, ಮುಸ್ಲಿಂ ಸಮುದಾಯದ ರೈತರ ಜಮೀನಿಗೂ ನೋಟಿಸ್ ಕೊಟ್ಟಿದ್ದಾರೆ. ಇದರಿಂದ ಇಡೀ ರೈತ ಸಮುದಾಯ ಆಕ್ರೋಶಿತಗೊಂಡಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನ ಸಭೆ ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ, ಶಾಸಕ ಮಹೇಶ್ ಟೆಂಗಿನಕಾಯಿ, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಅನೇಕ ನಾಯಕರು ಇದ್ದರು.






**75ಕ್ಕೂ ಹೆಚ್ಚು ಅಹವಾಲು ಸ್ವೀಕಾರಿಸಿದ ಸಮಿತಿ**

ಜಗದಾಂಬಿಕಾ ಪಾಲ್ ಅಧ್ಯಕ್ಷತೆಯ ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆಯ ಜಂಟಿ ಸಂಸದೀಯ ಸಮಿತಿ ಗುರುವಾರ ಹುಬ್ಬಳ್ಳಿಯ ಖಾಸಗಿ ಹೋಟೆಲ್‌ನಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಅಹವಾಲು ಸಭೆ ನಡೆಸಿದೆ. ಈ ವೇಳೆ ರೈತರು, ಸಾಮಾನ್ಯ ಜನರು, ವಿವಿಧ ಸಂಘಟನೆಗಳು, ಬಿಜೆಪಿ ಶಾಸಕರು ಮುಂತಾದವರಿಂದ ವಕ್ಫ್ ಆಸ್ತಿಗೆ ಸಂಬಂಧಿಸಿ 75ಕ್ಕೂ ಅಹವಾಲುಗಳನ್ನು ಸ್ವೀಕರಿಸಿದೆ. ಬಳಿಕ ಜಗದಾಂಬಿಕಾ ಪಾಲ್ ಮಾತನಾಡಿ 'ಅಹವಾಲುಗಳನ್ನು ಪರಿಶೀಲಿಸುತ್ತೇನೆ' ಎಂದು ಭರವಸೆ ನೀಡಿದ್ದಾರೆ.

ವಿಜಯಪುರ ಹಾಗೂ ಇತರ ಜಿಲ್ಲೆಗಳಲ್ಲಿ ವಕ್ಫ್ ಆಸ್ತಿ ಎಂದು ರೈತರಿಗೆ ನೋಟಿಸ್ ನೀಡಲಾಗಿತ್ತು. ಇದು ವಿವಾದಕ್ಕೆ ಕಾರಣವಾಗಿತ್ತು. ಸಂಸದ ತೇಜಸ್ವಿ ಸೂರ್ಯ ಅವರು ಈ ಹಿನ್ನೆಲೆಯಲ್ಲಿ ಜಂಟಿ ಸಂಸದೀಯ ಸಮಿತಿಗೆ ಪತ್ರವನ್ನು ಬರೆದಿದ್ದರು. ಅಲ್ಲದೆ, ಜಿಲ್ಲೆಗಳಿಗೆ ಭೇಟಿ ನೀಡಿ ರೈತರ ಸಮಸ್ಯೆ ಆಲಿಸುವಂತೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಜಗದಾಂಬಿಕಾ ಪಾಲ್ ಅವರು ಹುಬ್ಬಳ್ಳಿಗೆ ಮತ್ತು ವಿಜಯಪುರಕ್ಕೆ ಭೇಟಿ ನೀಡಿದ್ದಾರೆ.

1. ವಕ್ಫ್ ಕಾಯ್ದೆ ತಿದ್ದುಪಡಿ ಜಂಟಿ ಸದನ ಸಮಿತಿ ಅಧ್ಯಕ್ಷ ಜಗದಾಂಬಿಕಾ ಪಾಲ್ ಹುಬ್ಬಳ್ಳಿ ಭೇಟಿ
2. ಬಿಜೆಪಿ ನಾಯಕರ ನಿಯೋಗ ಭೇಟಿ ಮಾಡಿ ಚರ್ಚೆ
3. ಅಹವಾಲುಗಳನ್ನು ಪರಿಶೀಲಿಸುವುದಾಗಿ ಜಗದಾಂಬಿಕಾ ಪಾಲ್ ಭರವಸೆ
4. ಜಗದಾಂಬಿಕಾ ಪಾಲ್ ಭೇಟಿ ಬೆನ್ನಲ್ಲೇ ರಾಜ್ಯ ಸರ್ಕಾರ ಅಲರ್ಟ್

ಜಗದಾಂಬಿಕಾ ಪಾಲ್ ಭೇಟಿ ಬೆನ್ನಲ್ಲೇ ರಾಜ್ಯ ಸರ್ಕಾರ ಅಲರ್ಟ್ ಆಗಿದೆ. ವಿಜಯಪುರ ಹಾಗೂ ಇತರ ಜಿಲ್ಲೆಗಳಲ್ಲಿ ರೈತರಿಗೆ ವಕ್ಫ್ ನೋಟಿಸ್ ನೀಡಿದ ರೈತರನ್ನು ಒಕ್ಕಲೆಬ್ಬಿಸಲ್ಲ ಎಂದು ಡಿಕೆ ಶಿವಕುಮಾರ್ ಭರವಸೆ ನೀಡಿದ್ದಾರೆ. ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಜಗದಾಂಬಿಕಾ ಪಾಲ್



### ವಕ್ಫ್ ನೋಟಿಸ್ ನೀಡಿದ ರೈತರನ್ನು ಒಕ್ಕಲೆಬ್ಬಿಸಲ್ಲ

ಅವರು ರಾಜ್ಯಕ್ಕೆ ಆಗಮಿಸಿದ ಬೆನ್ನಲ್ಲೇ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡಿದೆ. ಜಗದಾಂಬಿಕಾ ಪಾಲ್ ವಿಜಯಪುರಕ್ಕೆ ಭೇಟಿ ನೀಡಿ ರೈತರ ಅಹವಾಲನ್ನು ಸ್ವೀಕಾರ ಮಾಡಿದ್ದಾರೆ. ಆದರೆ ಇದು ರಾಜಕೀಯ ಆರೋಪ ಪ್ರತ್ಯಾರೋಪಕ್ಕೆ ಕಾರಣವಾಗುತ್ತಿದೆ. ಈ ನಡುವೆ ರೈತರಿಗೆ ಯಾವುದೇ ಸಮಸ್ಯೆ ಅಗುವುದಿಲ್ಲ ಎಂದು ಈಗಾಗಲೇ ಸಚಿವರು, ಸಿಎಂ ಹಾಗೂ ಇದೀಗ ಡಿಸಿಎಂ ಭರವಸೆ ನೀಡಿದ್ದಾರೆ.

### ವಿಜಯಪುರ ಭೇಟಿ ರಾಜಕೀಯ ಪ್ರೇರಿತ

ವಕ್ಫ್ ತಿದ್ದುಪಡಿ ಪರಿಶೀಲನೆಗಾಗಿ ರಚನೆ ಮಾಡಲಾಗಿರುವ ಸಂಸದೀಯ ಜಂಟಿ ಸಮಿತಿಯ ಅಧ್ಯಕ್ಷ ಜಗದಾಂಬಿಕಾ ಪಾಲ್ ಹುಬ್ಬಳ್ಳಿ ಭೇಟಿ ನಿಯಮಾವಳಿಗಳ ಉಲ್ಲಂಘನೆಯಾಗಿದೆ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ್ ಹೇಳಿದ್ದಾರೆ. ಬಿಜೆಪಿ ವಿರುದ್ಧ ತೀಕ್ಷ್ಣವಾಗಿ ವಾಗ್ದಾಳಿ ನಡೆಸಿದರು. ಅವರು ಸಮಿತಿ ಆಗಿ ಬಂದ ಹಾಗೆ ಕಾಣಿಸುತ್ತಿಲ್ಲ. ವಕ್ಫ್ ತಿದ್ದುಪಡಿ ವಿಚಾರವಾಗಿ ಸಮಿತಿ ಸದಸ್ಯರು ಕೂಡ ಅಕ್ಷೇಪ ಎತ್ತಿದ್ದಾರೆ. ಹೀಗಿರುವಾಗ ಸಮಿತಿಯಲ್ಲಿ ಏನೇ ಇದ್ರೂ ಕೂಡ ತೀರ್ಮಾನ ಆಗಿ ಹೋಗಬೇಕು. ಒಬ್ಬೊಬ್ಬರೇ ಹೋಗೋದು ಸರಿಯಲ್ಲ ಎಂದರು. ಸಂಸದೀಯ ಜಂಟಿ ಸಮಿತಿಯ ನಿಯಮ ಗಾಳಿಗೆ ತೂರಿ ಜಗದಾಂಬಿಕಾ ಪಾಲ್ ಒಬ್ಬರೇ ಹೋಗಿದ್ದಾರೆ. ಇದು ರಾಜಕೀಯ ಪ್ರೇರಿತವಾಗಿದೆ. ವಕ್ಫ್ ಬೋರ್ಡ್ ಅದಾಲತ್ ನಿಲ್ಲಿಸಲ್ಲ ಎಂಬ ವಿಚಾರದ ಬಗ್ಗೆ ಮಾಹಿತಿಯಿಲ್ಲ. ಯಾರಿಗೂ ಅನ್ಯಾಯ ಆಗಲ್ಲ. ಸರ್ಕಾರ ಇರೋದೇ ನ್ಯಾಯ ನೀಡುವುದಕ್ಕೆ ಎಂದರು.



**ರಾಜಕೀಯ ಆರೋಪ ಪ್ರತ್ಯಾರೋಪಕ್ಕೆ ಕಾರಣವಾದ ಭೇಟಿ**

ಇನ್ನು ಜಗದಾಂಬಿಕಾ ಪಾಲ್ ಅವರ ವಿಜಯಪುರ ಭೇಟಿ ರಾಜಕೀಯ ಆರೋಪ ಪ್ರತ್ಯಾರೋಪಕ್ಕೂ ಕಾರಣವಾಗಿದೆ. ಜಗದಾಂಬಿಕಾ ಭೇಟಿ ರಾಜಕೀಯ ಪ್ರೇರಿತ ಎಂಬ ಆರೋಪವನ್ನು ಕಾಂಗ್ರೆಸ್ ನಾಯಕರು ಮಾಡುತ್ತಿದ್ದಾರೆ. ಡಿಸಿಎಂ, ಡಿಕೆ.ಶಿವಕುಮಾರ್ ಹಾಗೂ ಗೃಹ ಸಚಿವ ಡಾ. ಜಿ ಪರಮೇಶ್ವರ್ ಕೂಡಾ ಪಾಲ್ ಅವರು ಜಂಟಿ ಸಂಸದೀಯ ಸಮಿತಿಯ ನಿಯಮ ಉಲ್ಲಂಘನೆ ಮಾಡಿದ್ದಾರೆ ಎಂದೂ ಆರೋಪ ಮಾಡಿದ್ದಾರೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರದ ಕಾರ್ಯವೈಖರಿ ವಿರುದ್ಧ ಹರಿಹಾಯ್ದಿದ್ದಾರೆ.

## ಕಾನೂನಿಗಿಂತ ದೊಡ್ಡವರು ಯಾರೂ ಇಲ್ಲ: ಸಚಿವ ಸೋಮಣ್ಣ

• **ಉದಯವಾಹಿನಿ, ಹುಬ್ಬಳ್ಳಿ**

'ಮುಡಾ ನಿವೇಶನ ಅಕ್ರಮ ಹಂಚಿಕೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾಯುಕ್ತ ವಿಚಾರಣೆ ಎದುರಿಸಿದ್ದು, ಕಾನೂನಿಗಿಂತ ದೊಡ್ಡವರು ಯಾರೂ ಇಲ್ಲ ಎನ್ನುವುದು ಇದರರ್ಥವಾಗಿದೆ' ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಅಭಿಪ್ರಾಯ ವ್ಯಕ್ತಪಡಿಸಿದರು. 'ಹಿಂದಿನ ಸಿದ್ದರಾಮಯ್ಯ ಈಗ ಉಳಿದಿಲ್ಲ. ಅವರಿಂದ ರಾಜ್ಯಕ್ಕೆ ಒಳಿತಾಗಲಿದೆ ಎನ್ನುವ ಯಾವ ವಿಶ್ವಾಸವೂ ಇಲ್ಲ. ರಾಜ್ಯದಲ್ಲಿ ಸರ್ಕಾರ ಇದೆಯೋ ಇಲ್ಲವೋ ಎನ್ನುವಂತಾಗಿದೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಇದ್ದು ಸತ್ತ ಹಾಗಾಗಿದೆ. ಅವರು ಪಂಜರದ ಗಿಳಿಯಾಗಿದ್ದು, ಸ್ವ ಇಚ್ಛೆಯಿಂದ ಒಂದೇ ಒಂದು ಅಭಿವೃದ್ಧಿ ಕಾರ್ಯ ಮಾಡಲು ಸಾಧ್ಯವಾಗುತ್ತಿಲ್ಲ. ಉಪಚುನಾವಣೆ ನಂತರ ಈ ಸರ್ಕಾರ ಇರುತ್ತದೆ ಎನ್ನುವ ನಂಬಿಕೆಯಿಲ್ಲ' ಎಂದರು. 'ರಾಜ್ಯಕ್ಕೆ ಜೆಪಿಸಿ ತಂಡ ಆಗಮಿಸುತ್ತಿರುವುದೇ ಅನಧಿಕೃತ' ಎನ್ನುವ ವಕ್ಫ್ ಸಚಿವ ಜಮೀರ ಅಹ್ಮದ್ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವ ಸೋಮಣ್ಣ, 'ಮೊದಲು ಅವರು ಕಾನೂನು ಅರಿತುಕೊಳ್ಳಲಿ. ಯಾಕಾಗಿ ಹೀಗೆ ಹೇಳಿಕೆ ಕೊಟ್ಟಿದ್ದಾರೋ ಗೊತ್ತಿಲ್ಲ. ಅವರಿಗೆ ಮುಸ್ಲಿಮರು ಮಾತ್ರವಲ್ಲ, ಎಲ್ಲಾ ಸಮುದಾಯದವರೂ ಮತ ಹಾಕಿದ್ದಾರೆ. ಮಂತ್ರಿಯಾಗಿ ಅವರು ಮೊದಲು ಮಾಡಲಿ. ಅದನ್ನೊಂದು ಬಿಟ್ಟು, ಉಳಿದದ್ದನ್ನೆಲ್ಲ ಮಾಡುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು.

## ಯೋಗೇಶ್ವರ್ 'ಮೆಗಾಸಿಟಿ ಕಳ್ಳ': ಆಡಿಯೋ ಬಿಡುಗಡೆ

• **ಉದಯವಾಹಿನಿ, ಬೆಂಗಳೂರು**

ಸಿ.ಪಿ ಯೋಗೇಶ್ವರ್ ಮೆಗಾಸಿಟಿ ಕಳ್ಳ ಎಂದು ಡಿ.ಕೆ ಸುರೇಶ್ ಮಾತನಾಡಿದ್ದಾರೆ ಎನ್ನಲಾದ ಆಡಿಯೋ ಒಂದನ್ನು ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ರಿಲೀಸ್ ಮಾಡಿದ್ದಾರೆ. ನಿನ್ನೆ ಕುಮಾರಸ್ವಾಮಿ ಆಡಿಯೋವನ್ನು ಡಿ.ಕೆ ಸುರೇಶ್ ಬಿಡುಗಡೆ ಮಾಡಿದ್ದರು. ಇದಕ್ಕೆ ಟಾಂಗ್ ನೀಡುವಂತೆ . ಸಿ.ಪಿ. ಯೋಗೇಶ್ವರ್ ಮೆಗಾಸಿಟಿ ಕಳ್ಳ ಎಂದು ಡಿ.ಕೆ ಸುರೇಶ್ ಮಾತನಾಡಿದ್ದಾರೆ ಎನ್ನಲಾದ ಆಡಿಯೋ ಒಂದನ್ನು ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ರಿಲೀಸ್ ಮಾಡಿದ್ದಾರೆ. ಚನ್ನಪಟ್ಟಣ ಉಪಚುನಾವಣೆ ಸಮೀಪಿಸುತ್ತಿದ್ದಂತೆ ಆಡಿಯೋ ವಾಗ್ದಾಳಿಗಳು ಹೆಚ್ಚಾಗುತ್ತಿದೆ. ಯೋಗೇಶ್ವರ್ ಬಗ್ಗೆ ಡಿಕೆ ಸುರೇಶ್ ಕಾರ್ಯಕರ್ತರ ಜೊತೆ ಮಾತನಾಡಿದ್ದಾರೆ ಎನ್ನಲಾದ ಆಡಿಯೋ ಬಿಡುಗಡೆ ಮಾಡಲಿದ್ದಾರೆ. ಮತದಾರರ ಬಳಿ ಹೆಚ್ಚಾಗಿ ಹೋಗಬಾರದು. ಮತದಾನಕ್ಕೆ ಕೆಲ ದಿನ ಇರುವಾಗ ಹೋಗಿ ಪ್ರಚಾರ ಮಾಡಬೇಕು ಎಂದು ಕುಮಾರಸ್ವಾಮಿ ಈ ಹಿಂದೆ ಹೇಳಿದ್ದ ಆಡಿಯೋವೊಂದನ್ನು ಡಿಕೆ ಸುರೇಶ್ ಬಹಿರಂಗಪಡಿಸಿ ಟೀಕಿಸಿದ್ದರು.

## ಕೇಳೋದು ದೊಡ್ಡದಾ? ರಾಜೀನಾಮೆ ಕೊಡಿಸೋದು ದೊಡ್ಡದಾ?

• **ಉದಯವಾಹಿನಿ, ಬೆಂಗಳೂರು**


ಅಶೋಕ್ ಕೇಳೋದು ದೊಡ್ಡದಾ? ನಾವು ರಾಜೀನಾಮೆ ಕೊಡಿಸೋದು ದೊಡ್ಡದಾ? ಎಂದು ಆರ್.ಅಶೋಕ್ ವಿರುದ್ಧ ಡಿಸಿಎಂ ಡಿಕೆ ಶಿವಕುಮಾರ್ ಲೇವಡಿ ಮಾಡಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಬ್ಬರು ಸಚಿವರ ರಾಜೀನಾಮೆಗೆ ವಿಪಕ್ಷ ನಾಯಕರ ಆರ್. ಅಶೋಕ್ ಒತ್ತಾಯ ವಿಚಾರವಾಗಿ ಪಾಪ ಅಶೋಕ್‌ಗೆ ರಾಜೀನಾಮೆ ಕೊಡಿಸೋಣ. ಅಶೋಕ್ ಕೇಳೋದು ದೊಡ್ಡದಾ? ನಾವು ರಾಜೀನಾಮೆ ಕೊಡಿಸೋದು ದೊಡ್ಡದಾ? ಕೊಡೋಣ ಎಂದು ತಿರುಗೇಟು ಕೊಟ್ಟಿದ್ದಾರೆ. ಸಚಿವ ತಿಮ್ಮಾಪುರ್ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿರುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಯಾರು ಬೇಕಾದರೂ ರಾಜ್ಯಪಾಲರಿಗೆ ಪತ್ರ ಬರೆದು ತನಿಖೆ ಮಾಡಿ ಎಂದು ದೂರು ಕೊಡಬಹುದು. ಹಿಂದೆಯೂ ನೂರಾರು ದೂರುಗಳು ಬಂದಿತ್ತು. ಈಗ ಸ್ವಲ್ಪ ವಿಶೇಷವಾಗಿ ಹೊರಟಿದ್ದಾರೆ. ಇದೆಲ್ಲ ಬರೀ ರಾಜಕೀಯದ ಬಣ್ಣ ಅಷ್ಟೆ ಎಂದು ಕಿಡಿಕಾರಿದರು.

## ಜಮೀರ್‌ಗೆ ಥ್ಯಾಂಕ್ಸ್ ಹೇಳಬೇಕು; ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯ

### ವಕ್ಫ್ ಬೋರ್ಡ್ ಮುಖಾಂತರ ಹೇಗೆಲ್ಲ ಮೋಸ ಮಾಡಲಾಗುತ್ತದೆ ಎಂದು ತಿಳಿಯಲು ಅನುಕೂಲವಾಗಿದೆ'

• **ಉದಯವಾಹಿನಿ, ಹುಬ್ಬಳ್ಳಿ**

'ನೂರಾರು ವರ್ಷಗಳ ಹಿಂದಿನ ಆಸ್ತಿಯನ್ನು ವಕ್ಫ್ ಆಸ್ತಿಯಾಗಿ ಮಾಡಲು ಹೊರಟಿದ್ದ ಕಾಂಗ್ರೆಸ್ ಸರ್ಕಾರದ ಒಳಸಂಚನ್ನು ಸಚಿವ ಜಮೀರ್ ಅಹ್ಮದ್ ಖಾನ್ ಬಯಲು ಮಾಡಿದ್ದಾರೆ. ಅದಕ್ಕಾಗಿ ಅವರಿಗೊಂದು ಥ್ಯಾಂಕ್ಸ್ ಹೇಳಬೇಕು' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದರು. 'ಜನರ ಆಸ್ತಿಗಳನ್ನು ಒಂದೊಂದಾಗಿ ತನ್ನ ಆಸ್ತಿಯನ್ನಾಗಿ ಮಾಡಲು ವಕ್ಫ್ ಹೊರಟಿತ್ತು. ಮುಂದೊಂದು ದಿನ ದೊಡ್ಡ ಸಮಸ್ಯೆಯಲ್ಲಿ ಸಿಲುಕುತ್ತಿದ್ದ ರಾಜ್ಯದ ಜನರನ್ನು ಇವತ್ತು ಜಮೀರ್ ನೋಟಿಸ್ ಕೊಡಿಸುವ ಮೂಲಕ ಎಚ್ಚರಿಸಿದ್ದಾರೆ' ಎಂದು ವ್ಯಂಗ್ಯವಾಡಿದರು.



'300–400 ವರ್ಷಗಳ ಹಿಂದಿನ ಆಸ್ತಿಯನ್ನು ಇವತ್ತು ವಕ್ಫ್ ಆಸ್ತಿ ಎಂದು ಆರ್.ಟಿ.ಸಿ.ಯಲ್ಲಿ ನಮೂದಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಇದು ಹಿಂದೂ– ಮುಸ್ಲಿಂ ಸಮಸ್ಯೆಯಲ್ಲ. ಕಾಂಗ್ರೆಸ್ ಹುಟ್ಟುಹಾಕಿರುವ ಸಮಸ್ಯೆ' ಎಂದರು. '1974ರ ಗೆಜೆಟ್ ಆಧಾರದ ಮೇಲೆ ಆರ್.ಟಿ.ಸಿ ದಾಖಲೆಗಳನ್ನು ಬದಲಾಯಿಸಲಾಗುತ್ತಿದೆ. ಮಠ, ಮಂದಿರ, ದೇವಸ್ಥಾನ ಹಾಗೂ ರೈತರ ಜಮೀನುಗಳ ಮಾಲೀಕತ್ವವನ್ನು ಬದಲಾಯಿಸಲಾಗುತ್ತಿದೆ. ದೇಶ ಸ್ವಾತಂತ್ರ್ಯಗೊಂಡಾಗ 800 ಪ್ರಾಂತಗಳಿದ್ದವು. ಅವುಗಳನ್ನು ಒಂದುಗೂಡಿಸಲಾಯಿತು. ಆದರೆ, ವಕ್ಫ್ ಆಸ್ತಿಗಳನ್ನು ಏಕೆ ಹೊರಗಿಡಲಾಯಿತು?' ಎಂದು ಪ್ರಶ್ನಿಸಿದರು.

**ಅನ್ಯಾಯ ಅರಿಯಲು ಅನುಕೂಲ**

'ವಕ್ಫ್ ತಿದ್ದುಪಡಿ ಪರಿಶೀಲನೆಗೆ ರಚನೆ ಮಾಡಲಾಗಿರುವ ಸಂಸದೀಯ ಜಂಟಿ ಸಮಿತಿ ರಾಜ್ಯಕ್ಕೆ ಬಂದಿರುವುದರಿಂದ ವಕ್ಫ್ ಬೋರ್ಡ್ ಮುಖಾಂತರ ಹೇಗೆಲ್ಲ ಮೋಸ ಮಾಡಲಾಗುತ್ತದೆ ಎಂದು ತಿಳಿಯಲು ಅನುಕೂಲವಾಗಿದೆ' ಎಂದು ಬಿಜೆಪಿ ಮುಖಂಡ ಪ್ರತಾಪ್ ಸಿಂಹ ಹೇಳಿದರು. 'ವಕ್ಫ್ ಕಾಯ್ದೆಗೆ ತಿದ್ದುಪಡಿ ತರಬೇಕು ಎನ್ನುವುದು ಕೇಂದ್ರ ಸರ್ಕಾರದ ಮುಂದಿದ್ದು, ಆ ಕುರಿತು ವರದಿ ನೀಡುವಂತೆ ಸಂಸತ್ತಿನ ಜಂಟಿ ಸಮಿತಿಗೆ ಶಿಫಾರಸ್ಸು ಮಾಡಲಾಗಿದೆ. ಸಮಿತಿ ಅಧ್ಯಕ್ಷ ಜಗದಾಂಬಿಕಾ ಪಾಲ್ ನೇತೃತ್ವದ ತಂಡ ರಾಜ್ಯಕ್ಕೆ ಬಂದಿರುವುದರಿಂದ , ವಕ್ಫ್ ಬೋರ್ಡ್ ಮುಖಾಂತರ ಹೇಗೆಲ್ಲ ಅನ್ಯಾಯವಾಗುತ್ತಿದೆ ಎಂದು ರೈತರಿಗೆ ಹೇಳಿಕೊಳ್ಳಲು ಅವಕಾಶ ಸಿಗುತ್ತದೆ. ವಕ್ಫ್ ಬೋರ್ಡ್‌ನಿಂದ ಆಸ್ತಿ ಕಬಳಿಸಲು ಯತ್ನ, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅದಕ್ಕೆ ಕುಮ್ಮಕ್ಕು ನೀಡುತ್ತಿರುವುದು ಹೀಗೆ ಎಲ್ಲಾವನ್ನೂ ಸಮಿತಿ ಎದುರು ದಾಖಲೆ ಸಮೇತ ಬಿಚ್ಚಿಡಬಹುದು' ಎಂದರು. 'ಪಕ್ಷದ ಮುಖಂಡ ಬಸನಗೌಡ ಪಾಟೀಲ ಯತ್ನಾಳ ಅವರು ವಿಜಯಪುರದಲ್ಲಿ ಧರಣಿ ಕೈಗೊಂಡು ಜನರ ಪರವಾಗಿ ಧ್ವನಿ ಎತ್ತಿದ್ದರು. ಅದರ ಪರಿಣಾಮ ಕೇಂದ್ರದ ಸಮಿತಿ ರಾಜ್ಯಕ್ಕೆ ಬಂದಿದೆ. ಭೂಮಿ ಕಳೆದುಕೊಳ್ಳುವ ಅಪಾಯ ಎದುರಿಸುತ್ತಿರುವವರಿಗೆ ಇದರಿಂದ ನ್ಯಾಯ ಸಿಗಲಿದೆ. ಮುಂದಿನ ಅಧಿವೇಶನದಲ್ಲಿ ತಿದ್ದುಪಡಿ ಕಾಯ್ದೆ ಚರ್ಚೆಗೆ ಬರುವ ಸಾಧ್ಯತೆಯಿದ್ದು, ವಕ್ಫ್ ಬೋರ್ಡ್‌ನಿಂದ ಆಗುತ್ತಿರುವ ಅನ್ಯಾಯದ ಕುರಿತು ಸಹ ಚರ್ಚೆಯಾಗಬಹುದು' ಎಂದು ಹೇಳಿದರು.

'ಮುಡಾ ನಿವೇಶನ ಅಕ್ರಮ ಹಂಚಿಕೆ ಕುರಿತು ಲೋಕಾಯುಕ್ತ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿಚಾರಣೆ ನಡೆಸಿದೆ.

ಆರೋಪ ಬಂದಾಗ ವಿಚಾರಣೆಗೆ ಹೋಗಲೇ ಬೇಕಾಗುತ್ತದೆ. ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ, ಮುಖ್ಯಮಂತ್ರಿಯಾದರೂ ತಲೆ ಬಾಗಲೇಬಾಕಾಗುತ್ತದೆ' ಎಂದು ಪ್ರತಾಪ ಸಿಂಹ ಹೇಳಿದರು.

> ವಕ್ಫ್ ಮಂಡಳಿಯ ಆಟಾಟೋಪ ತಡೆಗಟ್ಟುವ ಉದ್ದೇಶದಿಂದಲೇ ಪ್ರಧಾನಿ ನರೇಂದ್ರ ಮೋದಿ ಅವರು ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಹೊರಟಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಯಾವ ರೀತಿ ತಿದ್ದುಪಡಿ ಮಾಡಬೇಕೆಂದು ವರದಿ ನೀಡುವಂತೆ ಜಂಟಿ ಸಂಸದೀಯ ಸಮಿತಿಯನ್ನು 3 ತಿಂಗಳ ಹಿಂದೆ ರಚಿಸಿದ್ದಾರೆ. ಕರ್ನಾಟಕವೂ ಸೇರಿದಂತೆ ದೇಶದ ವಿವಿಧ ರಾಜ್ಯಗಳಿಗೆ ಭೇಟಿ ನೀಡಿ, ಅಹವಾಲುಗಳನ್ನು ಆಲಿಸಲಾಗುತ್ತಿದೆ'
>
> –ತೇಜಸ್ವಿ ಸೂರ್ಯ, ಸಂಸದ

## 'ಕೈ' ಬಳಿ ಅಭಿವೃದ್ಧಿಗೆ ಹಣವಿಲ್ಲ; ಶಾಸಕರದ್ದು ಆತ್ಮಹತ್ಯೆ ಸ್ಥಿತಿ: ವಿಜಯೇಂದ್ರ

- ಶಾಲಾ–ಕಾಲೇಜು, ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಸರ್ಕಾರದ ಬಳಿ ಹಣವಿಲ್ಲ
- ಶಾಸಕರ ಕ್ಷೇತ್ರಗಳ ಅಭಿವೃದ್ಧಿಗೆ ಹಣ ಕೊಡುತ್ತಿಲ್ಲ

• **ಉದಯವಾಹಿನಿ, ಶಿಗ್ಗಾಂವಿ**


'ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 2 ವರ್ಷ ಸಮೀಪಿಸಿದರೂ ಯಾವುದೇ ಹೊಸ ಯೋಜನೆ ಘೋಷಿಸಿಲ್ಲ. ವಿಧಾನಸಭಾ ಕ್ಷೇತ್ರಗಳಿಗೂ ಅನುದಾನ ನೀಡಿಲ್ಲ. ಶಾಸಕರೇ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ಬಂದಿರುವುದಾಗಿ ಕಾಂಗ್ರೆಸ್‌ನ ಶಾಸಕ ರಾಜು ಕಾಗೆ ಹೇಳುತ್ತಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಾಗ್ದಾಳಿ ನಡೆಸಿದರು.

ಶಿಗ್ಗಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸವಣೂರು ಮತ್ತು ಬಂಕಾಪುರದಲ್ಲಿ ಬುಧವಾರ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಪರ ಮತಯಾಚಿಸಿ ಮಾತನಾಡಿದ ಅವರು, 'ಶಾಲಾ–ಕಾಲೇಜು, ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಸರ್ಕಾರದ ಬಳಿ ಹಣವಿಲ್ಲ. 15 ಬಜೆಟ್ ಮಂಡಿಸಿರುವುದಾಗಿ ಹೇಳುವ ಸಿದ್ದರಾಮಯ್ಯ, ಶಾಸಕರ ಕ್ಷೇತ್ರಗಳ ಅಭಿವೃದ್ಧಿಗೆ ಹಣ ಕೊಡುತ್ತಿಲ್ಲ. ಸರ್ಕಾರಿ ನೌಕರರಿಗೆ ಸಂಬಳ ನೀಡುತ್ತಿಲ್ಲ. ಸರ್ಕಾರವು ಎಲ್ಲಾವನ್ನೂ ದಿವಾಳಿ ಮಾಡುತ್ತಿದೆ' ಎಂದರು.

**ಸರ್ಕಾರವು ಎಲ್ಲಾವನ್ನೂ ದಿವಾಳಿ ಮಾಡುತ್ತಿದೆ**

'ದೇಶದ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ನರೇಂದ್ರ ಮೋದಿ ಅವರ ಬಗ್ಗೆ ಸಿದ್ದರಾಮಯ್ಯ ಟೀಕಿಸುತ್ತಾರೆ. ರೈತರು ಹಾಗೂ ಬಡವರ ಪರ ಹೋರಾಟ ನಡೆಸಿದ್ದ ಬಿ.ಎಸ್. ಯಡಿಯೂರಪ್ಪ ಅವರ ಬಗ್ಗೆಯೂ ನಾಲಿಗೆ ಹರಿಬಿಡುತ್ತಾರೆ. ಮುಡಾ ಹಗರಣದಲ್ಲಿ ಆರೋಪಿ ಸ್ಥಾನದಲ್ಲಿರುವ ಸಿದ್ದರಾಮಯ್ಯ, ಯಡಿಯೂರಪ್ಪ ಬಗ್ಗೆ ಮಾತನಾಡುವಾಗ ಎಚ್ಚರಿಕೆಯಿಂದ ಇರಬೇಕು' ಎಂದರು. 'ದೇಶಕ್ಕೆ ಕರ್ನಾಟಕ ಮಾದರಿ ಎಂಬುದಾಗಿ ಸಿದ್ದರಾಮಯ್ಯ ಹೇಳುತ್ತಾರೆ. ಅವರಿಗೆ ನಾಚಿಕೆಯಾಗಬೇಕು. ಬೆಂಗಳೂರು, ದಾವಣಗೆರೆ ಸೇರಿ ಹಲವೆಡೆ ಗುತ್ತಿಗೆದಾರರಿಗೆ ಹಣ ಕೊಟ್ಟಿಲ್ಲ. ಅವರೆಲ್ಲರೂ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ಬಂದಿದೆ. ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಪಿ.ಎ ಸಹ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಅವರು ಹೇಳಿದರು.

'ಸಿದ್ದರಾಮಯ್ಯ ಹಾಗೂ ಕುಟುಂಬದವರು ಮುಡಾ ಹಗರಣ ಮಾಡಿದರು. ವಾಲ್ಮೀಕಿ ಸಮುದಾಯದ ಅಭಿವೃದ್ಧಿಗೆ ಇರಿಸಿದ್ದ ಹಣವನ್ನು ಲೂಟಿ ಮಾಡಿ, ಲೋಕಸಭಾ ಚುನಾವಣೆಗೆ ಖರ್ಚು ಮಾಡಿದರು. ಈಗ ಮುಡಾ ಬಗ್ಗೆ ಲೋಕಾಯುಕ್ತ ತನಿಖೆ ನಡೆಯುತ್ತಿದ್ದು, ಸದ್ಯದಲ್ಲೇ ಮುಖ್ಯಮಂತ್ರಿಗೆ ಕ್ಲಿನ್‌ಚಿಟ್ ಕೊಡಲಿದೆ. ಇದೇ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ಮಾಡುತ್ತಿದೆ. ಭ್ರಷ್ಟಾಚಾರದ ಮುಖವಾಡ ಹೊರಗೆ ಬೀಳುತ್ತಿದೆ' ಎಂದು ವಿಜಯೇಂದ್ರ ತಿಳಿಸಿದರು.



> ಅದೃಷ್ಟದ ಮುಖ್ಯಮಂತ್ರಿ ಸಿದ್ದರಾಮಯ್ಯ 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತರು, ಬಡವರ ಪರ ಹೋರಾಟ ಮಾಡಿಲ್ಲ. ಅವರೊಬ್ಬ ಅದೃಷ್ಟದ ಮುಖ್ಯಮಂತ್ರಿ. ಆದರೆ, ಯಡಿಯೂರಪ್ಪ ಅವರು 30-40 ವರ್ಷಗಳ ಜನಪರ ಹೋರಾಟದ ಮೂಲಕವೇ ಮುಖ್ಯಮಂತ್ರಿಯಾಗಿದ್ದರು. ಸರ್ವಜನಾಂಗದ ಜನರಿಗಾಗಿ, ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಘೋಷಣೆಯೊಂದಿಗೆ ಆಡಳಿತ ನಡೆಸಿದರು.
>
> -ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

### 15000 ರೈತರ ಜಮೀನು ಕಬಳಿಸಲು ರಾಜ್ಯ ಸರ್ಕಾರ ಹುನ್ನಾರ

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಅವರ ಬಗ್ಗೆ ಮಾತನಾಡುವ ನೈತಿಕತೆ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಮುಖಂಡರಿಗಿಲ್ಲ'ವಕ್ಫ್ ಆಸ್ತಿ ಹೆಸರಿನಲ್ಲಿ ರಾಜ್ಯದಲ್ಲಿರುವ 15000 ರೈತರ ಜಮೀನು ಕಬಳಿಸಲು ರಾಜ್ಯ ಸರ್ಕಾರ ಹುನ್ನಾರ ನಡೆಸುತ್ತಿದೆ. ಒಂದಿಂಚು ಭೂಮಿ ಕಬಳಿಸಲು ಬಿಜೆಪಿ ಅವಕಾಶ ನೀಡುವುದಿಲ್ಲ. ರೈತರ ಪರ ನಿಂತು ಹೋರಾಟ ಮಾಡುತ್ತೇವೆ' ಎಂದು ಬಿ.ವೈ. ವಿಜಯೇಂದ್ರ ಎಚ್ಚರಿಕೆ ನೀಡಿದರು.

**ಈ ದಿನದ ದರ** ಪೆಟ್ರೋಲ್: 103.44 ₹/L | ಡೀಸೆಲ್ : 89.97 ₹/L | ಬಂಗಾರ: ₹7,856/Gram24ct ₹7,200/Gram22ct | ಬೆಳ್ಳಿ: ₹93.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

## ನೀವೂ ಹಾಗಾಗಬಹುದಲ್ಲ!

ಅದು ಬಹುಶಃ 2008. ಚಾಮರಾಜಪೇಟೆಯ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿದ್ದೆವು. ಇಂಚಲದಲ್ಲಿರುವ ಇಂದಿನ ಪೂರ್ಣಾನಂದ ಭಾರತೀ ಅಂದು ಕಲ್ಮೇಶ, ನಾನು ಪ್ರಭುಲಿಂಗದೇವರು. ಸಂನ್ಯಾಸಿಗಳು ಬೆಳ್ಳಿ ಬಂಗಾರದ ಸಿಂಹಾಸನದಲ್ಲಿ ಕೂಡ್ರುವುದನ್ನು ಕಿರೀಟಾದಿಗಳನ್ನು ಧರಿಸುವುದನ್ನು ವಿರೋಧಿಸುತ್ತಿದ್ದೆ, ಈಗಲೂ ಸಹ. ಇಂಥದೊಂದು ಸಂದರ್ಭದಲ್ಲಿ ಕಲ್ಮೇಶರು ನನಗೆ ಹೇಳಿದ ಮಾತು ನೀವೂ ಹಾಗಾಗಬಹುದಲ್ಲ!. ಅವರ ಮಾತಿನ ಅಭಿಪ್ರಾಯ ಪೂಜ್ಯ ಸ್ಥಾನಕ್ಕೇರಿದರೆ ಅದು ತಾನಾಗಿ ಬರುತ್ತೆ. ನಿಮಗೂ ಬೇಕೆಂದರೆ ಆ ಸ್ಥಾನಕ್ಕೇರಿ. ಕೈಗೆಟುಕದ ದ್ರಾಕ್ಷಿ ಹುಳಿ ಎನ್ನಬೇಡಿ ಎಂದು. ನಿಜ, ಗೌರವಗಳು ಯೋಗ್ಯತೆಯನ್ನರಸುತ್ತವೆ. ಗುಣಾಃ ಪೂಜಾಸ್ಥಾನಂ ಗುಣಿಷು ನಚ ಲಿಂಗಂ ನಚ ವಯಃ = ಗುಣವಂತರಲ್ಲಿ ಗುಣಗಳು ಪೂಜ್ಯವಾಗುತ್ತವೆ, ಗಂಡು ಹೆಣ್ಣು ವಯಸ್ಸು ಮುಂತಾದವು ಮುಖ್ಯವಾಗುವುದಿಲ್ಲ. ಆದರೆ ಗುಣವಂತರಲ್ಲದವರ ನಡುವೆ ಇನ್ನಾವವೋ ಪೂಜ್ಯತೆ ಹೊಂದುತ್ತವೆ. ಮಾತ್ರವಲ್ಲ ಚಿನ್ನಾಭರಣಾದಿಗಳೇ ಗೌರವಸೂಚಕಗಳಲ್ಲ. ಜಗತ್ತು ನಶ್ವರವೆಂದು ತಿಳಿದು ತ್ಯಾಗಸೂಚಕ ಕಾವೀಧಾರಿಗಳಾದ ಬಳಿಕ, ಇತರರಿಗೂ ನಶ್ವರತೆಯನ್ನು ಬೋಧಿಸಿದ ಬಳಿಕ ಸಂನ್ಯಾಸಿಗಳು ಆ ವ್ಯಾಮೋಹದಿಂದ ಹೊರಬರಬೇಕು. ಭಕ್ತರೇ ಇಂಥದ್ದಕ್ಕೆ ಮುಂದಾದರೂ ತಿಳಿಯದವರಿಗೆ ತಿಳಿಹೇಳಬೇಕಾದವರು ತಿಳಿಹೇಳಬೇಕು, ಭಕ್ತರು ಹೇಳಿದರೆಂದು ಮಾಡಬಾರದ್ದನ್ನು ಮಾಡಿ ಭಕ್ತರ ಮೇಲೆ ಹೊರಿಸಲಾಗದು ಎಂಬುದು ನನ್ನ ಅಭಿಪ್ರಾಯ. ಸ್ವಾಮಿ ವಿವೇಕಾನಂದರು ಸಿದ್ಧೇಶ್ವರ ಸ್ವಾಮಿಗಳು ಉದಾಹರಣೆ.

## ರಾಗಿ ಕಟಾವು ಯಂತ್ರಕ್ಕೆ ಹೆಚ್ಚುವರಿ ಹಣ ಪಡೆದರೆ ಕಾನೂನು ಕ್ರಮ ಫಿಕ್ಸ್!

• ಉದಯವಾಹಿನಿ, ಬೆಂಗಳೂರು

ಮುಂಗಾರು ಹಂಗಾಮಿನಲ್ಲಿ ರಾಗಿ ಬೆಳೆಯು 69,230 ಹೆಕ್ಟೇರ್ ಪ್ರದೇಶದಲ್ಲಿ ಆವರಿಸಿದ್ದು, ಬಹುತೇಕ ರಾಗಿ ಬೆಳೆಯು ತೆನೆ ತುಂಬುವ, ಕಟಾವು ಹಂತದಲ್ಲಿರುತ್ತದೆ. ಜಿಲ್ಲೆಯ ಬಹುತೇಕ ರೈತರು ರಾಗಿ ಬೆಳೆಯನ್ನು ಕಟಾವು ಯಂತ್ರಗಳ ಮೂಲಕ ಕಟಾವು ಕೈಗೊಳ್ಳುತ್ತಿದ್ದು, ಖಾಸಗಿ ರಾಗಿ ಕಟಾವು ಯಂತ್ರಗಳ ಮಾಲಿಕರು ರೈತರಿಂದ ಪ್ರತಿ ಗಂಟೆಗೆ 3500 ರೂಗಳಿಂದ 4000 ರೂಗಳ ವರೆಗೆ ಬಾಡಿಗೆ ಹಣ ಪಡೆಯುತ್ತಿರುವ ಬಗ್ಗೆ ಜಿಲ್ಲೆಯ ರೈತರುಗಳಿಂದ ದೂರು ಬಂದಿರುತ್ತದೆ. ಇದರಿಂದ ರೈತರಿಗೆ ಹೆಚ್ಚಿನ ಆರ್ಥಿಕ ಹೊರೆಯಾಗಲಿದೆ. ಪ್ರಸ್ತುತ ಇಂಧನ ವೆಚ್ಚ ಹಾಗೂ ಕಾರ್ಮಿಕರ ಕೂಲಿ ವೆಚ್ಚ ಹೆಚ್ಚಾಗಿದ್ದು, ಇತರೇ ನಿರ್ವಹಣೆ ವೆಚ್ಚಗಳನ್ನು ಪರಿಗಣಿಸಿ ರಾಗಿ ಕಟಾವು ಮಾಡಲು ಯಂತ್ರಕ್ಕೆ ಕಳೆದ ವರ್ಷ ನಿರ್ಧರಿಸಿದಂತೆ, ಪ್ರತಿ ಗಂಟೆಗೆ ನ್ಯೂ ಹಾಲೆಂಡ್/ ಜಾನ್ಡೀರ್ ಕಂಪನಿಯ ದೊಡ್ಡ ಕಟಾವು ಯಂತ್ರಕ್ಕೆ ಗಂಟೆಗೆ 3350 ರೂಗಳು ಹಾಗೂ ಕ್ಲಾಸ್ ಮತ್ತು ಎಸಿಸಿ ಕಂಪನಿಯ ಕಟಾವು ಯಂತ್ರಕ್ಕೆ ಗಂಟೆಗೆ 2700 ರೂಗಳು ಮೀರದಂತೆ ಬಾಡಿಗೆಯನ್ನು ನಿಗದಿಪಡಿಸಿದೆ. ತಪ್ಪಿದ್ದಲ್ಲಿ ರಾಗಿ ಕಟಾವು ಯಂತ್ರದ ಮಾಲೀಕರ ವಿರುದ್ಧ ವಿಪತ್ತು ನಿರ್ವಹಣೆ ಕಾಯ್ದೆ 2005ರ ಪ್ರಕಾರ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಎನ್ ಶಿವಶಂಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸರ್ಕಾರಿ ಕಚೇರಿ ಆವರಣದಲ್ಲಿ ಗುಟ್ಕಾ.. ಸಿಗರೇಟ್ ಸೇವನೆ ಬಂದ್

• ಉದಯವಾಹಿನಿ, ಬೆಂಗಳೂರು

ಸರ್ಕಾರಿ ಕಚೇರಿ ಆವರಣಗಳಲ್ಲಿ ಧೂಮಪಾನ ಹಾಗೂ ತಂಬಾಕು ಪದಾರ್ಥಗಳ ಸೇವನೆ ಮತ್ತು ಮಾರಾಟವನ್ನು ನಿಷೇಧಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ ಸಿಬ್ಬಂದಿ, ಆಡಳಿತ ಸುಧಾರಣಾ ಇಲಾಖೆ ಈ ಮಹತ್ವದ ಆದೇಶವನ್ನು ಹೊರಡಿಸಿದ್ದು ಎಲ್ಲಾ ಸರ್ಕಾರಿ ಕಚೇರಿಯ ಆವರಣದಲ್ಲೂ ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ. ತಂಬಾಕು ಸೇವನೆ, ಧೂಮಪಾನ ದಿಂದ ಅನಾರೋಗ್ಯ ಉಂಟಾಗಲಿದ್ದು ಸಾರ್ವಜನಿಕ ಪ್ರದೇಶದಲ್ಲಿ ಜನರ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಈ ಸೂಚನೆ ನೀಡಲಾಗಿದೆ ನೋಟಿಫಿಕೇಶನ್ ಉಲ್ಲೇಖಿಸಿರುವಂತೆ ಧೂಮಪಾನ, ತಂಬಾಕಿನ ಇತರ ಉತ್ಪನ್ನಗಳ ಸೇವನೆಯು ಆರೋಗ್ಯಕ್ಕೆ ಮಾರಕವಾಗಿದ್ದು, ಸಾರ್ವಜನಿಕ ಪ್ರದೇಶಗಳಲ್ಲಿ ಇಂತಹ ಉತ್ಪನ್ನಗಳ ಸೇವನೆಯನ್ನು ಸಿಗರೇಟುಗಳು, ಇತರ ತಂಬಾಕು ಉತ್ಪನ್ನಗಳು (ಜಾಹೀರಾತು ನಿಷೇಧ ಮತ್ತು ವ್ಯಾಪಾರ, ವಾಣಿಜ್ಯ ನಿಯಂತ್ರಣ, ಉತ್ಪಾದನೆ, ಸರಬರಾಜು, ವಿತರಣೆ) ಕಾಯಿದೆ, 2003 (ಕೇಂದ್ರ ಅಧಿನಿಯಮ 34/2003)ರಲ್ಲಿ ಸಂಪೂರ್ಣವಾಗಿ ನಿಷೇಧಿಸಿ ಆದೇಶ ಹೊರಬಿದ್ದಿದೆ.

## ಕೆಆರ್ ಪುರಂನಲ್ಲಿ ಈಚರ್ ವಾಹನ ಧಗಧಗ! ಅಗ್ನಿ ಅನಾಹುತದಿಂದ ಟ್ರಾಫಿಕ್ ಜಾಮ್

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರಿನ ಕೆಆರ್ ಪುರಂ ನಲ್ಲಿ ಭೀಕರ ಅಗ್ನಿ ಅವಘಡ ಸಂಭವಿಸಿದೆ. ಕೆಆರ್ ಪುರಂ ರಸ್ತೆಯಲ್ಲಿ ಸಾಗುತ್ತಿದ್ದ ಈಚರ್ ವಾಹನದಲ್ಲಿ ಧಿಡೀರ್ ಬೆಂಕಿ ಕಾಣಿಸಿಕೊಂಡಿದ್ದು,ಅಗ್ನಿ ಅವಘಡಕ್ಕೆ ವಾಹನ ಸಂಪೂರ್ಣ ಸುಟ್ಟು ಭಸ್ಮವಾಗಿದೆ. ರಾಷ್ಟ್ರೀಯ ಹೆದ್ದಾರಿಯ 75ರ ಕಾಟಂ ನಲ್ಲೂರಿನಲ್ಲಿ ಘಟನೆ ನಡೆದಿದ್ದು, ಕಾಟನ್ ಬಾಕ್ಸ್ ಸಾಗಿಸುತ್ತಿದ್ದ ವಾಹನ ಸಂಪೂರ್ಣ ಅಗ್ನಿಗೆ ಆಹುತಿಯಾಗಿದೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಅಗ್ನಿ ಶಾಮಕದಳದಿಂದ ಬೆಂಕಿ ನಂದಿಸಲಾಯ್ತು. ಬೆಂಕಿ ಅನಾಹುತದಿಂದ ಕೆಲಕಾಲ ಟ್ರಾಫಿಕ್ ಸಮಸ್ಯೆ ಉಂಟಾಗಿತ್ತು.ಅರ್ಧ ಗಂಟೆಗೂ ಹೆಚ್ಚು ಕಾಲ ಬೆಂಕಿ ನಂದಿಸುವ ಕಾರ್ಯ ಪ್ರಗತಿಯಲ್ಲಿತ್ತು. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಸ್ಥಳೀಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಮತ್ತೆ ಬುಲ್ಡೋಜರ್ ಸದ್ದು : 200 ಕ್ಕೂ ಹೆಚ್ಚು ಮನೆ ನೆಲಸಮ ಮಾಡಿದ ಬಿಡಿಎ!

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಮತ್ತೆ ಬುಲ್ಡೋಜರ್ ಸದ್ದು ಮಾಡಿದ್ದು, ಬಿಡಿಎ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) 200ಕ್ಕೂ ಹೆಚ್ಚು ಮನೆ ನೆಲಸಮ ಮಾಡಿದೆ. ಗೊರಗುಂಟೆಪಾಳ್ಯದ ಆಶ್ರಯ ಬಡಾವಣೆಯಲ್ಲಿ ಸುಮಾರು 200 ಕ್ಕೂ ಹೆಚ್ಚು ಮನೆ ನೆಲಸಮ ಮಾಡಿದೆ. ಅಕ್ರಮವಾಗಿ ಕಟ್ಟಿಕೊಂಡಿದ್ದ ಮನೆಗಳನ್ನು ಬಿಡಿಎ ನೆಲಸಮ ಮಾಡಿದೆ. ಹಾಗೂ ಜಾಗ ಖಾಲಿ ಮಾಡುವಂತೆ ಜನರಿಗೆ ಅಧಿಕಾರಿಗಳು ಸೂಚನೆ ನೀಡಿದ್ದಾರೆ. ಯಾವುದೇ ನೋಟಿಸ್ ನೀಡದಂತೆ ಏಕಾಏಕಿ ನಮ್ಮ ಮನೆಯನ್ನು ನೆಲಸಮ ಮಾಡಿದ್ದಾರೆ ಎಂದು ನಿವಾಸಿಗಳು ಬಿಡಿಎ ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರ ಹಾಕಿದ್ದಾರೆ.

## ಬೆಳ್ಳಂಬೆಳಗ್ಗೆ ದೆಹಲಿ, ಮುಂಬೈ ಮೂಲದ ಕಂಪನಿಗಳ ಐಟಿ ದಾಳಿ!

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ದೆಹಲಿ ಹಾಗೂ ಮುಂಬೈ ಮೂಲದ ಹಲವು ಕಂಪನಿಗಳ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ದೆಹಲಿ ಹಾಗೂ ಮುಂಬೈ ಶಾಖೆಯ ಅಧಿಕಾರಿಗಳಿಂದ ದಾಳಿ ನಡೆದಿದೆ. ಕಂಪನಿಗಳ ಮಹತ್ವದ ದಾಖಲೆಗಳನ್ನು ಅಧಿಕಾರಿಗಳು ಪರಿಶೀಲನೆ ನಡೆಯುತ್ತಿದ್ದಾರೆ. ಆದಾಯ ತೆರಿಗೆ ಇಲಾಖೆಯ ದೆಹಲಿ ಹಾಗೂ ಮುಂಬೈ ಶಾಖೆಯ ಅಧಿಕಾರಿಗಳಿಂದಲೇ ದಾಳಿ ನಡೆದಿದೆ.

# ರಾಜ್ಯ ಸರ್ಕಾರದಿಂದ ಮಾರ್ಗಸೂಚಿ ಪ್ರಕಟ!

## ಸರ್ಕಾರದ ವಿವಿಧ ಕಾರ್ಯಕ್ರಮಗಳಿಗೆ 2025–26ನೇ ಸಾಲಿಗೆ ಅನುದಾನ ಹಂಚಿಕೆ

• ಉದಯವಾಹಿನಿ, ಬೆಂಗಳೂರು

ಶಿಕ್ಷಣ ಇಲಾಖೆ ಸೇರಿದಂತೆ ಜಿಲ್ಲಾ ವಲಯ ಕಾರ್ಯಕ್ರಮಗಳಿಗೆ 2025–26 ನೇ ಸಾಲಿಗೆ ಅನುದಾನ ಹಂಚಿಕೆ ಮಾಡುವ ಕುರಿತು ರಾಜ್ಯ ಸರ್ಕಾರ ಮಾರ್ಗಸೂಚಿ ಹೊರಡಿಸಿದೆ.

1. ವಿವಿಧ ಲೆಕ್ಕಶೀರ್ಷಿಕೆ/ವಿವಿಧ ಕಾರ್ಯಕ್ರಮಗಳಡಿ ಬರುವ ಅಧಿಕಾರಿ/ಸಿಬ್ಬಂದಿಗಳ ವೇತನವನ್ನು ಭರ್ತಿ ಮಾಡಿರುವ ಹುದ್ದೆಗಳಿಗೆ 2024–25ನೇ ಸಾಲಿನಲ್ಲಿ ಲೆಕ್ಕಶೀರ್ಷಿಕವಾರು ಪೂರಕ ಅಂದಾಜಿನಲ್ಲಿ ಒದಗಿಸಿರುವ ಅನುದಾನವನ್ನು ಸೇರಿಸಿ ಕೊಂಡು ಮುಂದಿನ ವರ್ಷದಲ್ಲಿ ಅಗತ್ಯವಿರುವ ಅನುದಾನವನ್ನು ನಿಗದಿಪಡಿಸುವುದು.

2. ವಲಯವಾರು/ಪ್ರಧಾನ ಲೆಕ್ಕ ಶೀರ್ಷಿಕವಾರು ಕಾರ್ಯಕ್ರಮಗಳ ಮೊತ್ತವನ್ನು Calculation Sheetನಲ್ಲಿ ರೂ. ಲಕ್ಷಗಳಲ್ಲಿ ನಮೂದಿಸುವುದು.

3.ಭೌತಿಕ ಮಾಹಿತಿಯನ್ನೊಳಗೊಂಡ ನಮೂನೆ–1 ರಲ್ಲಿ ಎಲ್ಲಾ ಮಾಹಿತಿಯನ್ನು ಜಿಲ್ಲೆಯ ಒಟ್ಟಾರೆ ಬೇಡಿಕೆಗನುಗುಣವಾಗಿ ನೀಡುವುದು.

4. 2024–25ನೇ ಸಾಲಿನ ಬಿಡುಗಡೆ ಮತ್ತು ವೆಚ್ಚಗಳನ್ನೊಳಗೊಂಡ ಎಂಪಿಕ್ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಪ್ರಗತಿ ವರದಿಯನ್ನು ಅಕ್ಟೋಬರ್ 2024ರ ಅಂತ್ಯದವರೆಗೆ ಮಾಹಿತಿಯನ್ನು ಸಂಗ್ರಹಿಸಿ ಅಂತಿಮ ಪರಿಶೀಲನಾ ಸಭೆಯ ನಿಗದಿತ ದಿನಾಂಕದೊಳಗೆ ಕಳುಹಿಸಿಕೊಡಲು ಹಾಗೂ ವರ್ಕ್ ಶೀಟ್ 2 Spiral binding, Portrait for-mat, Font: Unicode, Size: 10) 8 –3 8 2 ಪ್ರತಿಗಳನ್ನು ಅಂತಿಮ ಪರಿಶೀಲನಾ ಸಭೆಯ ದಿನಾಂಕಕ್ಕಿಂತ ಮೊದಲು ಆಯಾ ಜಿಲ್ಲೆಗಳಿಗೆ ನಿಗದಿಪಡಿಸಿದ ದಿನಾಂಕಗಳಂದು ತಪ್ಪದೇ ಕಳುಹಿಸಿಕೊಡುವುದು. ಬೇರೆ ರೂಪದಲ್ಲಿ ಸಲ್ಲಿಸಿದಲ್ಲಿ ಸ್ವೀಕರಿ ಸುವುದಿಲ್ಲ.

### ಹೆಚ್ಚುವರಿ ಅನುದಾನ ಬಿಡುಗಡೆ

**ಪುಸಕ್ತ ಸಾಲಿನಲ್ಲಿ ಯಾವುದಾದರು ಕಾರ್ಯಕ್ರಮಗಳಿಗೆ ಹೆಚ್ಚುವರಿ ಅನುದಾನವನ್ನು ಕೋರಿ ಸಂಬಂಧಪಟ್ಟ ಇಲಾಖೆ/ಆರ್ಥಿಕ ಇಲಾಖೆಗೆ ಪತ್ರ ಬರೆದಿದ್ದ ಪಕ್ಷದಲ್ಲಿ ಅವುಗಳ ಪ್ರತಿಯನ್ನು ತಪ್ಪದೇ ಸಭೆಯಲ್ಲಿ ಹಾಜರುಪಡಿಸುವುದು. ಮುಂದುವರೆದು ಆರ್ಥಿಕ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಯಾವುದಾದರು ಕಾರ್ಯಕ್ರಮಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆಯಾಗಿದ್ದರೆ ಆದೇಶದ ಪ್ರತಿಯನ್ನು ತಪ್ಪದೇ ಸಲ್ಲಿಸುವುದು. (ಇಲ್ಲದಿದ್ದ ಪಕ್ಷದಲ್ಲಿ ಆ ಮೊತ್ತವನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ**

**ಮುಂದಿನ ವರ್ಷದಲ್ಲಿ ಅಗತ್ಯ ಅನುದಾನ ನಿಗದಿ**

5. ಕಳೆದ 5 ವರ್ಷಗಳಲ್ಲಿ ಇಲಾಖೆಯಿಂದ ಅನು ಮೋದಿತ ಕ್ರಿಯಾ ಯೋಜನೆಯ ಪ್ರಮುಖ ಇಲಾಖೆಗಳ ನಕ್ಷೆಯ ವಿವರ ಗಳನ್ನು ಒದಗಿಸುವುದು.


6. ಪ್ರಮುಖ ಯೋಜನೆಗಳಡಿ ಜಿಲ್ಲೆಯ ದತ್ತಾಂಶವನ್ನು ಕಾರ್ಯಕ್ರಮದ ಮೇಲಿನ ROWನಲ್ಲಿ ಸ್ಪಷ್ಟವಾಗಿ (BOLD Lette) ನಮೂದಿ ಸುವುದು. ಉದಾ: ವಿದ್ಯಾರ್ಥಿಗಳ ಸಂಖ್ಯೆ, ವಸತಿ ನಿಲಯಗಳ ಸಂಖ್ಯೆ, ಇತ್ಯಾದಿ)

7. ಹೊಸ ವಾಹನದ ಪ್ರಸ್ತಾವನೆಗೆ ಅವಕಾಶ ವಿರುವುದಿಲ್ಲ.

8. ಹಿಂದಿನ/ ಪ್ರಸಕ್ತ ಸಾಲಿನಲ್ಲಿ ಅಗತ್ಯ ವಿರುವ ಇತರೆ ಭತ್ಯೆಗಳಾದ ಖಿಂ/ಆಂ, ವೈದ್ಯಕೀಯ ವೆಚ್ಚ ಮರುಪಾವತಿ, ಮುಂತಾದವುಗಳನ್ನು ಪ್ರಸಕ್ತ ಸಾಲಿನಲ್ಲಿಯೇ ಆಯಾಯ ಇಲಾಖೆಗಳ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿ ಆರ್ಥಿಕ ಇಲಾಖೆಯಿಂದ ಅನುದಾನವನ್ನು ಪಡೆಯಲು ಕ್ರಮವಹಿಸುವುದು. (ಬಾಕಿ ಅನು ದಾನವನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಪುಸ್ತಾಪಿಸಲು ಅವಕಾಶವಿರುವುದಿಲ್ಲ)

9. ನಿವೃತ್ತಿ ಹೊಂದುವ ದಿನಗೂಲಿ ನೌಕರರಿಗೆ ಒಂದು ಬಾರಿ ಮಾತ್ರ ಉಪಧನವನ್ನು ಪ್ರಸ್ತಾಪಿಸುವುದು.

10. ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ಸಿಬ್ಬಂದಿಗಳನ್ನು ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಶೇ.80 ರಷ್ಟು ಮಾತ್ರ ತೆಗೆದುಕೊಳ್ಳುವ ಅವಕಾಶ ವಿರುತ್ತದೆ. ಒಂದು ವೇಳ ಮಂಜೂರಾದ ಹುದ್ದೆಗಳಿಗಿಂತಲೂ ಹೆಚ್ಚಿನ ಸಿಬ್ಬಂದಿಗಳನ್ನು ತೆಗೆದುಕೊಂಡಿದ್ದಲ್ಲಿ ಅವುಗಳಿಗೆ ಕಡ್ಡಾಯವಾಗಿ ಸಂಬಂಧಪಟ್ಟ ಇಲಾಖೆಗಳು ಆರ್ಥಿಕ ಇಲಾಖೆಯ ಸಹಮತಿ ಪಡೆದಿದ್ದಲ್ಲಿ (ಆದೇಶದ ಪ್ರತಿ ಒದಗಿಸುವುದು) ಮಾತ್ರ ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು. ಇಲ್ಲದಿದ್ದಲ್ಲಿ ಅಂತಹ ಹುದ್ದೆಗಳನ್ನು ತಮ್ಮ ಹಂತದಲ್ಲಿಯೇ ಪರಿಶೀಲಿಸಿ ಕ್ರಮ ವಹಿಸುವುದು.



## ಪವಿತ್ರಾ ಗೌಡ ಜಾಮೀನು ಅರ್ಜಿ ವಿಚಾರಣೆ ನ.21ಕ್ಕೆ ಮುಂದೂಡಿದ ಹೈಕೋರ್ಟ್!

• ಉದಯವಾಹಿನಿ, ಬೆಂಗಳೂರು

ಚಿತ್ರದುರ್ಗದ ರೇಣುಕಾ ಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇಂದು ಪ್ರಕರಣದ 01 ಆರೋಪಿ ಆಗಿರುವಂತಹ ಪವಿತ್ರ ಗೌಡ ಜಮೀನು ಕೋರಿ ಹೈಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದರು. ಅದರ ಅನ್ವಯ ಇಂದು ಜಾಮೀನು ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ನವೆಂಬರ್ 21ಕ್ಕೆ ವಿಚಾರಣೆಯನ್ನು ಮುಂದೂಡಿತು.

ಇಂದು ಪವಿತ್ರಾ ಗೌಡ ಜೊತೆಗೆ ಇತರೆ ಆರೋಪಿಗಳಾದ ಅನುಕುಮಾರ್. ನಾಗರಾಜ್, ಲಕ್ಷ್ಮಣ್, ಜಾಮೀನು ಕೋರಿ ಹೈಕೋರ್ಟ್ ಗೆ ಅರ್ಜಿ ಸಲ್ಲಿದ್ದು, ಇಂದು ಜಾಮೀನು ಅರ್ಜಿ ವಿಚಾರಣೆ ನಡೆಯಿತು.

ಈ ವೇಳೆ ಪವಿತ್ರ ಗೌಡ ಜಮೀನು ಅರ್ಜಿ ವಿತರಣೆ ನವೆಂಬರ್ 21ಕ್ಕೆ ಮಂದೂಡಿ ಹೈಕೋರ್ಟ್ ಆದೇಶಿಸಿತು.ಇದೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಟ ದರ್ಶನ್ ಅವರು ಬೆನ್ನು ನೋವಿನ ಕಾರಣ ನೀಡಿ ಕಳೆದ ಒಂದು ವಾರದ ಹಿಂದೆ ಹೈಕೋರ್ಟ್ ನಿಂದ ಮಧ್ಯಂತರ ಜಾಮೀನು ಪಡೆದಿದ್ದರು. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜೈಲಿನಿಂದ ಬಿಡುಗಡೆಯಾಗಿ ಇದೀಗ ನಟ ದರ್ಶನವರು ಬೆಂಗಳೂರಿನ ಕೆಂಗೇರಿ ಬಳಿ ಇರುವ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ನಿನ್ನೆ ನಟ ದರ್ಶನ್ ಪರ ವಕೀಲರು ಹೈಕೋರ್ಟ್ ಗೆ ದರ್ಶನ್ ಅವರ ವೈದ್ಯಕೀಯ ವರದಿ ಸಲ್ಲಿಸಿದ್ದಾರೆ.



ಉದಯವಾಹಿನಿ ಚಿತ್ರ

## ಲೋಕಾಯುಕ್ತದಲ್ಲಿದೆ ಭರ್ಜರಿ ಉದ್ಯೋಗಾವಕಾಶ – ಇಂದೇ ಅರ್ಜಿ ಸಲ್ಲಿಸಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಗ್ರೂಪ್–ಸಿ ವೃಂದದ ಉಳಿಕೆ ಮೂಲ ವೃಂದದಲ್ಲಿ ಖಾಲಿ ಇರುವ ಹಾಗೂ ಕಲ್ಯಾಣ ಕರ್ನಾಟಕ (ಸ್ಥಳೀಯ ವೃಂದ) ವೃಂದದಲ್ಲಿ ಖಾಲಿ ಇರುವ ಕ್ಲರ್ಕ್–ಕಂ–ಟೈಪಿಸ್ಟ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನೇಮಕಾತಿ ಅಧಿಸೂಚನೆ ಬಿಡುಗಡೆ ಮಾಡಲಾಗಿದೆ.ಅರ್ಹ ಮತ್ತು ಆಸಕ್ತರು ಕೊನೆ ಕ್ಷಣದವರೆಗೆ ಕಾಯದೇ ಬೇಗ ಬೇಗ ಅರ್ಜಿ ಸಲ್ಲಿಸಿ.

**ಹುದ್ದೆ ವಿವರ:** ಒಟ್ಟು 30 ಟೈಪಿಸ್ಟ್ ಕಂ ಕ್ಲರ್ಕ್ ಹುದ್ದೆ. ಇದರಲ್ಲಿ ಕಲ್ಯಾಣ ಕರ್ನಾಟಕಕ್ಕೆ 14 ಹುದ್ದೆಗಳನ್ನು ಮೀಸಲಿರಿಸಲಾಗಿದೆ.

ವಿದ್ಯಾರ್ಹತೆ: ಅಭ್ಯರ್ಥಿಯು ಪಿಯುಸಿ ಉತ್ತೀರ್ಣಗೊಂಡು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಕನ್ನಡ ಮತ್ತು ಆಂಗ್ಲ ಕಿರಿಯ ದರ್ಜೆ ಬೆರಳಚ್ಚು ಪರೀಕ್ಷೆ ಉತ್ತೀರ್ಣಗೊಂಡಿರಬೇಕು.

**ವಯೋಮಿತಿ:** ಅಭ್ಯರ್ಥಿಗಳ ಗರಿಷ್ಠ ವಯೋಮಿತಿ 38 ವರ್ಷ, ಪ್ರವರ್ಗ 2ಎ , 2ಬಿ, 3ಎ ಮತ್ತು 3ಬಿ ಅಭ್ಯರ್ಥಿಗಳಿಗೆ 3 ವರ್ಷ ಮತ್ತು ಪ.ಜಾ, ಪ. ಪಂ ಹಾಗೂ ಪ್ರವರ್ಗ 1 ಅಭ್ಯರ್ಥಿಗಳಿಗೆ 5 ವರ್ಷ ವಯೋಮಿತಿ ಸಡಿಲಿಕೆ ಮಾಡಲಾಗಿದೆ.

**ಅರ್ಜಿ ಸಲ್ಲಿಕೆ:** ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಮಾಡಬಹುದಾಗಿದ್ದು, ಸಾಮಾನ್ಯ, 2ಎ, 2ಬಿ, 3ಎ ಮತ್ತು 3ಬಿ ಅಭ್ಯರ್ಥಿಗಳಿಗೆ 250 ರೂ ಅರ್ಜಿ ಶುಲ್ಕ ನಿಗದಿಸಲಾಗಿದೆ. ಪ. ಜಾ, ಪ.ಪಂ ಮತ್ತು ಪ್ರವರ್ಗ 1 ಹಾಗೂ ವಿಕಲಚೇತನ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ.




ಉದಯವಾಹಿನಿ ಚಿತ್ರ

**250 ರೂ ಅರ್ಜಿ ಶುಲ್ಕ ನಿಗದಿ**

**ಈ ಹುದ್ದೆಗೆ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆ ಮೂಲಕ ಆಯ್ಕೆ ಮಾಡಲಾಗುವುದು. ಈ ಹುದ್ದೆಗೆ ಅಕ್ಟೋಬರ್ 30ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅರ್ಜಿ ಸಲ್ಲಿಕೆಗೆ ಕಡೇಯ ದಿನಾಂಕ ನವೆಂಬರ್ 29 ಆಗಿದೆ.**
**ಈ ಹುದ್ದೆ ಕುರಿತು ಹೆಚ್ಚಿನ ಮಾಹಿತಿ ಮತ್ತು ಅಧಿಕೃತ ಅಧಿಸೂಚನೆಗೆ lokayukta.karnataka.gov.in ಭೇಟಿ ನೀಡಿ**

## ಇಂದಿನಿಂದ ನಾಗಸಂದ್ರ–ಮಾದಾವರ ಸಂಚಾರ ಆರಂಭ

• ಉದಯವಾಹಿನಿ, ಬೆಂಗಳೂರು

ಮೆಟ್ರೋ ಹಸಿರು ವಿಭಾಗದ ನಾಗಸಂದ್ರ – ಮಾದಾವರ ವಿಸ್ತರಿತ ಮಾರ್ಗ ಇಂದಿನಿಂದ ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ. ಡಿಸಿಎಂ ಡಿಕೆ ಶಿವಕುಮಾರ್ ಮತ್ತು ಬೆಂಗಳೂರಿನ ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಯಶವಂತಪುರದಿಂದ ಮಾದಾವರದವರೆಗೆ ಪ್ರಾಯೋಗಿಕ ಮೆಟ್ರೋ ರೈಲಿನಲ್ಲಿ ಪ್ರಯಾಣಿಸಿದರು.

ಮಾದಾವರದಿಂದ ಇಂದು ಬೆಳಗ್ಗೆ 5 ಗಂಟೆಗೆ ಮೊದಲ ಮೆಟ್ರೋ ಸೇವೆ ಆರಂಭವಾದರೆ ರಾತ್ರಿ 11 ಗಂಟೆ ಕೊನೆಯ ಮೆಟ್ರೋ ರೈಲು ಹೊರಡಲಿದೆ. 10 ನಿಮಿಷಕ್ಕೊಮ್ಮೆ ಮಾದಾವರ ಟು ನಾಗಸಂದ್ರ ನಡುವೆ ಮೆಟ್ರೋ ರೈಲು ಸಂಚಾರ ಮಾಡಲಿದೆ. ನಗರಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಭೇಟಿಯಾದ ನಂತರ ವಿಸ್ತರಿತ ಹಸಿರು ಮಾರ್ಗದ ಸಾರ್ವಜನಿಕ ಸೇವೆಗೆ ಮುಕ್ತಗೊಳಿಸುವ ಸಂತಸದ ವಿಷಯವನ್ನು ಸಂಸದ ತೇಜಸ್ವಿ ಸೂರ್ಯ ಅವರು ಮಾಧ್ಯಮಗಳೊಂದಿಗೆ ಹಂಚಿಕೊಂಡಿದ್ದರು.



ವಿಸ್ತರಿತ ಹಸಿರು ಮಾರ್ಗದಲ್ಲಿ ಮಂಜುನಾಥ ನಗರ, ಚಿಕ್ಕಬಿದರುಕಲ್ಲು, ಮಾದಾವರಗಳನ್ನು ಒಳಗೊಂಡ 3 ಮೆಟ್ರೋ ನಿಲ್ದಾಣಗಳಿವೆ. ತುಮಕೂರು ರಸ್ತೆಯಲ್ಲಿನ ಸಂಚಾರ ದಟ್ಟಣೆ ನಿಯಂತ್ರಣದಲ್ಲಿ ಈ ಮಾರ್ಗವು ಬಹುಮುಖ್ಯ ಪಾತ್ರ ವಹಿಸಲಿದೆ. 91 ತಿಂಗಳ ಅವಧಿ ತೆಗೆದುಕೊಂಡ ನಂತರ ಇದೀಗ ಸಾರ್ವಜನಿಕರ ಸೇವೆಗೆ ಮುಕ್ತವಾಗಿದೆ.

ವಿಸ್ತರಿತ 3.14 ಕಿ.ಮೀ ಸೇರಿ ಬೆಂಗಳೂರು ಮೆಟ್ರೋ 76.95 ಕಿ.ಮೀ. ವ್ಯಾಪ್ತಿಯನ್ನು ಹೊಂದಿದೆ. ಮೆಟ್ರೋ ಕಾಮಗಾರಿಯನ್ನು ತ್ವರಿತವಾಗಿ ಮುಗಿಸಲು ಆದ್ಯತೆ ನೀಡಲಾಗುತ್ತಿದ್ದು, ಮುಂದಿನ ವರ್ಷಕ್ಕೆ ಇನ್ನೂ 30 ಕಿ.ಮೀ. ಸೇರ್ಪಡೆಯಾಗಲಿದೆ. 2026ಕ್ಕೆ ಬೆಂಗಳೂರು ಮೆಟ್ರೋದ ಒಟ್ಟು ವ್ಯಾಪ್ತಿ 175 ಕಿ.ಮೀ ಆಗಲಿದೆ.

## ಸಿಎಂ ಮಹಾ ಸಂಕಷ್ಟ! ಲೋಕಾ ವಿಚಾರಣೆ ಬಳಿಕ ಇಡಿ ವಿಚಾರಣೆ ಟೆನ್ಷನ್

• ಉದಯವಾಹಿನಿ, ಬೆಂಗಳೂರು

ಸಿಎಂ ಸಿದ್ದರಾಮಯ್ಯ ಉಪಚುನಾವಣೆ ಅಖಾಡದಲ್ಲಿ ಅಬ್ಬರಿಸುತ್ತಿರುವಾಗಲೇ, ಅವರಿಗೆ ಮುಡಾ ಹಗರಣ ಮಗ್ಗಲ ಮುಳ್ಳಾಗಿ ಕಾಡುತ್ತಿದೆ. ಹೌದು ಲೋಕಾಯುಕ್ತ ಬಳಿಕ ಈಗ ಇ.ಡಿ ವಿಚಾರಣೆಯ ಭೀತಿ ಸಿದ್ದರಾಮಯ್ಯಗೆ ಶುರುವಾಗಿದೆ. ಸಿದ್ದರಾಮಯ್ಯ ಇಬ್ಬರು ಅತ್ಯಾಪ್ತರಿಗೆ ಇ.ಡಿಯಿಂದ ಸಮನ್ಸ್ ನೀಡಲಾಗಿದೆ.ಮುಡಾ ಮಾಜಿ ಅಧ್ಯಕ್ಷ ಮರಿಗೌಡ ಸೇರಿ 7 ಮಂದಿಗೆ ಇ.ಡಿ ಸಮನ್ಸ್ ಕೊಟ್ಟಿದೆ.

ತುರ್ತು ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ ನೋಟಿಸ್ ನೀಡಿದೆ. ಮುಡಾ ಮಾಜಿ ಆಯುಕ್ತ ದಿನೇಶ್, ನಟೇಶ್ ಗೂ ಮತ್ತೆ ಸಮನ್ಸ್ ನೀಡಿದೆ. ಇವರೆಲ್ಲರ ವಿಚಾರಣೆ ಬಳಿಕ ಸಿಎಂಗೆ ಇ.ಡಿ ನೋಟಿಸ್ ನೀಡುವ ಸಾಧ್ಯತೆ ಇದೆ. ಲೋಕಾಯುಕ್ತ ಬಳಿಕ ಸಿಎಂಗೆ ಇ.ಡಿ ವಿಚಾರಣೆ ಭೀತಿ ಶುರುವಾಗಿದೆ.



ಉದಯವಾಹಿನಿ ಚಿತ್ರ

ಮೈಸೂರು ಲೋಕಾಯುಕ್ತ ಎಸ್ಪಿ ಉದೇಶ್ ಗೂ ಸಂಕಷ್ಟ ಎದುರಾಗಿದೆ. ಲೋಕಾಯುಕ್ತ ಎಸ್ಪಿ ವಿರುದ್ಧ ಸ್ನೇಹಮಯಿ ಕೃಷ್ಣ ದೂರು ನೀಡಿದ್ದಾರೆ. ಸಿಎಂ ಸಿದ್ದರಾಮಯ್ಯ ವಿಚಾರಣೆಯಲ್ಲಿ ಹಲವು ಲೋಪ ಆಗಿದೆ. ಲೋಕಾಯುಕ್ತ ಎಸ್ಪಿ ಉದೇಶ್ ಕರ್ತವ್ಯಲೋಪ ಎಸಗಿದ್ದಾರೆ.

ಲೋಕಾಯುಕ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ನೀಡಿದ ದೂರಿನಲ್ಲಿ ಉದೇಶ್ ಅವರಿಗೆ ಎಚ್ಚರಿಕೆ ನೀಡಬೇಕೆಂದು ಉಲ್ಲೇಖಿಸಲಾಗಿದೆ.

**ಮುಡಾ ಕೇಸ್‌ನ ಆರೋಪಿಗಳಾದ ಪಾರ್ವತಿ ಸಿಎಂ ಸಿದ್ದರಾಮಯ್ಯ ಬಾಮೈದ, ಜಮೀನು ಮಾರಿದ್ದ ದೇವರಾಜ್ ಅವರ ವಿಚಾರಣೆಯನ್ನು ಲೋಕಾಯುಕ್ತ ಈಗಾಗಲೇ ನಡೆಸಿತ್ತು. ಪ್ರಕರಣದ ಎ1 ಆರೋಪಿಯಾದ ಸಿಎಂ ಅವರನ್ನು ಬುಧವಾರ ಮೈಸೂರಿನ ಕಚೇರಿಯಲ್ಲಿ ಅಧಿಕಾರಿಗಳು ವಿಚಾರಣೆ ನಡೆಸಿದರು. ಸುಮಾರು 2 ಗಂಟೆಗಳ ಕಾಲ 50ಕ್ಕೂ ಹೆಚ್ಚು ಪ್ರಶ್ನೆಗಳನ್ನು ಸಿಎಂಗೆ ಕೇಳಲಾಯಿತು.**

## ವಿದ್ವಾಂಸರಾದ ರಾಮಪ್ರಸಾದ್, ನಳಿನಾಗೆ ಪ್ರಶಸ್ತಿ

• ಉದಯವಾಹಿನಿ, ಬೆಂಗಳೂರು

ರಾಜಧಾನಿಯ ಪ್ರತಿಷ್ಠಿತ ಸುಸ್ವರಲಯ ಪ್ರೌಢ ಸಂಗೀತ ಕಲಾಶಾಲೆಯು ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದರಿಗೆ ಕೊಡಮಾಡುವ ವಾರ್ಷಿಕ ಪ್ರಶಸ್ತಿಗೆ ವಿದ್ವಾಂಸರಾದ ರಾಮಪ್ರಸಾದ್, ನಳಿನಾ ಆಯ್ಕೆಯಾಗಿದ್ದಾರೆ.

ಹಿರಿಯ ಗಾಯಕ, ವಿದ್ವಾನ್ ಟಿ. ವಿ. ರಾಮ ಪ್ರಸಾದ್ ಗೆ 'ಸ್ವರಲಯ ರತ್ನ' ಮತ್ತು ಖ್ಯಾತ ವಯೋಲಿನ್ ವಿದುಷಿ ನಳಿನಾ ಮೋಹನ್ ಗೆ 'ಸ್ವರಲಯ ಶೃಂಗ' ಪ್ರಶಸ್ತಿ ಘೋಷಣೆ ಮಾಡಲಾಗಿದೆ ಎಂದು ಸಂಸ್ಥೆ ಪ್ರಾಚಾರ್ಯ ವಿದ್ವಾನ್ ಸುಧೀಂದ್ರ ತಿಳಿಸಿದ್ದಾರೆ.

ಪ್ರಶಸ್ತಿಯು ಸ್ಮರಣಿಕೆ, ನಗದು ಪುರಸ್ಕಾರ ಮತ್ತು ವಿದ್ವತ್ ಸನ್ಮಾನ ಒಳಗೊಂಡಿದೆ. ನ. 9ರಂದು ಬನಶಂಕರಿ ರಾಮಲಲಿತ ಕಲಾ ಮಂದಿರದಲ್ಲಿ ದಿನಪೂರ್ಣ ಸಂಸ್ಥೆಯ ರಜತ ಮಹೋತ್ಸವ ಸಂಗೀತ ಕಛೇರಿ ಆಯೋಜಿಸಿದ್ದು, ಸಂಜೆ 4ಕ್ಕೆ ವಿದ್ವಾಂಸರಿಗೆ ಪ್ರಶಸ್ತಿ ಪ್ರದಾನ ನೆರವೇರಲಿದೆ. ಖ್ಯಾತ ಗಾಯಕ ಡಾ. ವಿದ್ಯಾಭೂಷಣ, ಯದುಗಿರಿ ಯತಿರಾಜ ಮಠದ ಶ್ರೀ ನಾರಾಯಣ ರಾಮಾನುಜ ಜೀಯರ್ ಮತ್ತು ವಿಶ್ವಖ್ಯಾತ ಮೃದಂಗ ವಿದ್ವಾಂಸ ಶ್ರೀಮುಷ್ಣಂ ರಾಜಾರಾವ್ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಸುಧೀಂದ್ರ ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

- **ಸುಸ್ವರಲಯ ಪ್ರೌಢ ಸಂಗೀತ ಕಲಾಶಾಲೆ ರಜತ ಉತ್ಸವ**
- **ನ. 9ರಂದು ಪ್ರಶಸ್ತಿ ಪ್ರದಾನ**

# ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾ ಸಮಾವೇಶ

## ಕ್ಷೇತ್ರದ ಇತ್ತೀಚಿನ ಬೆಳವಣಿಗೆಗಳು, ಹೊಸ ವಿಚಾರಗಳು, ಉತ್ತಮ ಅಭ್ಯಾಸಗಳ ಬಗ್ಗೆ ಚರ್ಚಿಸಲು ಈ ಸಮಾವೇಶ

• ಉದಯವಾಹಿನಿ, ಬೆಂಗಳೂರು

ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾ (PRCI) 18ನೇ ಜಾಗತಿಕ ಸಂವಹನ ಸಮಾವೇಶವನ್ನು 2024ರ ನವೆಂಬರ್ 8 ಮತ್ತು 9ರಂದು ಮಂಗಳೂರಿನಲ್ಲಿ ಆಯೋಜಿಸಲಾಗುತ್ತಿದೆ.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ಹಂಚಿಕೊಂಡಿರುವ PRCI, ನಾಳೆ ಮತ್ತು ನಾಡಿದ್ದು ಜಾಗತಿಕ ಸಮಾವೇಶವನ್ನು ಮಂಗಳೂರಲ್ಲಿ ಆಯೋಜಿಸಲಾಗಿದೆ.

ಭಾರತೀಯರು ಪಬ್ಲಿಕ್ ರಿಲೇಶನ್ಸ್ ಮತ್ತು ಸಂವಹನ ವೃತ್ತಿಪರತೆಯ ಪ್ರಮಾಣಿತ ಮಾನದಂಡಗಳನ್ನು ಉತ್ತೇಜಿಸುವ ಪ್ರಮುಖ ಸಂಸ್ಥೆಯಾಗಿದೆ ಎಂದಿದೆ.

2004ರ ಮಾರ್ಚ್ 3 ರಂದು PRCIಯು ಸ್ಥಾಪನೆಯಾಗಿದ್ದು, ಅದಕ್ಕೂ ಮೊದಲು 17 ಜಾಗತಿಕ ಸಂವಹನ ಸಮಾವೇಶಗಳನ್ನು ಜಯಪುರ, ಪುಣೆ, ಕೊಲ್ಕತ್ತಾ, ನವದೆಹಲಿ, ಮುಂಬೈ, ಹೈದರಾಬಾದ್, ಚಂಡೀಗಢ್, ಬೆಂಗಳೂರು ಮತ್ತು ಗೋವಾ ನಗರಗಳಲ್ಲಿ ಯಶಸ್ವಿಯಾಗಿ ಆಯೋಜಿಸಿತ್ತು. ದೇಶದಾದ್ಯಂತ ಮತ್ತು ವಿಶ್ವದ ಪ್ರಮುಖ ಉದ್ಯಮಗಳಿಂದ 500ಕ್ಕೂ ಹೆಚ್ಚು ಸಂವಹನ ವೃತ್ತಿಪರರು ಮತ್ತು ನಿರ್ಧಾರ ಮೇಕರ್‌ಗಳು ಪಬ್ಲಿಕ್ ರಿಲೇಶನ್ಸ್ ಮತ್ತು ಸಂವಹನ ಕ್ಷೇತ್ರದ ಇತ್ತೀಚಿನ ಬೆಳವಣಿಗೆಗಳು, ಹೊಸ ವಿಚಾರಗಳು, ಮತ್ತು ಉತ್ತಮ ಅಭ್ಯಾಸಗಳ ಬಗ್ಗೆ ಚರ್ಚಿಸಲು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಈ ಸಮಾವೇಶದಲ್ಲಿ 11 ಉಲ್ಲೇಖನೀಯ ಪ್ಯಾನೆಲ್ ಚರ್ಚೆಗಳು ನಡೆಯಲಿದ್ದು, ಕೈಗಾರಿಕಾ ತಜ್ಞರು, ಆಲೋಚನಾಪ್ರೇರಕರು, IAS ಅಧಿಕಾರಿಗಳು, ಮತ್ತು ಯುರೋಪ್ ಹಾಗೂ ಗಲ್ಫ್ ದೇಶಗಳಿಂದ ಬಂದ ಸಂವಹನ ವೃತ್ತಿಪರರು ಪಾಲ್ಗೊಳ್ಳಲಿದ್ದಾರೆ.

**ಚರ್ಚೆಯ ವಿಷಯಗಳು:** ಸರ್ಕಾರಿ ಪಬ್ಲಿಕ್ ರಿಲೇಶನ್ಸ್ ಮತ್ತು ಸಾರ್ವಜನಿಕತೆಯನ್ನು ಉತ್ತೇಜಿಸುವುದು, ಗಿಗ್ ಆರ್ಥಿಕತೆಯ ಪ್ರಭಾವ, ಜಾಗತಿಕ ಕಥೆಗಳು ಮತ್ತು ಡಿಜಿಟಲ್ ಮಾಧ್ಯಮದ ಬಳಕೆ ಹಾಗೂ ಮಾನವರು ಮತ್ತು ಯಂತ್ರಗಳು ಭವಿಷ್ಯದಲ್ಲಿ ಒಟ್ಟಾಗಿ ಹೇಗೆ ಜೀವಿಸಬಹುದು ಎಂಬುವುಗಳನ್ನು ಒಳಗೊಂಡಿರುತ್ತವೆ. ಮೊಟ್ಟ ಮೊದಲ ಬಾರಿಗೆ, PRCI 15 ಮಂದಿ ವಿಸಿ ಗಳನ್ನು ಏಕಕಾಲದಲ್ಲಿ ಸೇರಿಸುವ 'ವೈಸ್ ಚಾನ್ಸಲರ್‌ಗಳ ವಿಶೇಷ ಮೃತ್ತಸಂವಾದ' ಅನ್ನು ಆಯೋಜಿಸುತ್ತಿದೆ, ಇದು ಉನ್ನತ ಶಿಕ್ಷಣದ ಭವಿಷ್ಯ ಮತ್ತು ಹೊಸ ಆವಿಷ್ಕಾರಗಳೊಂದಿಗೆ ಮರುಸಂಪರ್ಕದ ಬಗ್ಗೆ ಚರ್ಚೆ ನಡೆಸಲಿದೆ.

ಈ ಸಮಾರಂಭವನ್ನು ಗೃಹ ಸಚಿವ ಡಾ. ಜಿ. ಪರಮೇಶ್ವರ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮತ್ತು ಮಂಗಳೂರು ಮೇಯರ್ ಮನುಜ್ ಕುಮಾರ್ ಕೊಡಿಕಲ್ ಅವರು ಉದ್ಘಾಟಿಸಲಿದ್ದು, PRCIಯ ವಿಶೇಷ ಮಾಗಜೀನ್ಗಳು ಚಾಣಕ್ಯ, ಆಧ್ವಿಕಾ, ಮತ್ತು ಕೌಟಿಲ್ಯ ಬಿಡುಗಡೆ ಮಾಡ ಲಾಗುವುದು. ಈ ಸಮಾವೇಶದ ಮುಖ್ಯ ಆಕರ್ಷಣೆ ಪ್ರಶಸ್ತಿ ಪ್ರದಾನ ಸಮಾರಂಭವಾಗಿದ್ದು, ಸಂವಹನ, ಪಬ್ಲಿಕ್ ರಿಲೇಶನ್ಸ್, ಮತ್ತು ಅಕಾಡೆಮಿಯಾ ಕ್ಷೇತ್ರದಲ್ಲಿ ಯಶಸ್ವಿ ಸಾಧನೆ ಮಾಡಿದ ವೃತ್ತಿಪರರನ್ನು ಗೌರವಿಸಲಾಗುವುದು.

PRCI ತನ್ನ ವೃತ್ತಿಪರರು ಮತ್ತು ಕೈಗಾರಿಕಾ ತಜ್ಞರೊಂದಿಗೆ ಜ್ಞಾನ ವಿನಿಮಯ ಮತ್ತು ಸಂಪರ್ಕವನ್ನು ಬೆಳೆಸುವ ವೇದಿಕೆಯಾಗಿದೆ.




ಉದಯವಾಹಿನಿ ಚಿತ್ರ

**ಹಲವಾರು ಗಣ್ಯ ವ್ಯಕ್ತಿಗಳು ಪ್ರಶಸ್ತಿ ಪ್ರದಾನ**

**ಈ ಕಾರ್ಯಕ್ರಮದಲ್ಲಿ ಶ್ರೀಪಾದ್ ಯೆಸ್ಸೋ ನಾಯಕ್, ಹೊಸ ಮತ್ತು ನವೀನೀಕೃತ ವಿದ್ಯುತ್ ಸಚಿವರು, ಪಿ. ಕೃಷ್ಣ ಭಟ್, ಹೈಕೋರ್ಟ್ ನಿವೃತ್ತ ನ್ಯಾಯಾಧೀಶರು, ರವಿ ಕಿರಣ್, ಕನ್ನಡ ಚಲನಚಿತ್ರ ನಟ ಮತ್ತು ನಿರ್ದೇಶಕ, ಮತ್ತು ಹಲವಾರು ಗಣ್ಯ ವ್ಯಕ್ತಿಗಳು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.**

### 18ನೇ ಜಾಗತಿಕ ಸಮಾವೇಶ

**PRCI ಸ್ಥಾಪಕ ಅಧ್ಯಕ್ಷ ಎಂ ಬಿ ಜಯರಾಮ್, ನಾವು ಮಂಗಳೂರಿನಲ್ಲಿ ಈ 18ನೇ ಜಾಗತಿಕ ಸಮಾವೇಶವನ್ನು ಆಯೋಜಿಸುತ್ತಿರುವಾಗ, 'ಮರುಸಂಪರ್ಕ' ಎಂಬ ವಿಷಯವನ್ನು ಅಳವಡಿಸಿಕೊಳ್ಳೋಣ. ನಾವು ನಮ್ಮ ಬದುಕಿನ ಮುಖ್ಯ ಮೂಲ್ಯಗಳಾದ ಪಾರದರ್ಶಕತೆ ಮತ್ತು ನಂಬಿಕೆಗಳಿಗೆ ಮರುಸಂಪರ್ಕ ಮಾಡೋಣ, ಎಂದು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.**

**PRCI ರಾಷ್ಟ್ರಾಧ್ಯಕ್ಷೆ ಗೀತಾ ಶಂಕರ್ ಅವರು, ಸಂಬಂಧಗಳ ನಿರ್ಮಾಣ ಮತ್ತು ನಂಬಿಕೆಯನ್ನು ರೂಪಿಸುವುದು ಪಬ್ಲಿಕ್ ರಿಲೇಶನ್ಸ್ ವೃತ್ತಿಯ ಗುರಿ. PR ಮಾತ್ರ ಸಂದೇಶ ರವಾನಿಸುವುದಲ್ಲ, ಅದನ್ನು ಅರ್ಥಪೂರ್ಣವಾಗಿ ಜಗತ್ತಿನೊಂದಿಗೆ ಮರುಸಂಪರ್ಕಿಸಲು ಪಬ್ಲಿಕ್ ರಿಲೇಶನ್ಸ್ ವೃತ್ತಿಪರರು ಪ್ರಯತ್ನಿಸುತ್ತಾರೆ, ಎಂದು ಹೇಳಿದರು.**

# ಕಾಂಗ್ರೆಸ್ ಸರ್ಕಾರದಿಂದ 12 ಲಕ್ಷ ಬಿಪಿಎಲ್ ಕಾರ್ಡ್ ರದ್ದು

## • ಬಡವರ ರೇಷನ್ ಕಾರ್ಡ್ ರದ್ದಾಗಿದೆಯೋ ಅದನ್ನ ವಾಪಾಸ್ ತರುವ ತಾಕತ್ತು ನಿಖಿಲ್ ಕುಮಾರಸ್ವಾಮಿಗೆ ಇದೆ

**• ಉದಯವಾಹಿನಿ ರಾಮನಗರ**


ರಾಜ್ಯದಲ್ಲಿ 12 ಲಕ್ಷ ಬಿಪಿಎಲ್‌ಕಾರ್ಡ್ ರದ್ದು ಆಗ್ತಿವೆ. ಕರ್ನಾಟಕ ರಾಜ್ಯದಲ್ಲಿ ಸಿದ್ದರಾಮಯ್ಯ ಅವರು ಸರ್ಕಾರ 12 ಲಕ್ಷ ಪಡಿತರ ಚೀಟಿ ಯನ್ನು ರದ್ದು ಮಾಡಲು ಮುಂದಾಗುತ್ತಿದೆ ಎಂದು ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಅವರ ಆರೋಪಿಸಿದರು.

**ಸಂಸದ ಕೋಟ ಆರೋಪ**

ಚನ್ನಪಟ್ಟಣ ವಿಧಾನಸಭೆ ಕ್ಷೇತ್ರದ ವಿರುಪಸಂದ್ರ ಗ್ರಾಮದಲ್ಲಿ ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಅವರು ಎನ್‌ಡಿ ಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರ ಪರ ಮತಯಾಚನೆ ಮಾಡಿದ ಅವರು, ಸಿದ್ದರಾಮಯ್ಯನವರೇ 12 ಲಕ್ಷ ಬಿಪಿ ಎಲ್ ಕಾರ್ಡ್ ರದ್ದು ಮಾಡುವುದನ್ನ ತಕ್ಷಣವೇ ತಡೆಯಬೇಕು. ತಡೆಯದಿದ್ರೆ ನಿಖಿಲ್ ಕುಮಾರಸ್ವಾಮಿ ಗೆಲ್ತಾರೆ. ವಿಧಾನ ಸಭೆಯಲ್ಲಿ ಘರ್ಜಿಸುತಾರೆ, ಬಡವರ ರೇಷನ್ ಕಾರ್ಡ್ ರದ್ದಾಗಿದಿಯೋ ಅದನ್ನ ವಾಪಾಸ್ಸ ತರುವ ತಾಕತ್ತು ನಿಖಿಲ್ ಕುಮಾರಸ್ವಾಮಿಗೆ ಇದೆ ಇದು ಕಾಂಗ್ರೆಸ್ ಸರ್ಕಾರದ ವಿರುದ್ಧ ಕಿಡಿ ಕಾರಿದರು.

ಈ ಸರ್ಕಾರ ಏನು ಬೇಕಾದರು ಮಾಡಿಕೊಳ್ಳಲಿ, ಆದರೆ ಬಿಪಿ ಎಲ್ ಕಾರ್ಡ್ ರದ್ದಾದರೆ ನರೇಂದ್ರ ಮೋದಿಯವರು ಕೊಡುತ್ತಿರುವ 5 ಕೆ.ಜಿ ಅಕ್ಕಿ ರದ್ದಾಗುತ್ತೆ. ಅಯುಷ್ಮಾನ್ ಭಾರತ್ ಯೋಜನೆ ರದ್ದಾಗುತ್ತೆ. ಶಾಲಾ ಮಕ್ಕಳಿಗೆ ಕೊಡುವ ಯೋಜನೆ ರದ್ದಾಗುತ್ತೆ ಎಂದು ರಾಜ್ಯ ಸರ್ಕಾರದ ವಿರುದ್ಧ ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಕಿಡಿಕಾರಿದರು.

ಚನ್ನಪಟ್ಟಣ ವಿಧಾನಸಭೆ ಕ್ಷೇತ್ರದ ವಿರುಪಸಂದ್ರ ಗ್ರಾಮದ ಪ್ರಚಾರ ಸಭೆಯಲ್ಲಿ ಮಾತಾಡಿದ ಅವರು, ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಮುಖ್ಯ ಮಂತ್ರಿಯಾಗಿದ್ದ ವೇಳೆ ಬಡ ಸಾಮಾನ್ಯ ಮಹಿಳಾ ವರ್ಗದವರಿಗೆ ಬದುಕು ಕಟ್ಟಿ ಕೊಡುವಂತ ಕೆಲಸ ಮಾಡಿದ್ದರು. ಸಾಮಾನ್ಯ ಜನರ ಭಾವನೆಯನ್ನ ಅರ್ಥ ಮಾಡಿಕೊಂಡು ಕೆಲಸ ಮಾಡುವ ಶಕ್ತಿ ನಿಖಿಲ್ ಕುಮಾರಸ್ವಾಮಿಗೆ ಇದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಇನ್ನೂ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಅವರು ಮುಖ್ಯ ಮಂತ್ರಿಯಾಗಿದ್ದ ವೇಳೆ ಬಡ ಸಾಮಾನ್ಯ ಮಹಿಳಾ ವರ್ಗದವರಿಗೆ ಬದುಕು ಕಟ್ಟಿ ಕೊಡುವಂತ ಕೆಲಸ ಮಾಡಿದ್ದರು.

> ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಜನಾಂಗಕ್ಕೆ ಜೆಪಿ ಜೆಡಿಎಸ್ ಅವರು ಏನು ಮಾಡಿದ್ದಾರೆ ಎಂಬ ಕಾಂಗ್ರೆಸ್ ಹೇಳಿಕೆಗೆ, ಡಾ ಅಂಬೇಡ್ಕರ್ ಅವರು ಅಂತ್ಯ ಸಂಸ್ಕಾರ ಮಾಡಲು ದೆಹಲಿಯಲ್ಲಿ 10 ಅಡಿ ಜಾಗವನ್ನು ಕಾಂಗ್ರೆಸ್‌ನವರು ಕೊಡಲಿಲ್ಲ ಎಂದು ಸಂಸದ ಕೋಟಾ ಶ್ರೀನಿವಾಸ್ ಪೂಜಾರಿ ಅವರು ಆರೋಪಿಸಿದರು
> **-ಕೋಟ ಶ್ರೀನಿವಾಸ್ ಪೂಜಾರಿ,** ಸಂಸದ

ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಸಾಮಾನ್ಯ ಜನರ ಭಾವನೆಯನ್ನ ಅರ್ಥಮಾಡಿಕೊಂಡು ಕೆಲಸ ಮಾಡುವ ಶಕ್ತಿ ನಿಖಿಲ್ ಕುಮಾರಸ್ವಾಮಿಗೆ ಇದೆ ಎಂದು ಹೇಳಿದರು. ಈ ಸರ್ಕಾರ ಎಂಥ ದುಸ್ಥಿತಿಗೆ ಬಂದಿದೆ. ಇವತ್ತು ಸಿದ್ದರಾಮಯ್ಯನ ಕೈಯಲ್ಲಿ ಅಧಿಕಾರ ಇಲ್ಲ ಆಡಳಿತ ನಡೆಸುತ್ತಿರುವು ಜಮೀರ್ ಅವರು. ಈ

### ಅಭ್ಯರ್ಥಿ ನಿಖಿಲ್ ಗೆಲ್ಲಿಸಿ

ನಿಮಗೆ ಕೈ ಮುಗಿದು ಮನವಿ ಮಾಡುತ್ತೇನೆ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರನ್ನ ಗೆಲ್ಲಿಸಿ. ಇಂಥ ಕೆಟ್ಟ ಸರ್ಕಾರವನ್ನ ನಾನು ನೋಡಲಿಲ್ಲ. ರಾಜಕೀಯ ಇರುವುದು ಸಿಎಂ,ಪಿಎಂ ಆಗುವುದಕ್ಕೆ ಅಲ್ಲ.ಜನ ಸಾಮಾನ್ಯರ ಕೆಲಸ ಮಾಡುವುದಕ್ಕೆ ಜನರ ಬದುಕು ಕಟ್ಟಿಕೊಡುವುದಕ್ಕೆ ರಾಜಕಾರಣ ಇರುವುದು ಎಂದರು.ಅದೇ ಹಾದಿಯಲ್ಲಿ ನಿಖಿಲ್ ಅವರು ಸಾಗುತ್ತಿದ್ದಾರೆ ಎಂದು ತಿಳಿಸಿದರು.

ದೇಶದಲ್ಲಿ ಮುಸ್ಲಿಂ, ಹಿಂದೂ ಕ್ರೈಸ್ತರು, ಜೈನರು, ಬೌದ್ಧರು ಎಲ್ಲರು ಒಟ್ಟಾಗಿ ಸೇರಿ ಬದುಕಬೇಕೆಂದು ಯೋಚನೆ ಮಾಡಿದವರು ನಾವು ಎಂದು ತಿಳಿಸಿದರು.

---

# ಸಮಸ್ಯೆ ಆಲಿಸಿದ ಸಚಿವ ಕೆ.ಎನ್.ರಾಜಣ್ಣ

**• ಉದಯವಾಹಿನಿ ಮಧುಗಿರಿ**

ಪಟ್ಟಣದ 1ರಿಂದ 8ನೇ ವಾರ್ಡ್‌ವರೆಗೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ಹಾಗೂ ವಿಧಾನ ಪರಿಷತ್ ಸದಸ್ಯ ಆರ್.ರಾಜೇಂದ್ರ ಪಾದಯಾತ್ರೆ ಮಾಡಿ ಜನರ ಕುಂದುಕೊರತೆ ಆಲಿಸಿದರು.

ಸಾರ್ವಜನಿಕರಿಂದ ನಿವೇಶನ, ಕುಡಿಯುವ ನೀರು, ಮನೆ, ರಸ್ತೆ, ಚರಂಡಿ, ಸ್ವಚ್ಛತೆ ಬಗ್ಗೆ ಸಾಕಷ್ಟು ದೂರುಗಳು ಕೇಳಿ ಬಂದವು. 'ಸರ್ ನನಗೆ ಯಾರು ದಿಕ್ಕಿಲ್ಲ, ಒಂದು ಮನೆ ಮಂಜೂರು ಮಾಡಿಸಿಕೊಡಿ' ಎಂದು ವೃದ್ಧೆಯೊಬ್ಬರು ಸಚಿವರಿಗೆ ಮನವಿ ಮಾಡಿದಾಗ, ಇವರಿಗೆ ಮನೆ ಮಂಜೂರು ಮಾಡಿ ಕೊಡಿ ಹಾಗೂ ಅವಶ್ಯಕತೆ ಇರುವವರಿಗೆ ಮನೆಗಳ ಪಟ್ಟಿ ಮಾಡುವಂತೆ ಮುಖ್ಯಾಧಿಕಾರಿ ಸುರೇಶ್ ಅವರಿಗೆ ಸೂಚಿಸಿದರು.

ಮಳೆಯಿಂದಾಗಿ ಪಟ್ಟಣದ ರಸ್ತೆಗಳಲ್ಲಿ ಗುಂಡಿ ನಿರ್ಮಾಣವಾಗಿ ಜನರ ಓಡಾಟಕ್ಕೆ ತೊಂದರೆಯಾಗುತ್ತಿದೆ. ತಾತ್ಕಾಲಿಕವಾಗಿ ಎಲ್ಲಾ ಗುಂಡಿಗಳನ್ನು ಮುಚ್ಚಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.


ಉದಯವಾಹಿನಿ ಚಿತ್ರ

ಮಳೆ ಕಡಿಮೆ ಆದ ಮೇಲೆ 25 ಕೋಟಿ ವೆಚ್ಚದಲ್ಲಿ ಗುಣಮಟ್ಟದ ರಸ್ತೆ ಮಾಡಿಸಲಾಗುವುದು ಎಂದರು.

5ನೇ ವಾರ್ಡ್‌ನಲ್ಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಯರ ಹಾಸ್ಟೆಲ್‌ಗೆ ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆ ಆಲಿಸಿದರು. ಮೆನು ವಿನಲ್ಲಿರುವಂತೆಯೇ ಆಹಾರ ನೀಡಬೇಕು. ಮಕ್ಕಳ ವೈದ್ಯಕೀಯ ತಪಾಸಣೆ ಯನ್ನು ಕಡ್ಡಾಯವಾಗಿ ಮಾಡಬೇಕು. ಅಧಿಕಾರಿಗಳ ಸಭೆ ನಡೆಸಬೇಕು ಎಂದು ಸೂಚಿಸಿದರು. ತಾಲ್ಲೂಕು ಆಸ್ಪತ್ರೆಯಲ್ಲಿ

> ಸಹಕಾರ ಸಚಿವ ಕೆ.ಎನ್.ರಾಜಣ್ಣ ಮಾತನಾಡಿ, ಕೊರಟಗೆರೆ ಏಕಲವ್ಯ ವಸತಿ ಶಾಲೆಯಲಿ ಕೆಲ ದಿನಗಳ ಹಿಂದೆ ಮೃತಪಟ್ಟ ಬಾಲಕನ ತಾಯಿ ಐಡಿ ಹಳ್ಳಿ ಹೋಬಳಿ ಸಾದರಹಳ್ಳಿ ವಾಸಿ. ಬಾಲಕನ ಸಾವಿನ ಬಗ್ಗೆ ಪೋಷಕರು ಅನುಮಾನ ವ್ಯಕ್ತಪಡಿಸಿದ್ದು, ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಕಾನೂನು ಕ್ರಮ ಕೈಗೊಂಡು ಅಗತ್ಯ ಪರಿಹಾರ ದೊರಕಿಸಲಾಗುವುದು **-ಕೆ.ಎನ್.ರಾಜಣ್ಣ**

ನಿರ್ಮಾಣದ ಹಂತದಲ್ಲಿರುವ ಕಾಮಗಾರಿಯು ಸ್ಥಗಿತಗೊಂಡಿದ್ದು, ಶೀಘ್ರ ಆರಂಭಿಸಲಾಗುವುದು.

ಕೆಲ ದಿನಗಳಲ್ಲಿ ವೈದ್ಯರು ಮತ್ತು ಖಾಲಿ ಇರುವ ಸಿಬ್ಬಂದಿ ಹುದ್ದೆ ಭರ್ತಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

---

# ಕೊರತೆಗಳ ಮಧ್ಯೆ ಕಡಿಮೆ ಶಿಶು ಮರಣ ದರ

**• ಉದಯವಾಹಿನಿ, ಮಡಿಕೇರಿ**

ಕೊಡಗು ಜಿಲ್ಲೆಯಲ್ಲಿ ಶಿಶು ಮರಣ ದರ ರಾಜ್ಯದ ಸೂಚ್ಯಂಕಕ್ಕಿಂತಲೂ ಶೇ 50ಕ್ಕೂ ಅಧಿಕ ಕಡಿಮೆ ಇದೆ. ಇದರಿಂದ ಇಲ್ಲಿ ಜನಿಸುವ ಮಕ್ಕಳು ಸುರಕ್ಷಿತ ಎಂಬ ಕಾರಣಕ್ಕೆ ಹೊರ ಜಿಲ್ಲೆಗಳಿಗಿಂದಲೂ ಗರ್ಭಿಣಿಯರು ಇಲ್ಲಿಗೆ ಬಂದು ದಾಖಲಾಗುತ್ತಿದ್ದಾರೆ. ಆದರೂ, ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಿ, ಜನರಲ್ಲಿ ಜಾಗೃತಿ ಮೂಡಿಸಿದರೆ, ಶಿಶು ಮರಣದರವನ್ನು ಇನ್ನಷ್ಟು ತಗ್ಗಿಸುವ ಎಲ್ಲಾ ಅವಕಾಶಗಳೂ ಇವೆ.

ರಾಜ್ಯದಲ್ಲಿ ಪ್ರತಿ ಸಾವಿರ ಮಕ್ಕಳು ಜನಿಸಿದರೆ 19 ಶಿಶುಗಳು ಮರಣ ಹೊಂದುತ್ತಿದ್ದರೆ, ಕೊಡಗಿನಲ್ಲಿ ಇದರ ಪ್ರಮಾಣ ಕೇವಲ 9 ಮಾತ್ರ. ಕಳೆದ ವರ್ಷ ಇದರ ಪ್ರಮಾಣ ರಾಜ್ಯದಲ್ಲಿ 24 ಇತ್ತು. ಆಗ ಜಿಲ್ಲೆಯಲ್ಲಿ 7.42 ಇತ್ತು. ಕಳೆದ ವರ್ಷದ ಅಂಕಿ ಅಂಶಕ್ಕೆ ಹೋಲಿಸಿದರೆ ಈ ವರ್ಷ ಶಿಶುಮರಣ ದರ ರಾಜ್ಯದಲ್ಲಿ ಕಡಿಮೆಯಾಗಿದ್ದರೆ, ಜಿಲ್ಲೆಯಲ್ಲಿ ತುಸು ಹೆಚ್ಚಾಗಿದೆ.ಕಳೆದ ವರ್ಷ ಜಿಲ್ಲೆಯಲ್ಲಿ 48 ನವಜಾತ ಶಿಶುಗಳು ಮರಣ ಹೊಂದಿದ್ದರೆ, ಪ್ರಸಕ್ತ ಸಾಲಿನಲ್ಲಿ ಏಪ್ರಿಲ್‌ನಿಂದ ಸೆಪ್ಟೆಂಬರ್ ಅಂತ್ಯಕ್ಕೆ 23 ಶಿಶುಗಳು ಮೃತಪಟ್ಟಿವೆ. ಇವುಗಳಲ್ಲಿ 13 ಸಾವನ್ನು ತಡೆಗಟ್ಟಬಹುದಿತ್ತು ಎಂದು ಆರೋಗ್ಯ ಇಲಾಖೆಯ ಅಂಕಿ ಅಂಶಗಳೇ ಹೇಳುತ್ತಿವೆ. ಈ ಸಾವುಗಳಲ್ಲಿ ಶೇ 50ಕ್ಕೂ ಅಧಿಕ ದಕ್ಷಿಣ ಕೊಡಗಿನಲ್ಲೇ ಸಂಭವಿಸುತ್ತಿವೆ. ಇದಕ್ಕೆ ಜನರಲ್ಲಿ ಇರುವ ಅಜ್ಞಾನ, ಮೂಢನಂಬಿಕೆ ಹಾಗೂ ತಾಲ್ಲೂಕು, ಹೋಬಳಿಗಳಲ್ಲಿ ಮಕ್ಕಳ ತಜ್ಞರ ಕೊರತೆ ಬಹುಮುಖ್ಯ ಕಾರಣ ಎನಿಸಿವೆ. ಜಿಲ್ಲೆಯಲ್ಲಿರುವ 7 ಸಮುದಾಯ ಆರೋಗ್ಯ ಕೇಂದ್ರಗಳ ಪೈಕಿ 6 ಕೇಂದ್ರಗಳಲ್ಲಿ ಮಾತ್ರವಲ್ಲ ವಿರಾಜಪೇಟೆ ಹಾಗೂ ಸೋಮವಾರಪೇಟೆ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲೂ ಮಕ್ಕಳ ತಜ್ಞ ವೈದ್ಯರಿಲ್ಲ. ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಮಕ್ಕಳ ತಜ್ಞರಿದ್ದರೂ, ದೂರದ ಊರುಗಳಿಂದ ಗಂಭೀರವಾಸ್ಥೆ ತಲುಪಿದ ಮಕ್ಕಳನ್ನು ಕರೆದುಕೊಂಡು ಬರುವಷ್ಟರಲ್ಲಿ ಅವರು ಮೃತಪಡುತ್ತಿರುವುದು ಕಂಡು ಬರುತ್ತಿದೆ.

---

# ರಾಗಿ ಕಟಾವು ಯಂತ್ರಕ್ಕೆ 2,700 ಬಾಡಿಗೆ

**• ಉದಯವಾಹಿನಿ ತುಮಕೂರು**

ರಾಗಿ ಕಟಾವು ಮಾಡುವ ಯಂತ್ರಕ್ಕೆ ಪ್ರತಿ ಗಂಟೆಗೆ 2,700 ಬಾಡಿಗೆ ನಿಗದಿಪಡಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ. ಜಿಲ್ಲೆಯಲ್ಲಿ ಬಹುತೇಕ ರೈತರು ರಾಗಿ ಬೆಳೆಯನ್ನು ಯಂತ್ರಗಳ ಮೂಲಕ ಕಟಾವು ಮಾಡಿಸುತ್ತಿದ್ದು, ಪ್ರತಿ ಗಂಟೆಗೆ 2,700 ಮೀರದಂತೆ ಬಾಡಿಗೆ ಪಡೆದುಕೊಳ್ಳಬೇಕು.

ನಿಗದಿಗಿಂತ ಹೆಚ್ಚು ಬಾಡಿಗೆ ಹಣ ತೆಗೆದುಕೊಂಡರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಎಚ್ಚರಿಸಿದ್ದಾರೆ.

ಜಿಲ್ಲೆಯಲ್ಲಿ 1.67 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬಿತ್ತನೆಯಾಗಿದ್ದು, ಈಗಾಗಲೇ ಕೆಲವು ಭಾಗಗಳಲ್ಲಿ ರಾಗಿ ಬೆಳೆ ಕಟಾವು ಪ್ರಾರಂಭಗೊಂಡಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಕಟಾವು ಯಂತ್ರಗಳನ್ನು ತಂದು ಬೆಳೆ ಕಟಾವಿಗೆ ಹೆಚ್ಚಿನ ಮೊತ್ತ ಕೇಳುತ್ತಿರುವ ಬಗ್ಗೆ ರೈತರಿಂದ ದೂರುಗಳು ಬಂದಿವೆ. ಕೃಷಿ ಇಲಾಖೆ ಮತ್ತು ರೈತ ಮುಖಂಡರೊಂದಿಗೆ ಚರ್ಚಿಸಿ ರೈತರಿಗೆ ಆರ್ಥಿಕ ಹೊರೆಯಾಗದಂತೆ ಬೆಲೆ ನಿಗದಿಪಡಿಸಲಾಗಿದೆ ಎಂದು ತಿಳಿಸಿದ್ದಾರೆ. ಬೆಳೆ ಕಟಾವು ಯಂತ್ರಗಳ


ಉದಯವಾಹಿನಿ ಚಿತ್ರ

ಕಾರ್ಯಕ್ಷಮತೆ ಪರಿಶೀಲನೆಗಾಗಿ ಕೃಷಿ ವಿಜ್ಞಾನ ಕೇಂದ್ರದ ನೇತೃತ್ವದಲ್ಲಿ ವಿಶೇಷ ತಂಡಗಳನ್ನು ರಚಿಸಲಾಗುವುದು. ಪ್ರತಿ ತಾಲ್ಲೂಕಿನಲ್ಲಿ ತಹಶೀಲ್ದಾರ್, ಕೃಷಿ ಇಲಾಖೆ, ಪೊಲೀಸ್ ಅಧಿಕಾರಿಗಳು ಸಭೆ ನಡೆಸಿ ತಮ್ಮ ವ್ಯಾಪ್ತಿಯಲ್ಲಿರುವ ಕಟಾವು ಯಂತ್ರಗಳ ಮಾಹಿತಿ ಪಡೆದುಕೊಳ್ಳಬೇಕು.

ಯಂತ್ರಗಳ ಕಾರ್ಯಕ್ಷಮತೆ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದ್ದಾರೆ. ಸಭೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ರಮೇಶ್, ಹಿರೇಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಲೋಗಾನಂದ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ರಂಗಸ್ವಾಮಿ, ಕೃಷಿ ಸಹಾಯಕ ನಿರ್ದೇಶಕರಾದ ಹುಲಿರಾಜ್, ಚಂದ್ರಕುಮಾರ್ ಹಾಜರಿದ್ದರು.

---

# 7 ತಿಂಗಳ ಸಿಲಿಂಡರ್ ಬಿಲ್ ಬಾಕಿ

**• ಉದಯವಾಹಿನಿ, ತುಮಕೂರು**

ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ ಬಳಸುತ್ತಿರುವ ಗ್ಯಾಸ್ ಸಿಲಿಂಡರ್‌ನ 7 ತಿಂಗಳ ಬಿಲ್ ಬಾಕಿ ಉಳಿದಿದ್ದು, ಕಾರ್ಯಕರ್ತೆಯರು ತಮ್ಮ ಸ್ವಂತ ಹಣದಲ್ಲಿ ಅಡುಗೆ ಅನಿಲ ಖರೀದಿಸುತ್ತಿದ್ದಾರೆ.

ಜಿಲ್ಲೆಯಲ್ಲಿ ಒಟ್ಟು 4,199 ಅಂಗನವಾಡಿ ಕೇಂದ್ರಗಳಿದ್ದು, ಬಹುತೇಕ ಕಡೆ ಗ್ಯಾಸ್ ಸಿಲಿಂಡರ್ ಸಮಸ್ಯೆಯಾಗುತ್ತಿದೆ. ಕೆಲವು ಕಡೆ ಜನವರಿಯಲ್ಲಿ ಕೊನೆಯದಾಗಿ ಹಣ ಬಿಡುಗಡೆಯಾದರೆ, ಇನ್ನೂ ಕೆಲವು ಕೇಂದ್ರಗಳಿಗೆ ಮಾರ್ಚ್‌ನಲ್ಲಿ ಹಣ ಬಂದಿದ್ದೇ ಕೊನೆ. ಅಲ್ಲಿಂದ ಇದುವರೆಗೆ ಗ್ಯಾಸ್ ಸಿಲಿಂಡರ್ ಹಣ ಪಾವತಿಯಾಗಿಲ್ಲ.

ಒಂದು ಅಂಗನವಾಡಿ ಕೇಂದ್ರಕ್ಕೆ ಸರ್ಕಾರ ವರ್ಷಕ್ಕೆ 8 ಗ್ಯಾಸ್ ಸಿಲಿಂಡರ್ ಸರಬರಾಜು ಮಾಡುತ್ತಿದೆ. ಬಾಲ ವಿಕಾಸ ಸಮಿತಿ ಮುಖಾಂತರ ಏಜೆನ್ಸಿಗಳಿಂದ ಕೇಂದ್ರಗಳಿಗೆ ಸಿಲಿಂಡರ್ ಪೂರೈಸಲಾಗುತ್ತದೆ. ಏಜೆನ್ಸಿಗಳಿಗೆ ಸಕಾಲಕ್ಕೆ ಬಿಲ್ ಪಾವತಿಯಾಗದ ಕಾರಣ ಕಾರ್ಯಕರ್ತೆಯರಿಂದ ಹಣ ಪಡೆಯಲಾಗುತ್ತಿದೆ. ಕಾರ್ಯಕರ್ತೆಯರು ತಮಗೆ ಸಿಗುವ ಅತ್ಯಲ್ಪ ಸಂಬಳವನ್ನು ಸಿಲಿಂಡರ್‌ಗೆ ವ್ಯಯಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ಮೂರು


ಉದಯವಾಹಿನಿ ಚಿತ್ರ

ತಿಂಗಳಿನಿಂದ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಸಂಬಳ ಪಾವತಿಯಾಗಿರಲಿಲ್ಲ. ಈ ತಿಂಗಳ ಪ್ರಾರಂಭದಲ್ಲಿ ವೇತನ ಸಿಕ್ಕಿದೆ. ಬ್ಯಾಂಕ್ ಖಾತೆಗೆ ಹಣ ಸಂದಾಯವಾದ ನಂತರ ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದ ಕಾರ್ಯಕರ್ತೆಯರಿಗೆ ಗ್ಯಾಸ್ ಸಿಲಿಂಡರ್ ಬಿಲ್ ಹೊರೆಯಾಗಿ ಪರಿಣಮಿಸಿದೆ.

**ನೇಮಕಾತಿಯೂ ವಿಳಂಬ:** ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಹುದ್ದೆಗಳು ಖಾಲಿ ಇದ್ದು, ನೇಮಕಾತಿ ಪ್ರಕ್ರಿಯೆಯೂ ವಿಳಂಬವಾಗಿದೆ.

ಕೆಲವು ಕೇಂದ್ರಗಳಲ್ಲಿ ಕಾರ್ಯಕರ್ತೆಯರು ಒಬ್ಬರೇ ಕೆಲಸ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿ ಸೃಷ್ಟಿಯಾಗಿದೆ.

### ಅಸಮಾಧಾನ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನೇಮಕಾತಿಗಾಗಿ ಕಳೆದ ವರ್ಷ ಎರಡು ಬಾರಿ ಅರ್ಜಿ ಕರೆಯಲಾಗಿದೆ. ನಂತರ ಯಾವುದೇ ಬೆಳವಣಿಗೆಯಾಗಿಲ್ಲ. ಇಲಾಖೆಯ ಅಧಿಕಾರಿಗಳು ಅರ್ಜಿ ಸ್ವೀಕರಿಸಲು ಮಾತ್ರ ಸೀಮಿತರಾಗಿದ್ದಾರೆ. ಸಹಾಯಕಿಯರ ಸೇವೆ ಲಭ್ಯವಾಗದೆ ಗ್ರಾಮೀಣ ಭಾಗದ ಅಂಗನವಾಡಿ ಕೇಂದ್ರಗಳು ಅಧ್ವಾನದ ಸ್ಥಿತಿಗೆ ತಲುಪಿವೆ' ಎಂದು ಕಾರ್ಯಕರ್ತೆಯರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಯದ ಒತ್ತಡವೂ ಹೆಚ್ಚಾಗಿದೆ. ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಸಹಾಯಕಿಯರ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಇದರಿಂದ ಅಂಗನವಾಡಿ ನಡೆಸುವುದೇ ಕಷ್ಟಕರವಾಗಿದೆ.

---

# ದೇವರ ಅಭಿಷೇಕಕ್ಕೂ ಸಲ್ಲದ ಕಾವೇರಿ ನೀರು


**• ಉದಯವಾಹಿನಿ, ಶ್ರೀರಂಗಪಟ್ಟಣ**

ಕಾವೇರಿ ನದಿಯ ನೀರು ತೀವ್ರವಾಗಿ ಮಲಿನಗೊಂಡಿರುವ ಹಿನ್ನೆಲೆಯಲ್ಲಿ ಪಟ್ಟಣ ಹಾಗೂ ಆಸುಪಾಸಿನಲ್ಲಿರುವ ದೇವಾಲಯಗಳಲ್ಲಿ ದೇವರ ಅಭಿಷೇಕಕ್ಕೆ ಈ ನೀರನ್ನು ಬಳಸುವುದನ್ನು ನಿಲ್ಲಿಸಲಾಗಿದೆ.

ಪಟ್ಟಣ ಸಮೀಪದ ಗಂಜಾಂ ಬಳಿಯ ದೊಡ್ಡ ಗೋಸಾಯಿಘಾಟ್‌ನ ಐತಿಹಾಸಿಕ ಕಾಶಿ ವಿಶ್ವನಾಥಸ್ವಾಮಿ ದೇವಾಲಯವು ಕಾವೇರಿ ನದಿಯ ದಡದಲ್ಲೇ ಇದೆ.

ಈ ದೇವಾಲಯ ನದಿಗೆ ಕೇವಲ 15 ಅಡಿಗಳ ಅಂತರದಲ್ಲಿ ಇದ್ದರೂ ದೇವರ ಅಭಿಷೇಕಕ್ಕೆ ಈ ನದಿಯ ನೀರನ್ನು ಬಳಸುತ್ತಿಲ್ಲ. ನದಿಯ ನೀರು ಮಲಿನವಾಗಿರುವುದರಿಂದ ದೇವರ ಅಭಿಷೇಕಕ್ಕೆ ಬಳಸುವುದನ್ನು ನಿಲ್ಲಿಸಲಾಗಿದೆ. ಮೈಸೂರು ಕಡೆಯಿಂದ ಬರುವ ಕೊಳಚೆ ನೀರು, ತಾಲ್ಲೂಕಿನ ಚಂದಗಾಲು ಬಳಿ ಕಾವೇರಿ ನದಿಗೆ ಸೇರುತ್ತಿದೆ. ಕೆಲವೊಮ್ಮ ನದಿಯ ನೀರು ಗಬ್ಬು ವಾಸನೆ ಬೀರುತ್ತಿದೆ. ತ್ಯಾಜ್ಯ ತೇಲಾಡುತ್ತಿರುತ್ತದೆ. ಇಂತಹ ನೀರನ್ನು ದೇವರ ಅಭಿಷೇಕಕ್ಕೆ ಬಳಸುವುದಾದರೂ ಹೇಗೆ?' ಎಂದು ಕಾಶಿ ವಿಶ್ವನಾಥಸ್ವಾಮಿ ದೇವಾಲಯದ ಅರ್ಚಕ ಸುಬ್ರಹ್ಮಣ್ಯ ಪ್ರಶ್ನೆ ಮುಂದಿಡುತ್ತಾರೆ.

'ಗಂಜಾಂ ನಿಮಿಷಾಂಬ ದೇವಾಲಯದಲ್ಲಿರುವ


ಉದಯವಾಹಿನಿ ಚಿತ್ರ

ನಿಮಿಷಾಂಬ ದೇವಿ, ಮೌಕ್ತಿಕೇಶ್ವರ ಇತರ ದೇವರ ಮೂರ್ತಿಗಳ ಅಭಿಷೇಕಕ್ಕೆ ಕಾವೇರಿ ನದಿಯ ನೀರನ್ನು ನೇರವಾಗಿ ಬಳಸುತ್ತಿಲ್ಲ. ಕಾವೇರಿ ನದಿಯಿಂದ ಒಂದು ತಂಬಿಗೆ ನೀರು ತಂದು ಅದನ್ನು ಒಂದು ಬಿಂದಿಗೆ ಶುದ್ಧ ನೀರಿನೊಂದಿಗೆ ಬೆರೆಸಿ ನಂತರ ದೇವರಿಗೆ ಅಭಿಷೇಕ ಮಾಡಲಾಗುತ್ತಿದೆ' ಎಂದು ದೇವಾಲಯದ ಅರ್ಚಕ ಸೂರ್ಯನಾರಾಯಣಭಟ್ ತಿಳಿಸಿದರು. 'ಕಾವೇರಿ ನದಿಗೆ ಮೈಸೂರು ಕಡೆಯಿಂದ ಬರುವ ಮಲಿನ ನೀರಿನ ಜತೆಗೆ ನದಿ ತೀರದ ಜನ ವಸತಿ ಸ್ಥಳಗಳಿಂದಲೂ ಕೊಳಚೆ ನೀರು ನೇರವಾಗಿ ಸೇರುತ್ತಿದೆ. ಶ್ರೀರಂಗಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ರೂಪಿಸಿದ್ದರೂ ಮಲಿನ ನೀರು ನದಿಗೆ ಸೇರುವುದು ತಪ್ಪಿಲ್ಲ. ಮೀನು ಮತ್ತು ಕೋಳಿ ಮಾಂಸ ಮಾರಾಟದ ಅಂಗಡಿಗಳ ತ್ಯಾಜ್ಯವನ್ನು ನದಿಗೆ ತಂದು ಸುರಿಯಲಾಗುತ್ತಿದೆ. ನದಿ ಚರಂಡಿಯಂತಾಗಿದೆ. ಹಾಗಾಗಿ ಈ ನದಿಯಲ್ಲಿ ಸ್ನಾನ ಮಾಡುವುದನ್ನೇ ನಿಲ್ಲಿಸಿದ್ದೇನೆ' ಎಂದು ಗಂಜಾಂ ಆದಿ ಶಂಕರ ಮಠದ ಸ್ವಾಮಿ ಗಣೇಶ ಸ್ವರೂಪಾನಂದಗಿರಿ ಅವರು ಕಾವೇರಿ ನದಿಯ ನೀರಿನ ಮಲಿನತೆಗೆ ಕನ್ನಡಿ ಹಿಡಿದಿದ್ದಾರೆ.

### ಅಧಿಕಾರಿಗಳು ಚಿಂತಿಸುತ್ತಿಲ್ಲ

ನದಿಯ ಪಾವಿತ್ರ್ಯ ಕಾಪಾಡುವ ದಿಸೆಯಲ್ಲಿ ಅಖಿಲ ಭಾರತ ಸನ್ಯಾಸಿಗಳ ಸಂಘದ ಸಾಧು ಸಂತರು, ಸಂಘ ಸಂಸ್ಥೆಗಳಿಂದ ಒಂದು ದಶಕದಿಂದ ಜಾಗೃತಿ ಮೂಡಿಸುವ ಕೆಲಸ ನಡೆಯುತ್ತಿದೆ. ಕಾವೇರಿ ನದಿಯ ಉಗಮ ಸ್ಥಾನದಿಂದ ಅದು ಬಂಗಾಳ ಕೊಲ್ಲಿ ಸೇರುವ ಪೂಂಪುಹಾರ್ ವರೆಗೆ ರಥಯಾತ್ರೆ ನಡೆಸಲಾಗುತ್ತದೆ. ಆದರೆ ಅಧಿಕಾರಿಗಳು ಮತ್ತು ರಾಜಕಾರಣಿಗಳು ಈ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

---

# ಸಿದ್ದರಾಮಯ್ಯ 'ಯೂಟರ್ನ್' ಮುಖ್ಯಮಂತ್ರಿ

**• ಉದಯವಾಹಿನಿ, ಮಡಿಕೇರಿ**



ವಕ್ಫ್ ಆಸ್ತಿ ಒತ್ತುವರಿದಾರರಿಗೆ ನೀಡಿರುವ ನೋಟಿಸ್ ವಾಪಸ್ ಪಡೆಯುತ್ತೇವೆ ಎಂದು ಹೇಳಿರುವ ಸಿದ್ದರಾಮಯ್ಯ ಅವರು 'ಯೂಟರ್ನ್' ಮುಖ್ಯಮಂತ್ರಿ' ಎಂದು ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್ ಟೀಕಿಸಿದರು.

'ಒತ್ತುವರಿದಾರರಿಗೆ ನೋಟಿಸ್ ನೀಡುವುದೇ ತಪ್ಪು ಎಂದು ಹೇಳಿದ ಬಿಜೆಪಿ ಮತ್ತು ಆರ್‌ಎಸ್‌ಎಸ್ ಕಾರ್ಯಸೂಚಿ ಪ್ರಕಾರವೇ ಕಾಂಗ್ರೆಸ್ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಕೇಂದ್ರ ಐ.ಟಿ. ಸೆಲ್‌ಗೆ ಹೆದರಿರುವ ಸಿದ್ದರಾಮಯ್ಯ ನೋಟಿಸ್ ವಾಪಸ್ ಪಡೆಯಲು ನಿರ್ಧರಿಸಿದ್ದಾರೆ. ಇದೊಂದು ಪುಕ್ಕಲು ಸರ್ಕಾರ' ಎಂದು ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

'ಮುಸ್ಲಿಮರನ್ನೆಲ್ಲಾ ಪಾಕಿಸ್ತಾನಕ್ಕೆ ಓಡಿಸುತ್ತೇವೆ ಎಂದು ಬಿಜೆಪಿಯ ಸಿ.ಟಿ.ರವಿ ಪ್ರಚೋದನಾಕಾರಿಯಾಗಿ ಮಾತನಾಡಿದರೂ ಸರ್ಕಾರ ಅವರ ವಿರುದ್ಧ ಪ್ರಕರಣ ದಾಖಲಿಸಿಲ್ಲ. ಜಿ.ಪರಮೇಶ್ವರ ಅವರು ಗೃಹಸಚಿವರಾಗಲು ನಾಲಾಯಕ್ ಆಗಿದ್ದು, ಕೂಡಲೇ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ 1.25 ಲಕ್ಷ ಎಕರೆ ವಕ್ಫ್ ಆಸ್ತಿ ಇದ್ದು, ಅದರಲ್ಲಿ 23ಸಾವಿರ ಎಕರೆ ಮಾತ್ರ ವಕ್ಫ್ ಮಂಡಳಿ ಹಿಡಿತದಲ್ಲಿದೆ. ಉಳಿದದ್ದೆಲ್ಲವೂ ಒತ್ತುವರಿಯಾಗಿದೆ. ಇವರಲ್ಲಿ ರಾಜಕಾರಣಿಗಳು ಹಾಗೂ ಮುಸ್ಲಿಮರೂ ಇದ್ದಾರೆ. ನೋಟಿಸ್ ನೀಡಿ ಒತ್ತುವರಿದಾರರ ಬಳಿ ಇರುವ ದಾಖಲೆಗಳನ್ನು ಪಡೆಯುವುದೇ ತಪ್ಪು ಎಂದರೆ ಹೇಗೆ?' ಎಂದು ಕೇಳಿದರು.

'ವಕ್ಫ್ ಆಸ್ತಿಯನ್ನು ಒತ್ತುವರಿದಾರರಿಂದ ತೆರವುಗೊಳಿಸುವ ಬಗ್ಗೆ ಬಿಜೆಪಿ ಹಿಂದೆ ತನ್ನ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಿದೆ. ಬಸವರಾಜ ಬೊಮ್ಮಾಯಿ ಅವರೂ ಇದೇ ಮಾತುಗಳನ್ನಾಡಿದ್ದರು.

---

# ಮಹದೇಶ್ವರ ಬೆಟ್ಟ ಸಾಲೂರು ಮಠದ ಸ್ವಾಮೀಜಿ ಸಾಧನೆ

## ಪಿಯುಸಿಯಲ್ಲಿ ಅನುತ್ತೀರ್ಣರಾದರೂ ಛಲ ಬಿಡದೇ ವ್ಯಾಸಂಗ ಮಾಡಿ ಸಂಸ್ಕೃತದಲ್ಲಿ ಚಿನ್ನದ ಪದಕದೊಂದಿಗೆ ಎಂಎ ಪದವಿ

**• ಉದಯವಾಹಿನಿ ಚಾಮರಾಜನಗರ**

ಓದಿಗೆ ಯಾವುದೇ ವಯಸ್ಸಿನ, ಹುದ್ದೆಯ ಮಿತಿ ಇರುವುದಿಲ್ಲ. ಆಸಕ್ತಿ ಎನ್ನುವುದು ಬಹಳ ಮುಖ್ಯ, ಇದನ್ನು ಸಾಬೀತುಪಡಿಸಿದ್ದಾರೆ ಕರ್ನಾಟಕದ ಸ್ವಾಮೀಜಿಯೊಬ್ಬರು. ಪಿಯುಸಿಯಲ್ಲಿ ಅನುತ್ತೀರ್ಣರಾದರೂ ಛಲಬಿಡದೇ ವ್ಯಾಸಂಗ ಮಾಡಿ ಸಂಸ್ಕೃತದಲ್ಲಿ ಚಿನ್ನದ ಪದಕದೊಂದಿಗೆ ಎಂಎ ಪದವಿಯನ್ನು ಪಡೆದಿದ್ದೂ ಅಲ್ಲದೇ ಮಠವೊಂದರ ಗುರುಗಳಾಗಿ ಪೀಠ ವಹಿಸಿಕೊಂಡ ನಂತರ ಪಿಎಚ್‌ಡಿಯನ್ನೂ ಮುಗಿಸಿದ್ದಾರೆ.

ಅವರ ಪ್ರಬಂಧಕ್ಕೆ ಸಂಸ್ಕೃತ ವಿಶ್ವವಿದ್ಯಾನಿಲಯದಿಂದ ಪಿಎಚ್‌ಡಿಯೂ ದೊರೆತಿದೆ. ಇದಕ್ಕೆ ಮೆಚ್ಚುಗೆಯೂ ವ್ಯಕ್ತವಾಗಿದೆ. ಸ್ವಾಮೀಜಿ ಅವರ ಅಧ್ಯಯನ ಶೀಲತೆ, ಶಿಕ್ಷಣ ಪಡೆಯಲೇಬೇಕೆಂಬ ಹಂಬಲ, ಹಿರಿಯರ ಮಾರ್ಗದರ್ಶನದೊಂದಿಗೆ ಕಾರ್ಯಸಿದ್ಧಿ ಮಾಡಿಕೊಂಡಿದ್ದರ ಬಗ್ಗೆ ಹಲವು ವಲಯಗಳಿಂದ ಮೆಚ್ಚುಗೆಗಳು ವ್ಯಕ್ತವಾಗಿವೆ

ಕರ್ನಾಟಕದ ತುತ್ತ ತುದಿಯಲ್ಲಿರುವ ಮಲೈಮಹದೇಶ್ವರ ಬೆಟ್ಟ ಪ್ರಸಿದ್ಧ ಯಾತ್ರಾ ಸ್ಥಳ. ಮಲೈಮಹದೇಶ್ವರ ಬೆಟ್ಟದ ನಂಟು ಹೊಂದಿರುವುದು ಶ್ರೀ ಕ್ಷೇತ್ರ ಸಾಲೂರು ಬೃಹನ್ಮಠ. ಶಿಕ್ಷಣ, ಅನ್ನದಾಸೋಹ, ಧಾರ್ಮಿಕ ಚಟುವಟಿಕೆ. ಸಾಮಾಜಿಕ ಕಾರ್ಯಗಳ ಹಿನ್ನೆಲೆಯೊಂದಿಗೆ ಮಠ ಬೆಳೆದು ಬಂದಿದೆ.

> ಕಲಿಯಬೇಕು ಎಂಬ ಹಂಬಲವಿತ್ತು. ಆದರೂ ಪಿಯುಸಿಯಲ್ಲಿ ಅಡಚಣೆಗಳಾದವು. ಅದನ್ನೇ ಸವಾಲಿ ಸ್ವೀಕರಿಸಿದಾಗ ಎಂಫಿಎಲ್‌ವರೆಗೂ ಶಿಕ್ಷಣ ಪಡೆಯಲು ಸಾಧ್ಯವಾಯಿತು. ಬಳಿಕ ನನಗೆ ಅಕ್ಷರ ದಾಸೋಹ ನೀಡಿದ್ದ ಮಠದ ಪೀಠಾಧಿಪತಿಯಾಗುವ ಅವಕಾಶ ಬಂದಿತು. ಬಳಿಕ ಶಿಕ್ಷಣ ಮುಂದುವರೆಸಿ ಈಗ ಪಿಎಚ್‌ಡಿಯೂ ಮುಗಿದಿದೆ. ಡಾ.ಶರಶ್ಚಂದ್ರ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಇದೆಲ್ಲವೂ ಸಾಧ್ಯವಾಗಿದೆ
> **- ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ**

ಮಹದೇಶ್ವರರು ಕಾಯಕತತ್ವ ಪ್ರತಿಪಾದಕರಲ್ಲಿ ಪ್ರಮುಖರು. ಕಂದಾಚಾರ, ಮೌಢ್ಯ ಭಾವನೆಗಳ ವಿರುದ್ಧ ಹೋರಾಟ ನಡೆಸಿದವರು. ಯಾವುದೇ ಜಾತಿಯ ಜನರಲ್ಲಿ ಬೇಧ ಭಾವ ತೋರದೇ ಎಲ್ಲರನ್ನೂ


ಉದಯವಾಹಿನಿ ಚಿತ್ರ

ಪ್ರೀತಿಸಿದವರು. ಇದೇ ಕಾರಣಕ್ಕೆ ಜಾತಿಯಲ್ಲಿ ವೀರಶೈವ ಲಿಂಗಾಯತರಾಗಿದ್ದರೂ ಮಹದೇಶ್ವರರು ತಮ್ಮ ಪೂಜೆಗೆ ಮಾಂಸಾಹಾರಿ ಬೇಡರ ಕುಲದವರನ್ನೇ ತಮ್ಮನ್ನು ಮುಟ್ಟಿ ಪೂಜೆ ಮಾಡುವ ತಂಬಡಿಗಳನ್ನಾಗಿ ಮಾಡಿಕೊಂಡರು. ಅವರಿಗೆ ಇಷ್ಟಲಿಂಗ ಧಾರಣೆ ಮಾಡಿದರು. ಅಲ್ಲಿನ ಜನರು ಸೋಲಿಗರು, ಬೇಡರು, ಕಾಡುಕುರುಬರು ಮೊದಲಾದ ನಾಡಿನಿಂದ ದೂರ ಉಳಿದ ಅವಿದ್ಯಾವಂತ ಜನರಿಗೆ ನಾಗರಿಕತೆ ಇರದ ಜನರಿಗೆ ಶಿಕ್ಷಣ ನೀಡಬೇಕು ಎಂಬ ಉದ್ದೇಶದಿಂದಲೇ ತಾವು ನೆಲೆಸಿರುವ ಗುಡಿಯ ಸಮೀಪದಲ್ಲೇ ಕಂಚಿ ಕಾಳಹಸ್ತಿ ತೆಲಂಗಾಣ ಮಠ (ಸಾಲೂರು ಬೃಹನ್ಮಠ) ಸ್ಥಾಪಿಸಿದರು. ಈ ಮಠಕ್ಕೆ ಪಟ್ಟದ ಗುರುಸ್ವಾಮಿಗಳು ಪೀಠಾಧಿಪತಿಗಳಾಗಿದ್ದರು. ವಯಸ್ಸಿನ ಕಾರಣಕ್ಕೆ ಅವರು ನಾಲ್ಕು ವರ್ಷದ ಹಿಂದೆ ಹನೂರು ತಾಲ್ಲೂಕಿನ ಬಂಡಳ್ಳಿ ಗ್ರಾಮದ ನಾಗೇಂದ್ರ ಎಂಬುವವರಿಗೆ ಪೀಠವನ್ನು ಬಿಟ್ಟು ಕೊಟ್ಟರು.

### 4 ವರ್ಷದ ಸತತ ಅಧ್ಯಯನ

ಪೀಠಾಲಂಕಾರ ಮಾಡಿದ ಮೇಲೆ ದೊಡ್ಡ ಮಠದ ಉಸ್ತುವಾರಿ ನೋಡಿಕೊಳ್ಳುವ ಸವಾಲು. ಶಿಕ್ಷಣ ಮುಂದುವರೆಸಬೇಕು ಎಂಬ ಹಂಬಲ. ಇದಕ್ಕೆಲ್ಲಾ ಕುಂದೂರು ಮಠದ ಡಾ.ಶರಶ್ಚಂದ್ರ ಸ್ವಾಮೀಜಿ ಮಾರ್ಗದರ್ಶಕರಾಗಿ ನಿಂತರು. ಅವರ ಮಾರ್ಗದರ್ಶನದಲ್ಲಿಯೇ ಪಿಎಚ್‌ಡಿಗೂ ನೋಂದಣಿ ಮಾಡಿಸಿದರು. ನಾಲ್ಕು ವರ್ಷದ ಸತತ ಅಧ್ಯಯನದ ನಂತರ ಈಗ ಅವರ ಪ್ರಬಂಧವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ಪಿಎಚ್‌ಡಿ ಪದವಿಗೆ ಅಂಗೀಕರಿಸಿದೆ. ಕ್ರಿಯಾ ಕರ್ಮಗಳಿಗೆ ಸಂಬಂಧಿಸಿದ ಪ್ರಬಂಧ ಅವರದ್ದು. ಈ ವರ್ಷದ ಘಟಿಕೋತ್ಸವದಲ್ಲಿ ಅವರಿಗೆ ಪಿಎಚ್‌ಡಿ ಪ್ರದಾನ ಆಗಲಿದೆ.

ಪೀಠ ಅಲಂಕರಿಸಿದ್ದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅವರಿಗೆ ಶಿಕ್ಷಣ ಪಡೆಯಬೇಕು ಎಂಬ ಹಂಬಲ. ಮಲೈ ಮಹದೇಶ್ವರ ಬೆಟ್ಟದ ಶಾಲೆಯಲ್ಲಿಯೇ ಶಿಕ್ಷಣ ಪಡೆದು. ತುಮಕೂರಿನ ಸಿದ್ದಗಂಗಾ ಮಠದಲ್ಲಿ ಪಿಯುಸಿಯಲ್ಲಿ ಅನುತ್ತೀರ್ಣರಾದರೂ ಛಲ ಬಿಡದೇ ಪಿಯುಸಿ ಶಿಕ್ಷಣವನ್ನು ಪೂರೈಸಿದರು.

ಮೈಸೂರು ಮಹಾರಾಜ ಸಂಸ್ಕೃತ ಕಾಲೇಜು ಅವರ ಪದವಿ ಕನಸಿಗೆ ನೀರೆರೆಯಿತು. ಅಲ್ಲಿ ಪದವಿ ಮುಗಿಸಿ ನಂತರ ಸಂಸ್ಕೃತದಲ್ಲಿ ಎಂಎ ಪಡೆಯಲು ಸೇರಿದ್ದು ಮೈಸೂರು ವಿಶ್ವವಿದ್ಯಾನಿಲಯ. ಅಲ್ಲಿಯೂ ಚಿನ್ನದ ಪದಕ ಹಾಗೂ ನಗದು ಬಹುಮಾನದೊಂದಿಗೆ ಎಂಎ ಪೂರೈಸಿದರು.

ಜೆಎಸ್‌ಎಸ್ ಸಂಸ್ಥೆಯಲ್ಲಿ ಆಗಮ ಶಿಕ್ಷಣವನ್ನೂ ಪಡೆದುಕೊಂಡರು. ಸಂಸ್ಕೃತ ವಿಶ್ವವಿದ್ಯಾನಿಲಯದಲ್ಲಿ ಎಂಫಿಲ್ ಕೂಡ ಮುಗಿಸಿದರು. ಈ ಹೊತ್ತಿಗೆ ಅವರನ್ನು ಕರೆದಿದ್ದು ಶಿಕ್ಷಣ, ನೈತಿಕ ಬಲ ನೀಡಿದ್ದ ಸಾಲೂರು ಮಠ. ಸಂಬಂಧಿಕರಿಗೆ ಪೀಠವನ್ನು ನೀಡುತ್ತಿದ್ದಾರೆ ಎನ್ನುವ ಆಕ್ಷೇಪಗಳಿಂದ ಕುಗ್ಗದೇ ಪೀಠವನ್ನು ವಹಿಸಿಕೊಂಡರು ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ.

---

# ಮಿನಿ ನ್ಯೂಸ್

## ಜೂಜು ಅಡ್ಡೆ ಮೇಲೆ ಪೊಲೀಸರ ದಾಳಿ

**• ಉದಯವಾಹಿನಿ, ಕುದೂರು**

ಜೂಜು ಅಡ್ಡೆ ಮೇಲೆ ಕುದೂರು ಪೊಲೀಸರು ದಾಳಿ ನಡೆಸಿ ಇಬ್ಬರು ಜೂಜುಕೋರರನ್ನು ಬಂಧಿಸಿ, ನಗದನ್ನು ವಶಪಡಿಸಿಕೊಂಡಿದ್ದಾರೆ. ಕಾರ್ಯಾಚರಣೆಯಲ್ಲಿ ನಾಲ್ವರು ಜೂಜುಕೋರರು ಪರಾರಿಯಾಗಿದ್ದಾರೆ. ಕುಣಿಗಲ್ ತಾಲ್ಲೂಕಿನ ಕೆಂಪಸಾಗರದ ಲೋಕೇಶ್, ಮುತ್ತಸಾಗರದ ಅಬೀಬ್ ಉಲ್ಲಾರ ಬಂಧಿತರು.ಇವರಿಂದ 5,200 ಹಣ ಮತ್ತು ಮೂರು ಬೈಕ್ ವಶಪಡಿಸಿಕೊಳ್ಳಲಾಗಿದೆ.ತಿಪ್ಪಸಂದ್ರ ಹೋಬಳಿಯ ಸಂಕೀಘಟ್ಟ ಗ್ರಾಮದ ಅಡಿಕೆ ತೋಟದ ಬಳಿ 5-6 ಮಂದಿ ಜೂಜು ಆಡುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ಕುದೂರು ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಶ್ರೀನಿವಾಸ್ ಮತ್ತು ತಂಡದವರು ದಾಳಿ ನಡೆಸಿತು.ದಾಳಿಯ ವೇಳೆ ಕುಣಿಗಲ್ ತಾಲ್ಲೂಕಿನ ಶೆಟ್ಟಿಗೆರೆಯ ಶಂಕರೇಗೌಡ, ಕಾರ್ತಿಕ್, ಬಾಗೇನಹಳ್ಳಿಯ ಪ್ರದೀಪ್, ತಿಪ್ಪಸಂದ್ರದ ಚಿಗಳೂರು ಗ್ರಾಮದ ಕುಮಾರ್ ತಪ್ಪಿಸಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಕಾಡಾನೆ ದಾಳಿ: ರೈತನಿಗೆ ಗಾಯ

**• ಉದಯವಾಹಿನಿ, ಕನಕಪುರ**

ತಾಲ್ಲೂಕಿನ ಕಸಬಾ ಹೋಬಳಿ ದೊಡ್ಡ ಬೆಟ್ಟಳ್ಳಿ ಗ್ರಾಮದಲ್ಲಿ ರಾಗಿ ಹೊಲ ಕಾಯಲು ಹೋಗಿದ್ದ ರೈತನ ಮೇಲೆ ಕಾಡಾನೆ ದಾಳಿ ನಡೆಸಿದ್ದು, ರೈತ ಗಂಭೀರವಾಗಿ ಗಾಯಗೊಂಡಿದ್ದಾರೆ.ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ವೆಂಕಟಾಚಲಯ್ಯ (67) ಆನೆ ದಾಳಿಗೆ ಸಿಲುಕಿ ಗಾಯಗೊಂಡವರು.ದಾಳಿಯಲ್ಲಿ ಸೊಂಟ ಮತ್ತು ಕಾಲುಮುರಿದಿದೆ.

ಕನಕಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಸಂಜಯ್ ಗಾಂಧಿ ಆಸ್ಪತ್ರೆಗೆ ದಾಖಲಿಸಲಾಗಿದೆ. ವೆಂಕಟಾಚಲಯ್ಯ ಕಾಡಂಚಿನ ತಮ್ಮ ಜಮೀನಿನಲ್ಲಿ ರಾಗಿ ಕಾಯಲು ಮಂಗಳವಾರ ರಾತ್ರಿ ಮತ್ತಿಬ್ಬರು ರೈತಾರಾದ ಸಂಜೀವಯ್ಯ ಮತ್ತು ಹನುಮಂತು ಅವರ ಜೊತೆ ಹೋಗಿದ್ದರು.ಬೆಳಗಿನ ಜಾವ ಜಮೀನಿನಿಂದ ಮನೆಗೆ ಬರುತ್ತಿದ್ದಾಗ ಮರದ ಮರೆಯಲ್ಲಿದ್ದ ಕಾಡಾನೆಯು ಏಕಾಏಕಿ ವೆಂಕಟಾಚಲಯ್ಯ ಅವರ ಮೇಲೆ ದಾಳಿ ನಡೆಸಿ, ಸೊಂಡಿಲಿನಿಂದ ಎತ್ತಿ ಬಿಸಾಡಿದೆ.ಈ ವೇಳೆ ಅವರು ಜೋರಾಗಿ ಕಿರುಚಿಕೊಂಡರು. ಆಗ ಅಕ್ಕ ಪಕ್ಕದ ಜಮೀನಿನಲ್ಲಿ ಕಾವಲು ಕಾಯಲು ಜೊತೆಯಲ್ಲಿ ಹೋಗಿದ್ದ ಹನುಮಂತ ಮತ್ತು ಸಂಜೀವಯ್ಯ ಓಡಿ ಬಂದು ಪಟಾಕಿ ಸಿಡಿಸಿದ್ದಾರೆ. ಇದರಿಂದ ಹೆದರಿದ ಕಾಡಾನೆಯು ವೆಂಕಟಾಚಲಯ್ಯ ಅವರನ್ನು ಬಿಟ್ಟು ಓಡಿ ಹೋಗಿದೆ.

## ಕೆರೆಗೆ ಹಾರಿ ಯುವತಿ ಆತ್ಮಹತ್ಯೆ

**• ಉದಯವಾಹಿನಿ, ರಾಮನಗರ**

ಇಂದಿನ ಯುವಜನತೆಯ ಮನಸ್ಸು ಎಷ್ಟು ಸೂಕ್ಷ್ಮವಾಗಿದೆ ಎಂದರೆ ಕ್ಷುಲ್ಲಕ ಕಾರಣಕ್ಕೂ ಕೂಡ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ಇದೀಗ ರಾಮನಗರ ಜಿಲ್ಲೆಯ ಕನಕಪುರದಲ್ಲೂ ಕೂಡ ಅಂತಹ ಘಟನೆ ನಡೆದಿದ್ದು, ಮೊಬೈಲ್ ನೋಡುವ ವಿಚಾರಕ್ಕೆ ಸಹೋದರಿಯರಿಬ್ಬರ ನಡುವೆ ಗಲಾಟೆ ನಡೆದಿದ್ದು ಇದರಲ್ಲಿ ಓರ್ವ ಯುವತಿ ಮನನೊಂದು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಹೌದು ಮೊಬೈಲ್ ನೋಡುವ ವಿಚಾರಕ್ಕೆ ಜಗಳವಾಗಿ ಕೆರೆಗೆ ಬಿದ್ದು ಯುವತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕನಕಪುರ ತಾಲ್ಲೂಕಿನ ಕೂನೂರು ಗ್ರಾಮದಲ್ಲಿ ನಡೆದಿದೆ. ಕೂನೂರು ಗ್ರಾಮದ ನಿವಾಸಿ ಲಾವಣ್ಯ(17) ಮೃತ ದುರ್ದೈವಿ ಎಂದು ತಿಳಿದುಬಂದಿದೆ.

ಮೊಬೈಲ್ ನೋಡುವ ವಿಚಾರವಾಗಿ ಲಾವಣ್ಯ ತನ್ನ ಸಹೋದರಿಯೊಂದಿಗೆ ಗಲಾಟೆ ಮಾಡಿಕೊಟ್ಟಿದ್ದಾಳೆ. ಇದರಿಂದ ಬೇಸರಗೊಂಡಿದ್ದ ಲಾವಣ್ಯ ಅಜ್ಜಿ ಮನೆಗೆ ಹೋಗುವುದಾಗಿ ತಿಳಿಸಿ ಮನನೊಂದು ಬಳಿಕ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಘಟನೆ ಕುರಿತಂತೆ ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ.

## 10ರೂ. ನಾಣ್ಯ ನಕಲಿಯಲ್ಲ: ಡಿಸಿ

**• ಉದಯವಾಹಿನಿ ಚಾಮರಾಜನಗರ**

10 ರೂಪಾಯಿ ನಾಣ್ಯವನ್ನು ಎಲ್ಲಿಯೂ ಪಡೆಯುತ್ತಿರಲಿಲ್ಲ. ಏಕೆಂದರೆ ಇದು ರದ್ದಾಗಿದೆ ಎನ್ನುವ ವದಂತಿಗಳು ಹರಡಿದ್ದವು. ಇದೇ ಜನರ ಮನಸ್ಸಲ್ಲಿ ಕುಳಿತುಕೊಂಡಿದ್ದು, ಯಾರೇ ಈ ನಾಣ್ಯವನ್ನೂ ತೆಗೆದುಕೊಳ್ಳಲು ಹಿಂದೇಟು ಹಾಕುತ್ತಿದ್ದರು. ಆದರೆ, ಇದು ರದ್ದಾಗಿಲ್ಲ, ಚಲಾವಣೆಯಲ್ಲಿದೆ ಎಂದು ಅಧಿಕಾರಿಗಳು ಮನವರಿಕೆ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಸಾರ್ವಜನಿಕರು ದಿನನಿತ್ಯದ ವಹಿವಾಟುಗಳಲ್ಲಿ 10 ರೂಪಾಯಿ ನಾಣ್ಯಗಳನ್ನು ಬಳಸಬೇಕು. ಈ ಸಂಬಂಧ ಇರುವ ಆಧಾರ ರಹಿತ ವದಂತಿಗಳಿಗೆ ಕಿವಿಗೊಡಬಾರದು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಮನವಿ ಮಾಡಿದರು. 10 ರೂಪಾಯಿ ಬೆಲೆಯ ನಕಲಿ ನಾಣ್ಯಗಳು ಚಾಲ್ತಿಯಲ್ಲಿವೆ ಎಂಬ ವದಂತಿಗಳು ಹರಿದಾಡುತ್ತಿರುವುದು ಗಮನಕ್ಕೆ ಬಂದಿದೆ. ಈ ತಪ್ಪು ಮಾಹಿತಿಯಿಂದಾಗಿ ಜನಸಾಮಾನ್ಯರು 10 ರೂಪಾಯಿ ನಾಣ್ಯಗಳನ್ನು ಸ್ವೀಕರಿಸಲು ಹಿಂಜರಿಯುತ್ತಿರುವುದು ಗಮನಕ್ಕೆ ಬಂದಿದೆ. 10 ರೂಪಾಯಿ ನಾಣ್ಯವು ರಿಸರ್ವ್ ಬ್ಯಾಂಕ್ ನೀಡಿದ ಕಾನೂನು ಬದ್ಧ ಮತ್ತು ದೇಶಾದ್ಯಂತ ಬಳಕೆಗೆ ಮಾನ್ಯವಾಗಿರುತ್ತದೆ ಎಂದು ಸ್ಪಷ್ಟಪಡಿಸುತ್ತಿದ್ದೇವೆ. ಎಲ್ಲಾ ರಾಜ್ಯಗಳಲ್ಲಿ ದೈನಂದಿನ ವಹಿವಾಟುಗಳಲ್ಲಿ ಈ ನಾಣ್ಯವನ್ನು ಸ್ವೀಕರಿಸಲಾಗುತ್ತಿದೆ ಮತ್ತು ಬಳಸಲಾಗುತ್ತಿದೆ ಎಂದು ಡಿಸಿ ಹೇಳಿದ್ದಾರೆ.

## ಮುಡಾ ಕಚೇರಿಯಲ್ಲಿ ಸಾಮಾನ್ಯ ಸಭೆ

**• ಉದಯವಾಹಿನಿ ಮೈಸೂರು**

ಮೈಸೂರು ಮುಡಾ ಕಚೇರಿಯಲ್ಲಿ ಸಾಮಾನ್ಯ ಸಭೆ ನಡೆಯುತ್ತಿದ್ದು, ಡಿಸಿ ಲಕ್ಷ್ಮೀಕಾಂತ್ ರೆಡ್ಡಿ ನೇತೃತ್ವದಲ್ಲಿ ಮೀಟಿಂಗ್ ಸಾಗುತ್ತಿದೆ. 50:50 ಅನುಪಾತದಲ್ಲಿ ನಡೆದ ಹಗರಣ ಬಳಿಕ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮೊದಲ ಸಭೆ ಆರಂಭಗೊಂಡಿದೆ. ಸಿಎಂ ಸಿದ್ದರಾಮಯ್ಯ ಆಪ್ತರಲ್ಲಿ ಒಬ್ಬರಾಗಿದ್ದ ಕೆ.ಮರಿಗೌಡ ಅವರನ್ನು ಅಧ್ಯಕ್ಷ ಸ್ಥಾನದಿಂದ ಬದಲಿಸಿದ ನಂತರ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಅವರ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಅವರ ಅಧ್ಯಕ್ಷತೆಯಲ್ಲಿಯೇ ಮಹತ್ವದ ಸಭೆ ಶುರುವಾಗಿದ್ದು, ಮುಡಾ ಆಡಳಿತ ಸುಧಾರಣೆ ನಿಟ್ಟಿನಲ್ಲಿ ಪ್ರಮುಖ ನಿರ್ಣಯ ಕೈಗೊಳ್ಳುವ ನಿರೀಕ್ಷೆಯಿದೆ. ಜನ ಸಾಮಾನ್ಯರಿಗೆ ತೊಂದರೆಯಾದ ಹಿನ್ನೆಲೆಯಲ್ಲಿ ಇಂದು ಸಭೆ ಕರೆದು, ಚರ್ಚಿಸಲಾಗುತ್ತಿದೆ. ಸಭೆಯಲ್ಲಿ ಶಾಸಕರಾದ ಹರೀಶ್ ಗೌಡ, ಶ್ರೀವತ್ಸ ಹಾಗೂ ಜಿ.ಟಿ. ದೇವೇಗೌಡ ಸೇರಿದಂತೆ ಹಲವರು ಭಾಗಿಯಾಗಿದ್ದಾರೆ. ಜನ ಸಾಮಾನ್ಯರ ಒತ್ತಾಯದ ಮೇರೆಗೆ ಹಾಗೂ ಜನರಿಗೆ ಆಗುತ್ತಿರುವ ತೊಂದರೆಗಳ ಪರಿಹಾರಕ್ಕಾಗಿ ಮುಡಾದ ಇಂದಿನ ಸಾಮಾನ್ಯ ಸಭೆ ನಡೆಯುತ್ತಿದೆ.

ಸಭೆಗೂ ಮುನ್ನ ಶಾಸಕ ಜಿಟಿಡಿ ಪ್ರತಿಕ್ರಿಯೆ ಕೊಟ್ಟಿದ್ದು,50:50 ಅನುಪಾತದಲ್ಲಿ ನಿವೇಶನ ಹಂಚಿಕೆ, ಪ್ರಕ್ರಿಯೆ ರದ್ದು ಮಾಡಿ ಎಂದು ಹೇಳುವುದಿಲ್ಲ. ಅಕ್ರಮವಾಗಿ ಹಂಚಿಕೆಯಾಗಿರುವ 50:50 ಅನುಪಾತದ ನಿವೇಶನ ವಾಪಸ್ ಪಡೆಯಿರಿ ಎಂದು ಹೇಳುತ್ತೇನೆ ಎಂದು ಶಾಸಕ ಜಿಟಿಡಿ ಹೇಳಿದ್ದಾರೆ.

ಅಂತರಾಳದಿಂದ..
EDITORIAL

# ಅಪೌಷ್ಟಿಕ ಭಾರತದ ಮುಂದಿರುವ ಸವಾಲು

ಇತ್ತೀಚಿನ ದಿನಗಳಲ್ಲಿ ಸಾಲು ಸಾಲಾಗಿ ಹೊರ ಬೀಳುತ್ತಿರುವ ಸಾಮಾಜಿಕ ವಲಯಗಳಿಗೆ ಸಂಬಂಧಿಸಿದ ವರದಿಗಳು ಭಾರತದ ಅಭಿವೃದ್ಧಿಯ ಸ್ಥಿತಿಗತಿಯನ್ನು ಜಗತ್ತಿನ ಮುಂದೆ ತೆರೆದಿಡುತ್ತಿವೆ. ಪ್ರಧಾನಿ ಮೋದಿ ಮತ್ತು ಅವರಿಂದ ನಿಯಂತ್ರಿಸಲ್ಪಡುತ್ತಿರುವ ಮಾಧ್ಯಮಗಳು ಕಟ್ಟಿಕೊಟ್ಟ ಭಾರತದ ಬಣ್ಣ ಕರಗುತ್ತಿರುವ ಲಕ್ಷಣಗಳು ಈ ವರದಿಗಳಿಂದ ಬೆಳಕಿಗೆ ಬರುತ್ತಿವೆ. ಕಡು ಬಡತನ ಮತ್ತು ಹಸಿವಿನ ಸೂಚ್ಯಂಕದಲ್ಲಿ ಭಾರತದ ಕಳವಳಕಾರಿ ಸ್ಥಾನವನ್ನು ಸೂಚಿಸಿದ ಬೆನ್ನಿಗೇ ಭಾರತದಲ್ಲಿ ಹೆಚ್ಚುತ್ತಿರುವ ಕ್ಷಯ ರೋಗಗಳ ಬಗ್ಗೆಯೂ ವಿಶ್ವಸಂಸ್ಥೆ ಬೊಟ್ಟು ಮಾಡಿ ತೋರಿಸಿದೆ. ವಿಶ್ವದಲ್ಲೇ ಅತಿ ಹೆಚ್ಚು ಕ್ಷಯರೋಗಗಳು ಭಾರತದಲ್ಲಿ ಪತ್ತೆಯಾಗಿವೆ ಎನ್ನುವ ಅಂತವನ್ನು ವರದಿ ಹೇಳುತ್ತದೆ. ಕ್ಷಯ ರೋಗವು ಹಸಿವು ಮತ್ತು ಅಪೌಷ್ಟಿಕತೆಯೊಂದಿಗೆ ನೇರ ಸಂಬಂಧವನ್ನು ಹೊಂದಿದೆ. ಅದುದರಿಂದ ಹೆಚ್ಚುತ್ತಿರುವ ಕ್ಷಯ ರೋಗದ ಮೂಲ ಕಾರಣಗಳನ್ನು ಹುಡುಕಿ ಅದಕ್ಕೆ ಪರಿಹಾರವನ್ನು ಹುಡುಕುವುದು ಅತ್ಯಗತ್ಯವಾಗಿದೆ.

**2024ರ ಜಾಗತಿಕ ಹಸಿವು ಸೂಚ್ಯಂಕ (ಜಿಎಚ್ಐವು ಭಾರತದ ಅಪೌಷ್ಟಿಕತೆಯ ಬಗ್ಗೆ ಗಂಭೀರ ಕಳವಳವನ್ನು ಹುಟ್ಟುಹಾಕಿದೆ. ಅಪೌಷ್ಟಿಕತೆಯ ಪ್ರಮಾಣ ಮತ್ತು ಆಹಾರ ಅಭದ್ರತೆಯ ಅಗಾಧತೆಯನ್ನು ತೆರೆದಿಟ್ಟಿರುವ ವರದಿಯು ಕೆಲವು ಆಘಾತಕಾರಿ ಅಂಕಿಅಂಶಗಳನ್ನು ಮುಂದಿಟ್ಟಿದೆ. ಮುಖ್ಯವಾಗಿ ಭಾರತದಲ್ಲಿ ಸುಮಾರು 20 ಕೋಟಿ ಜನರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಇದು ಭಾರತದ ಒಟ್ಟು ಜನಸಂಖ್ಯೆಯ 14 ಶೇಕಡದಷ್ಟಾಗಿದೆ. ಅದೂ ಅಲ್ಲದೆ, ಇದು ಬ್ರೆಝಿಲ್‌ನ ಒಟ್ಟು ಜನಸಂಖ್ಯೆಗೆ ಬಹುತೇಕ ಸಮವಾಗಿದೆ.**

ಜಿಎಚ್ಐ 2024ರ ವರದಿಯ ಪ್ರಕಾರ, ಹಸಿವು ಸೂಚ್ಯಂಕದಲ್ಲಿ ಭಾರತವು 127 ದೇಶಗಳ ಪಟ್ಟಿಯಲ್ಲಿ 105ರಲ್ಲಿದೆ. ಪಟ್ಟಿಯಲ್ಲಿ ಭಾರತದ ಸ್ಥಾನವು ಗಂಭೀರ ವಿಭಾಗದಲ್ಲಿ ಬರುತ್ತದೆ. ಇದು ಭಾರತದ ಆಹಾರ ಭದ್ರತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ಅದರಲ್ಲೂ ಮುಖ್ಯವಾಗಿ, ಭಾರತವು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂಬ ಹೆಗ್ಗಳಿಕೆಯನ್ನು ಗಳಿಸಿಕೊಳ್ಳುತ್ತಿರುವ ಹೊತ್ತಿನಲ್ಲೇ ಈ ಆಘಾತಕಾರಿ ವಿಷಯ ಹೊರಬಿದ್ದಿದೆ ಭಾರತವು 273 ಜಿಎಚ್ಐ ಅಂಕದೊಂದಿಗೆ ಪಟ್ಟಿಯಲ್ಲಿ 105ನೇ ಸ್ಥಾನವನ್ನು ಪಡೆದುಕೊಂಡಿದ್ದು, ಜಾಗತಿಕ ಮಾನದಂಡಗಳಿಗೆ ಹೋಲಿಸಿದರೆ ಭಾರತದ ಪರಿಸ್ಥಿತಿಯು ಕಳವಳಕಾರಿಯಾಗಿದೆ. ಅಂಕಿಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮತ್ತು ನೀತಿ ಆಯೋಗ ಹೊರಡಿಸಿರುವ ಅಂಕಿಅಂಶಗಳನ್ನು ಆಧರಿಸಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ. ಭಾರತ ಈ ವರದಿಯನ್ನು ನಿರಾಕರಿಸಿದೆಯಾದರೂ, ವಾಸ್ತವವನ್ನು ಮುಚ್ಚಿಟ್ಟಷ್ಟೂ ಅದು ಇನ್ನಷ್ಟು ಬಿಗಡಾಯಿಸುತ್ತದೆ ಎನ್ನುವ ವಾಸ್ತವವನ್ನು ಸರಕಾರ ಅರ್ಥ ಮಾಡಿಕೊಳ್ಳಬೇಕಾಗಿದೆ. ಮಕ್ಕಳ ಬೆಳವಣಿಗೆ ಸ್ಥಗಿತ. ಎತ್ತರಕ್ಕೆ ತಕ್ಕ ತೂಕದ ಕೊರತೆ, ಐದು ವರ್ಷಕ್ಕಿಂತ ಕೆಳಗಿನ ಮಕ್ಕಳ ಸಾವಿನ ದರ ಮತ್ತು ಪೌಷ್ಟಿಕ ಆಹಾರದ ಕೊರತೆ– ಈ ಮಾನದಂಡಗಳನ್ನು ಆಧರಿಸಿ ಜಿಎಚ್ಐ ವರದಿಯನ್ನು ಸಿದ್ಧಪಡಿಸಲಾಗುತ್ತದೆ. ಭಾರತದಲ್ಲಿ ಬೆಳವಣಿಗೆ ಸ್ಥಗಿತ 35.5 ಶೇಕಡು ಮತ್ತು ಎತ್ತರಕ್ಕೆ ತಕ್ಕ ತೂಕದ ಕೊರತೆ ಅಗಾಧ ಪ್ರಮಾಣದಲ್ಲಿ ಚಾಲ್ತಿಯಲ್ಲಿದೆ.ಈ ಸಮಸ್ಯೆಗಳಿಗೆ ಪ್ರಮುಖ ಕಾರಣಗಳೆಂದರೆ ಪೌಷ್ಟಿಕಾಂಶಗಳ ಕೊರತೆ ಮತ್ತು ಆರೋಗ್ಯ ಸೇವೆಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲದಿರುವುದು. ಅದೂ ಅಲ್ಲದೆ, ಭಾರತದಲ್ಲಿ ಐದು ವರ್ಷಕ್ಕಿಂತ ಕೆಳಗಿನ ಮಕ್ಕಳ ಮರಣ ದರ 1,000ದಲ್ಲಿ 26 ಆಗಿದೆ. ಇದು ದೇಶದ ಆರೋಗ್ಯ ರಕ್ಷಣೆ ವ್ಯವಸ್ಥೆಯ ದೌರ್ಬಲ್ಯವನ್ನು ತೋರಿಸುತ್ತದೆ ಭಾರತದಲ್ಲಿ ಅಗಾಧ ಪ್ರಮಾಣದ ಅಪೌಷ್ಟಿಕತೆಗೆ ಸರಕಾರದ ವೈಫಲ್ಯಗಳೇ ಕಾರಣ ಎಂದು ಜಾಗತಿಕ ಹಸಿವು ಸೂಚ್ಯಂಕ ಹೇಳುತ್ತದೆ.

ಭಾರತವು ತನ್ನ ಜನಸಂಖ್ಯೆಯ ಪ್ರಯೋಜನವನ್ನು ಪಡೆದುಕೊಳ್ಳಬೇಕಾದರೆ, ತನ್ನ ಜನರಿಗೆ ಸಾಕಷ್ಟು ಪ್ರಮಾಣದಲ್ಲಿ ಆಹಾರ ಮತ್ತು ಪೌಷ್ಟಿಕತೆಯನ್ನು ಒದಗಿಸಲು ಪರಿಣಾಮಕಾರಿ ಯೋಜನೆಗಳನ್ನು ಜಾರಿಗೊಳಿಸುವ ಅಗತ್ಯವಿದೆ. ಆದರೆ, ಆಡಳಿತ ವೈಫಲ್ಯಗಳು, ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಮತ್ತು ಕುಗ್ರಾಮಗಳಲ್ಲಿ ವ್ಯಾಪಕವಾಗಿರುವ ಅಪೌಷ್ಟಿಕತೆಯನ್ನು ನಿಭಾಯಿಸುವಲ್ಲಿನ ವೈಫಲ್ಯವು ಈ ಗುರಿಯನ್ನು ತಲುಪುವಲ್ಲಿ ಅಡ್ಡಿಯಾಗಿದೆ. ಈ ಕಾರಣಗಳಿಂದ ಭಾರತದ ಜನಸಂಖ್ಯೆ ಸಂಪನ್ಮೂಲವಾಗದೆ ಸಮಸ್ಯೆಯ ರೂಪ ತಾಳುತ್ತಿದೆ.

2024ರಲ್ಲಿ ಭಾರತವು ಸುಮಾರು 4 ಲಕ್ಷ ಕೋಟಿ ಡಾಲರ್ ಜಿಡಿಪಿ (ಒಟ್ಟು ದೇಶಿ ಉತ್ಪನ್ನ)ಯೊಂದಿಗೆ ಜಗತ್ತಿನ ಐದನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿತು. ಅದರೆ, ತಲಾವಾರು ಆದಾಯ ಮಾತ್ರ 2,585 ಡಾಲರ್ (ಸುಮಾರು 2.17 ಲಕ್ಷ ರೂಪಾಯಿ)ನಲ್ಲೇ ಉಳಿದಿದೆ. ಈ ಅಸಮಾನತೆಯು ಬಡವ–ಶ್ರೀಮಂತರ ಅಸಮಾನತೆಯನ್ನು ಹೆಚ್ಚಿಸಿದೆ. ಹೆಚ್ಚುತ್ತಿರುವ ಆಹಾರ ಬೆಲೆಗಳು ಬಡವರು ಮತ್ತು ಅಪೌಷ್ಟಿಕತೆಗೆ ಒಳಗಾಗಿರುವ ಜನರ ಮೇಲೆ ಗಾಢ ನಕಾರಾತ್ಮಕ ಪರಿಣಾಮವನ್ನು ಬೀರಿವೆ. ಹವಾಮಾನ ಬದಲಾವಣೆಯು ಭಾರತದ ಆಹಾರ ಭದ್ರತೆಯ ಮೇಲೆ ಅಗಾಧ ಪರಿಣಾಮವನ್ನು ಬೀರಿದೆ. 2023–24ರಲ್ಲಿ ಭಾರತದ ಆಹಾರ ಉತ್ಪಾದನೆಯು 33.2 ಕೋಟಿ ಟನ್ ತಲುಪಿದೆ. ಆದರೆ, ವ್ಯತಿರಿಕ್ತ ಹವಾಮಾನ ಪರಿಸ್ಥಿತಿಗಳು ದ್ವಿದಳ ಧಾನ್ಯಗಳು ಮತ್ತು ತರಕಾರಿ ಉತ್ಪಾದನೆಯ ಮೇಲೆ ಋಣಾತ್ಮಕ ಪರಿಣಾಮ ಬೀರಿವೆ ಎಂದು ಸಮೀಕ್ಷೆ ಹೇಳುತ್ತದೆ. ಭಾರತದ ಆಹಾರ ಭದ್ರತೆಯ ಮೇಲೆ ಹವಾಮಾನ ಬದಲಾವಣೆಯ ದೀರ್ಘಾವಧಿ ಪರಿಣಾಮಗಳು ಆಘಾತಕಾರಿಯಾಗಿವೆ ಹೆಚ್ಚುತ್ತಿರುವ ಉಷ್ಣತೆ, ಅಸ್ತವ್ಯಸ್ತ ಮಳೆ ಮತ್ತು ಅನಿರೀಕ್ಷಿತ ಹವಾಮಾನ ಲಕ್ಷಣಗಳು ಕೃಷಿ ಉತ್ಪಾದಕತೆಯನ್ನು ಕಡಿತಗೊಳಿಸಿವೆ. ಎಲ್ಲಕ್ಕಿಂತ ಹೆಚ್ಚಾಗಿ, ದೇಶದ ಜಲ ಸಂಪನ್ಮೂಲಗಳ ಮೇಲೆ ಹವಾಮಾನ ವೈಪರೀತ್ಯವು ಗಂಭೀರ ಪರಿಣಾಮಗಳನ್ನು ಬೀರಿದ್ದು, ನೀರಿನ ಕೊರತೆಗೆ ಕಾರಣವಾಗಿದೆ. ನೀರಿನ ಕೊರತೆಯು ಕೃಷಿಯ ಮೇಲೆ ಇನ್ನಷ್ಟು ಒತ್ತಡವನ್ನು ಹೇರಿದೆ ಹಾಗೂ ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಬಿಸಿರುವವರು ಅನಿಶ್ಚಿತ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ. ಭಾರತದ ಆರೋಗ್ಯ ರಕ್ಷಣೆ ವ್ಯವಸ್ಥೆಯೂ ಹಲವು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದೆ. ಅಪೌಷ್ಟಿಕತೆ, ಶಿಶು ಮರಣ ಮತ್ತು ಬೆಳವಣಿಗೆ ಸ್ಥಗಿತದ ವಿರುದ್ಧ ಹೋರಾಡಲು, ಪರಿಣಾಮಕಾರಿ ಮತ್ತು ಸಮಗ್ರ ಆರೋಗ್ಯ ವ್ಯವಸ್ಥೆ ಅಗತ್ಯವಾಗಿದೆ.



# ರಾಮಾಯಣ

## ಶ್ರೀ ರಾಮ ಲಕ್ಷ್ಮಣರು ಮಿಥಿಲಾ ಪಟ್ಟಣಕ್ಕೆ ಹೊರಟದ್ದು

• ಹಿಂದಿನ ಸಂಚಿಕೆಯಿಂದ 20ನೆಯ ಅಧ್ಯಾಯ

ಆ ಬಿಲ್ಲಿಗೆ ದೇವ ಗಂಧರ್ವ ಯಕ್ಷ ರಾಕ್ಷಸರು ಮೊದಲಾದವರೂ ಹೆದೆಯನ್ನೇರಿಸಲಶಕ್ತರು, ಹಾಗಿರುವಲ್ಲಿ ಮನುಷ್ಯರು ಏರಿಸಲಾರರು ಎಂದು ಹೇಳುವುದೇನು ! ಕೆಲವು ಅರಸರು ಆ ಬಿಲ್ಲಿಗೆ ಹೆದೆಯನ್ನೇರಿಸಿ ಅದರ ಸತ್ತ್ವವನ್ನು ನೋಡಬೇಕೆಂದು ಬಂದು ತಮ್ಮಿಂದ ತೀರದೆ ಹೊರಟುಹೋದರು. ಆದಕಾರಣ ನೀನು ಜನಕರಾಯನ ಯಜ್ಞಕ್ಕೆ ಬಂದರೆ ಆ ಬಿಲ್ಲನ್ನು ನೋಡಬಹುದು. ಜನಕರಾಜನು ತಾನು ಮಾಡಿದ ಯಜ್ಞಕ್ಕೆ ಫಲವಾಗಿ ಆ ಬಿಲ್ಲನ್ನು ಕೇಳಲು ದೇವತೆಗಳು ಅದನ್ನು ಯಜ್ಞಶಾಲೆಗೆ ತಂದುಕೊಟ್ಟರು. ಆ ರಾಯನು ಆ ಬಿಲ್ಲನ್ನು ತನ್ನ ಮನೆಯಲ್ಲಿರಿಸಿಕೊಂಡು ಷೋಡಶೋಪಚಾರಾದಿ ಪೂಜೆಗಳಿಂದರ್ಚಿಸಿ ಕೊಂಡಿದ್ದಾನೆ ಎಂದು ಹೇಳಿದರು. ಅನಂತರ ವಿಶ್ವಾಮಿತ್ರಮುನಿಯು ಆ ಋಷಿಗಳನ್ನು ಕೂಡಿಕೊಂಡು ಸಿದ್ಧಾಶ್ರಮದಲ್ಲಿದ್ದ ಬ್ರಾಹ್ಮಣರನ್ನೂ ವನದೇವತೆಗಳನ್ನೂ ಕರೆದು '' ನಿಮಗೆ ಅನೇಕ ಶ್ರೇಯಸ್ಸಾಗಲಿ! ನಾನು ಗಂಗೆಯ ಬಡಗಣ ತೀರದಲ್ಲಿರುವ ಹಿಮವತ್ಪರ್ವತದ ಕಡೆಗೆ ಹೋಗಿ ಬರುತ್ತೇನೆ '' ಎಂದು ಹೇಳಿ ಪ್ರಯಾಣವಾಗಿ ಹೊರಟನು. ಆಗ ಆತನ ಹಿಂದೆ ಬ್ರಹ್ಮವೇತ್ತ್ವಗಳಾದ ಅನೇಕ ಬ್ರಾಹ್ಮಣರೂ ಆ ಆಶ್ರಮದಲ್ಲಿದ್ದ ಮೃಗಪಕ್ಷಿಗಳು ಮೊದಲಾದವೂ ಬರುತ್ತಿರಲು, ವಿಶ್ವಾಮಿತ್ರಮುನೀಶ್ವರನು ಆ ಬ್ರಾಹ್ಮಣರನ್ನೂ ಮೃಗಪಕ್ಷಿಗಳನ್ನೂ ಕರೆದು ''ನೀವು ನನ್ನ ಸಿದ್ಧಾಶ್ರಮವನ್ನು ರಕ್ಷಿಸಿಕೊಂಡಿರಿ! ಎಂದು ತಿರುಗಿ ಕಳುಹಿಸಿ, ತಾನು ಋಷಿಗಳನ್ನೂ ರಾಮ ಲಕ್ಷ್ಮಣರನ್ನೂ ಕರೆದುಕೊಂಡು ಬಡಗಣ ದಿಕ್ಕಿಗೆ ಹೋಗುತ್ತ ಮಧ್ಯಾಹ್ನವಾಗಲು ಶೋಣಾನದಿಯ ತೀರದಲ್ಲಿಳಿದು ಸ್ನಾನಾದಿ ನಿತ್ಯಕರ್ಮಾನುಷ್ಠಾನ ವೈಶ್ವದೇವ ಮೊದಲಾದ ಕೃತ್ಯಗಳನ್ನು ತೀರಿಸಿಕೊಂಡು ಆ ದಿವಸವನ್ನು ಅಲ್ಲಿಯೇ ಕಳೆದನು, ಸಾಯಂಕಾಲದಲ್ಲಿ ಲಕ್ಷ್ಮಣಸಹಿತನಾದ ಶ್ರೀರಾಮನು ಆ ಮುನಿಗಳಿಗೆ ವಂದನೆ ಮಾಡಿ ವಿಶ್ವಾಮಿತ್ರಮುನೀಶ್ವರನನ್ನು ಕುರಿತು ಮಹರ್ಷಿಗಳೆ, ಇದು ಯಾವ ದೇಶ ? ಇಲ್ಲಿ ಅಪರಿಮಿತವಾದ ವನಗಳಿವೆ. ಇದರ ವೃತ್ತಾಂತವನ್ನು ವಿಸ್ತಾರವಾಗಿ ನಿರೂಪಿಸಬೇಕು' ಎಂದು ಕೇಳಿದನು

### ಕುಶ ನಾಭನ ವೃತ್ತಾಂತ

ಆಮೇಲೆ ನುಡಿಜಾಣ್ಮೆಯುಳ್ಳ ವಿಶ್ವಾಮಿತ್ರಮುನೀಶ್ವರನು ರಘುನಾಥನನ್ನು ನೋಡಿ ಎಲೈ ರಘುನಾಥನೆ, ಕೇಳು. ಪೂರ್ವದಲ್ಲಿ ಬ್ರಹ್ಮಪುತ್ರನಾಗಿ ಮಹಾತಪಸ್ವಿಯಾದ ಕುಶನೆಂಬ ರಾಯನಿದ್ದನು ಆ ರಾಯನು ಸಮಸ್ತ ವ್ರತಧರ್ಮರಹಸ್ಯಗಳನ್ನೂ ಬಲ್ಲನು. ಸತ್ಪುರುಷನಾದ ಆತನು ಸತ್ಕುಲದಲ್ಲಿ ಹುಟ್ಟಿದ ವೈದರ್ಭಿ ಎಂಬ ಹೆಂಡತಿಯಲ್ಲಿ ತನ್ನಂತೆ ಗುಣಶಾಲಿಗಳಾದ ನಾಲ್ಕು ಕುಮಾರರನ್ನು ಪಡೆದನು. ಒಂದು ಸಲ ಆತನು ಕುಶಾಂಬ, ಕುಶನಾಭ, ಅಧೂರ್ತರಜ, ವಸು ಎಂಬ ನಾಲ್ಕು ಮಕ್ಕಳನ್ನೂ ಕರೆದು ಕ್ಷತ್ರಿಯಧರ್ಮವನ್ನು ಪರಿಪಾಲಿಸಬೇಕೆಂಬ ಬುದ್ಧಿಯಿಂದ ಅವರನ್ನು ಕುರಿತು

ಮುಂದುವರಿಯುವುದು...



# 21ನೇ ಶತಮಾನದ ಸುದೀರ್ಘ ಸೂರ್ಯಗ್ರಹಣ!

• ಉದಯವಾಹಿನಿ, ಬೆಂಗಳೂರು

ಬಾಹ್ಯಾಕಾಶ ಪ್ರಪಂಚವು ರಹಸ್ಯಗಳಿಂದ ತುಂಬಿದೆ. ಪ್ರತಿದಿನ ಬಾಹ್ಯಾಕಾಶದಲ್ಲಿ ಖಗೋಳ ಘಟನೆಗಳು ನಡೆಯುತ್ತಲೇ ಇರುತ್ತವೆ. ಆಗಾಗ ಆಕಾಶದಲ್ಲಿ ಅಪರೂಪದ ದೃಶ್ಯಗಳನ್ನು ಕಾಣಬಹುದು. ಅಂತಹ ಅಪರೂಪದ ದೃಶ್ಯಗಳಲ್ಲಿ ಪ್ರತಿ ವರ್ಷ ಸಂಭವಿಸುವ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣವೂ ಸೇರಿದೆ, ಇದು ಜನರಿಗೆ ಅದ್ಭುತ ಮತ್ತು ವಿಶಿಷ್ಟ ಘಟನೆಗಳು ಮತ್ತು ಬಾಹ್ಯಾಕಾಶ ವಿಜ್ಞಾನಿಗಳಿಗೆ ಸಂಶೋಧನೆಯ ವಿಷಯವಾಗಿದೆ.

ನಿಯಮದಂತೆ, ಮೂರು ವಿಧದ ಸೂರ್ಯಗ್ರಹಣಗಳಿವೆ, ಅರ್ಧ, ಭಾಗಶಃ ಮತ್ತು ಸಂಪೂರ್ಣ ಸೂರ್ಯಗ್ರಹಣ. ನೀವು ಎಲ್ಲಾ ಮೂರು ರೀತಿಯ ಸೂರ್ಯಗ್ರಹಣಗಳನ್ನು ನೋಡಿರಬಹುದು, ಆದರೆ ಸಂಪೂರ್ಣ ಸೂರ್ಯಗ್ರಹಣವು ಹೆಚ್ಚು ಕಾಲ ಉಳಿಯುತ್ತದೆ.
ಗ್ರಹಣದ ಅವಧಿಯು ಗಿನ್ನೆಸ್ ಪುಸ್ತಕದಲ್ಲಿ ದಾಖಲಾಗಲಿದೆ.
ಹೌದು, ನಾವು ಪ್ರತಿ ಶತಮಾನದಲ್ಲಿ ಸಂಭವಿಸುವ ದೀರ್ಘವಾದ ಸಂಪೂರ್ಣ ಸೂರ್ಯಗ್ರಹಣದ ಬಗ್ಗೆ ಮಾತನಾಡುತ್ತಿದ್ದೇವೆ. ಒಮ್ಮೆ ಅಲ್ಲ ಹಲವು ಬಾರಿ ಅನ್ನಿಸುತ್ತದೆ. 21 ನೇ ಶತಮಾನದ ಮತ್ತೊಂದು ಸುದೀರ್ಘ ಸೂರ್ಯಗ್ರಹಣ ಸಂಭವಿಸಲಿದೆ, ಇದು 2027 ರಲ್ಲಿ ಸಂಭವಿಸಲಿದೆ. ಇದಕ್ಕೂ ಮೊದಲು ಸಂಪೂರ್ಣ ಸೂರ್ಯಗ್ರಹಣವಿದ್ದರೂ, ಇದು ಅತ್ಯಂತ ದೀರ್ಘವಾಗಿರುತ್ತದೆ. ಆ ಸಂಪೂರ್ಣ ಸೂರ್ಯಗ್ರಹಣದ ಉದ್ದವು ಅದರ ವಿಶೇಷತೆಯಾಗಿದೆ, ಏಕೆಂದರೆ ಇದು ಹಲವು ವರ್ಷಗಳವರೆಗೆ ಅದರ ಉದ್ದಕ್ಕಾಗಿ ನೆನಪಿನಲ್ಲಿ ಉಳಿಯುತ್ತದೆ ಮತ್ತು ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ದಾಖಲಾಗುತ್ತದೆ.

**ಉತ್ತರ ಆಫ್ರಿಕಾದ ದೇಶಗಳಲ್ಲಿ ಸೂರ್ಯಗ್ರಹಣ ಗೋಚರಿಸಲಿದೆ**


ಉತ್ತರ ಆಫ್ರಿಕಾದ ದೇಶಗಳಲ್ಲಿ ಸೂರ್ಯಗ್ರಹಣ ಗೋಚರಿಸಲಿದೆ

ಮಾಧ್ಯಮ ವರದಿಗಳ ಪ್ರಕಾರ, ಕೊನೆಯ ಸಂಪೂರ್ಣ ಸೂರ್ಯಗ್ರಹಣವು ಏಪ್ರಿಲ್ 8, 2024 ರಂದು ಸಂಭವಿಸಿತು, ಇದು 4 ನಿಮಿಷ 28 ಸೆಕೆಂಡುಗಳ ಕಾಲ ನಡೆಯಿತು. ಇದನ್ನು ಮೆಕ್ಸಿಕೋ, ಯುನೈಟೆಡ್ ಸ್ಟೇಟ್ಸ್ ಮತ್ತು ಕೆನಡಾದಲ್ಲಿ ಗಮನಿಸಲಾಯಿತು. ಮುಂದಿನ ಸಂಪೂರ್ಣ ಸೂರ್ಯಗ್ರಹಣವು ಆಗಸ್ಟ್ 12, 2026 ರಂದು ಸಂಭವಿಸುತ್ತದೆ, ಇದು ಗ್ರೀನ್ಲ್ಯಾಂಡ್, ಐಸ್ಲ್ಯಾಂಡ್ ಮತ್ತು ಸ್ಪೇನ್ನಲ್ಲಿ ಗೋಚರಿಸುತ್ತದೆ ಮತ್ತು ಸುಮಾರು 2 ನಿಮಿಷಗಳು ಮತ್ತು 18 ಸೆಕೆಂಡುಗಳವರೆಗೆ ಇರುತ್ತದೆ. ಇದರ ನಂತರ, ಶತಮಾನದ ಸುದೀರ್ಘ ಸಂಪೂರ್ಣ ಸೂರ್ಯಗ್ರಹಣವು 2027 ರಲ್ಲಿ ಸಂಭವಿಸಲಿದೆ. ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಪ್ರಕಾರ, ಸುದೀರ್ಘವಾದ ಸಂಪೂರ್ಣ ಸೂರ್ಯಗ್ರಹಣ ಜೂನ್ 15, 743 BC ರಂದು ಸಂಭವಿಸಿದೆ. ಇದು 7 ನಿಮಿಷ 28 ಸೆಕೆಂಡುಗಳನ್ನು ತೆಗೆದುಕೊಂಡಿತು. ಭವಿಷ್ಯದಲ್ಲಿ, ಜುಲೈ 16, 2186 ರಂದು ಅಂತಹ ದೀರ್ಘ ಸೂರ್ಯಗ್ರಹಣ ಸಂಭವಿಸುವ ನಿರೀಕ್ಷೆಯಿದೆ. ಇದು 7 ನಿಮಿಷ 29 ಸೆಕೆಂಡುಗಳವರೆಗೆ ತೆಗೆದುಕೊಳ್ಳಬಹುದು.

ಈ ದೇಶಗಳಲ್ಲಿ ಸಂಪೂರ್ಣ ಸೂರ್ಯಗ್ರಹಣ ಗೋಚರಿಸುತ್ತದೆ

ಮಾಧ್ಯಮ ವರದಿಗಳ ಪ್ರಕಾರ, ಆಗಸ್ಟ್ 2, 2027 ರಂದು ಶತಮಾನದ ಸುದೀರ್ಘ ಸೂರ್ಯಗ್ರಹಣವು ಸುಮಾರು 6 ನಿಮಿಷ 23 ಸೆಕೆಂಡುಗಳವರೆಗೆ ಇರುತ್ತದೆ. ಉತ್ತರ ಆಫ್ರಿಕಾದ ದೇಶಗಳಲ್ಲಿ ಈ ಸೂರ್ಯಗ್ರಹಣ ಗೋಚರಿಸಲಿದೆ. ಇದನ್ನು 'ಗ್ರೇಟ್ ನಾರ್ತ್ ಆಫ್ರಿಕನ್ ಎಕ್ಲಿಪ್ಸ್' ಎಂದು ಕರೆಯಲಾಗುತ್ತಿದೆ. ಸ್ಪಷ್ಟ ಹವಾಮಾನದಿಂದಾಗಿ ಈ ಸೂರ್ಯಗ್ರಹಣವನ್ನು ಬರಿಗಣ್ಣಿನಿಂದ ನೋಡಬಹುದಾಗಿದೆ. ಏಕೆಂದರೆ ಸೂರ್ಯಗ್ರಹಣದ ಸಮಯದಲ್ಲಿ 15227 ಕಿಮೀ ಉದ್ದದ ಪ್ರದೇಶದಲ್ಲಿ ಮೋಡಗಳು ಇರುವುದಿಲ್ಲ ಎಂದು ಭವಿಷ್ಯ ನುಡಿದಿದ್ದಾರೆ. ಇದು ಸ್ಪೇನ್‌ನ ದಕ್ಷಿಣ ಭಾಗ, ಉತ್ತರ ಆಫ್ರಿಕಾ ಮತ್ತು ಅರೇಬಿಯನ್ ಪೆನಿನ್ಸುಲಾವನ್ನು ಒಳಗೊಂಡಿದೆ.

**ಧೂಳಿನ ಬಿರುಗಾಳಿಗಳು ಮತ್ತು ವಿಪರೀತ ಶಾಖ ಇರಬಹುದು. ತಾಪಮಾನವು ಸುಮಾರು 42 ಡಿಗ್ರಿ ಸೆಲ್ಸಿಯಸ್ ಇರಬಹುದೆಂದು ನಿರೀಕ್ಷಿಸಲಾಗಿದೆ. ಸೂರ್ಯಗ್ರಹಣವು ಅಟ್ಲಾಂಟಿಕ್ ಮಹಾಸಾಗರದ ಮೇಲೆ ಏರುತ್ತದೆ ಮತ್ತು ಜಿಬ್ರಾಲ್ಟರ್ ಜಲಸಂಧಿಯ ಸುತ್ತಲೂ ಇರುತ್ತದೆ. ದಕ್ಷಿಣ ಸ್ಪೇನ್, ಜಿಬ್ರಾಲ್ಟರ್ ಮತ್ತು ಮೊರಾಕೊವು ಏರುತ್ತಿರುವ ಮತ್ತು ಬೀಳುವ ಅವಕಾಶಗಳಿಗೆ ಸಾಕ್ಷಿಯಾಗಲಿದೆ. ಅಲ್ಜೀರಿಯಾ, ಟುನೀಶಿಯಾ, ಲಿಬಿಯಾ ಮತ್ತು ಈಜಿಪ್ಟ್‌ನಲ್ಲಿ ಸೂರ್ಯಗ್ರಹಣವು ಉತ್ತುಂಗದಲ್ಲಿದೆ ಮತ್ತು ಕೆಂಪು ಸಮುದ್ರವನ್ನು ದಾಟಿದ ನಂತರ ಸೌದಿ ಅರೇಬಿಯಾ, ಯೆಮೆನ್ ಮತ್ತು ಸೊಮಾಲಿಯಾದಲ್ಲಿ ಸಂಪೂರ್ಣ ಸೂರ್ಯಗ್ರಹಣ ಗೋಚರಿಸುತ್ತದೆ. ನಂತರ ಅದು ಹಿಂದೂ ಮಹಾಸಾಗರದ ಆಗ್ನೇಯದಲ್ಲಿ ನೆಲೆಸುತ್ತದೆ.**



# ಭಾರತದ ಮಾಜಿ ಉಪಪ್ರಧಾನಿ ಶ್ರೀ ಲಾಲ್ ಕೃಷ್ಣ ಅಡ್ವಾಣಿರವರ 97ನೇ ವರ್ಷದ ಹುಟ್ಟು ಹಬ್ಬದ ಶುಭಾಶಯಗಳು



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

• ಉದಯವಾಹಿನಿ, ವಿಶೇಷ

ಸನ್ಮಾನ್ಯ ಶ್ರೀ ಲಾಲ್ ಕೃಷ್ಣ ಅಡ್ವಾಣಿರವರು ನವಂಬರ್ 8, 1927 ರಂದು ಜನಿಸಿ, ಜನಪರ ಹೋರಾಟದ ಬದುಕಿನ ಹಾದಿಯಲ್ಲಿ ತನ್ನ ಜೀವಮಾನವನ್ನು ರಾಜಕೀಯ ಜೀವನದಲ್ಲಿ ಭಾರತ ದೇಶಕ್ಕೆ ಮುಡುಪಾಗಿಟ್ಟು ತನ್ನ ಜೀವನವನ್ನ ಸವೆಸಿದ ಹಾಗೂ ಸವೆಸುತ್ತಿರುವ ಪೈಕಿ ಒಬ್ಬರು.


ಸನ್ಮಾನಿತರು ರಾಮ್ ಮನೋಹರ ಲೋಹಿಯಾ, ಆಚಾರ್ಯ ವಿನೋಬಾ ಭಾವೆ, ಪಂಡಿತ್ ದೀನ್ ದಯಾಳ್ ಉಪಾಧ್ಯಯ, ಪಂಡಿತ್ ಮದನ ಮೋಹನ ಮಾಳವೀಯ, ಜಯಪ್ರಕಾಶ್ ನಾರಾಯಣ್ ರವರ ಆದರ್ಶಗಳನ್ನು ಪಾಲಿಸಿಕೊಂಡು ಹಾಗೂ ಪ್ರಧಾನಿಯಾಗಿದ್ದ ವಾಜಪೇಯಿ ಅವರ ಅತ್ಯಂತ ನಿಕಟ ಸಮಕಾಲೀನರಲ್ಲಿ ಒಬ್ಬರಾಗಿದ್ದರು.

ಭಾರತದ ಪ್ರಧಾನಿಯಾಗಿದ್ದ ಸನ್ಮಾನ್ಯ ಶ್ರೀ ಅಟಲ್ ಬಿಹಾರಿ ವಾಜಪೇಯಿ ರವರ ಸಚಿವ ಸಂಪುಟದಲ್ಲಿ ಉಪ ಪ್ರಧಾನಿಯಾಗಿ ಬಹಳ ಸಮರ್ಥವಾಗಿ ಕಾರ್ಯನಿರ್ವಹಿಸಿದರು.

ಮುಂದೆ ಪ್ರಧಾನಿಯಾಗುವ ಎಲ್ಲಾ ಅರ್ಹತೆಗಳು ಇದ್ದು ಹಾಗೂ ಈ ಬಗ್ಗೆ ವಾಜಪೇಯಿ ರವರೂ ಸಹ ಸೂಚಿಸಿದ್ದು ಆದರೂ ಸಹ ಕೈತಪ್ಪಿ ಹೋಗಿ ಅದೃಷ್ಟವಿಲ್ಲದ,ಯೋಗ ವಿಲ್ಲದ ಹಾಗೂ ವಿಧಿಯ ಆಟದ ಪರಿಸ್ಥಿತಿ ಒದಗಿ ಬಂದಾಗ ಬಹಳ ನೊಂದುಕೊಂಡರು.

**ಬಿಜೆಪಿ ಪಕ್ಷವನ್ನ ಹೋರಾಟ ಮಾಡಿ**

ಒಟ್ಟಾರೆ ಬಿಜೆಪಿ ಪಕ್ಷವನ್ನ ಹೋರಾಟ ಮಾಡಿ ಕಟ್ಟಿ ಬೆಳೆಸಿದ ಒಬ್ಬ ಹಿರಿಯ ಅನುಭವಿ ಮುಖಂಡರನ್ನ ಮೂಲೆಗುಂಪು ಮಾಡಿರುವುದು ಇತಿಹಾಸ ಹಾಗೂ ವಿಪರ್ಯಾಸ. ಸನ್ಮಾನಿತರು ಹಿರಿಯ ಅನುಭವಿ ರಾಜಕೀಯ ಮುತ್ಸದ್ದಿಗಳು, ಇಂದು ಅವರ 97ನೇ ವರ್ಷದ ಹುಟ್ಟುಹಬ್ಬ ಇರುವ ಪ್ರಯುಕ್ತ ಅವರ ಆರೋಗ್ಯ ಮತ್ತು ಆಯಸ್ಸು ವೃದ್ಧಿಯಾಗಲೆಂದು ಎಲ್ಲಾ ಸಜ್ಜನ ನಾಗರೀಕರ ಪರವಾಗಿ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ.



ಸಾಮಾಜಿಕ ಕಳಕಳಿ
ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

• ಉದಯವಾಹಿನಿ, ವಿಶೇಷ

## ದಿನಕ್ಕೊಂದು ಮುಕ್ತಕ -18

ಕರ್ಮದಲಿ ಫಲವಿರಲು ಒಳಿತುಗಳು ಎಲ್ಲವೂ
ಶರ್ಮನದು ಬಹಳ ಸಾಧನೆಯ ಮಾಡಿ
ಧರ್ಮವನು ಬಿಡದೆಯೇ ಕಾರ್ಯವೆಸಗಿರಿ ನಿತ್ಯ
ಮರ್ಮಕ್ಕೆ ಬೀಳದಿರಿ ಲಕ್ಷ್ಮಿ ದೇವಿ....



**ಭಾವಾರ್ಥ:** ನಾವು ಮಾಡುವ ಕೆಲಸಗಳಲ್ಲಿ ಒಳ್ಳೆಯ ಫಲಗಳನ್ನು ಕಾಣಬೇಕಾದರೆ ಒಳ್ಳೆಯ ಕರ್ಮಗಳನ್ನು ಮಾಡಬೇಕು. ಅದು ಜನುಮಜನುಮಕ್ಕೂ ಒಳ್ಳೆಯ ಫಲವನ್ನು ನೀಡುತ್ತದೆ. ಮಾಡುವ ಕೆಲಸಗಳು ಒಳ್ಳೆಯ ಸಾಧನೆಯನ್ನು ತೋರ ಬೇಕು. ಯಾವುದೇ ರೀತಿಯ ಕೆಲಸವನ್ನು ಮಾಡಿದರೂ ಒಳಿತಾಗಿರಬೇಕು. ಇತರರಿಗೆ ತೊಂದರೆಯಾಗುವಂತಹ ಕೆಲಸಗಳನ್ನು ಮಾಡಬಾರದು. ಧರ್ಮವನ್ನು ಬಿಡದೆ ಕಾರ್ಯವೆಸಗಬೇಕು. ಯಾವುದೇ ರೀತಿಯ ಮರ್ಮಕ್ಕೆ ಅಂದರೆ ಅತಿಯಾದ ಗೌಪ್ಯದ ಕೆಲಸಗಳನ್ನು ಮಾಡಬಾರದು. ಹಲವಾರು ಕಟ್ಟುಪಾಡುಗಳನ್ನು ಹಾಕಿಕೊಂಡು ಕೆಲವೊಮ್ಮೆ ಜೀವಿಸಬೇಕಾಗುತ್ತದೆ. ಅದು ಸರಿಯಾದ ನಿಯಮ ನಿಷ್ಠೆಯಲ್ಲಿ ಇರಬೇಕಾಗುತ್ತದೆ.

# ಶ್ರೀ ಗಣೇಶ ನೃತ್ಯಾಲಯ ವಿದ್ಯಾರ್ಥಿಗಳಿಂದ ರಂಗಾಭಿವಂದನೆ

• ಉದಯವಾಹಿನಿ, ಬೆಂಗಳೂರು

ನಗರದ ಮಲ್ಲೇಶ್ವರಂ ಸೇವಾ ಸದನದಲ್ಲಿ ಅರಿಶಿನಕುಂಟೆಯ ಶ್ರೀ ಗಣೇಶ ನೃತ್ಯಾಲಯ ರಂಗಾಭಿವಂದನೆ ಕಲಾಚಾತುರಿ ಕಾರ್ಯಕ್ರಮ ಸೊಗಸಾಗಿ ಮೂಡಿ ಬಂತು ನೃತ್ಯ ಗುರುಗಳಾದ ವಿದ್ವಾನ್ ಎಂ ಡಿ ಗಣೇಶ ಮತ್ತು ವಿದುಷಿ ಭಾವನ ಗಣೇಶ ರವರ ವಿದ್ಯಾರ್ಥಿಗಳಾದ ಕು ಐಶ್ವರ್ಯ,ಮಾನವಿ, ತನ್ಮಯಿ ಮತ್ತು ಸಿಂಚನ ಭಾವಪೂರ್ಣವಾಗಿ ನೃತ್ಯ ಪ್ರಸ್ತುತಿ ಪಡಿಸಿ ಜನಮನ ಸೂರೆಗೊಂಡರು.



ಉದಯವಾಹಿನಿ ಚಿತ್ರ

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಣವ ಮೀಡಿಯಾ ಹೌಸ್ ಪ್ರಕಾಶನದ ಕಾರ್ಯನಿರ್ವಾಹಕ ಡಾ. ಗುರುರಾಜ ಪೋಶೆಟ್ಟಿಹಳ್ಳಿ ಮಾತನಾಡುತ್ತಾ ಪೋಷಕರು ತಮ್ಮ ಮಕ್ಕಳ ಪ್ರತಿಭೆಗಳು ಹೊರಹೊಮ್ಮಲು ಇಂತಹ ಶ್ರೇಷ್ಠ ನೃತ್ಯ ಗುರುಗಳ ಬಳಿ ಅಭ್ಯಾಸಿಸಲು ಕಳುಹಿಸಿ ಸಾಂಸ್ಕೃತಿಕ ಕಾರ್ಯಗಳಿಗೆ ಉತ್ತೇಜನ ನೀಡಬೇಕೆಂದು ತಿಳಿಸಿದರು. ನೃತ್ಯಕುಟೀರದ ಕಲಾತ್ಮಕ ನಿರ್ದೇಶಕಿ ಕಲಾಯೋಗಿ ಪುರಸ್ಕೃತೆ ವಿದುಷಿ ದೀಪ ಭಟ್ ಮತ್ತು ವಿದ್ವಾನ್ ಮಂಜುನಾಥ ಪುತ್ತೂರು ಭಾಗವಹಿಸಿದ್ದರು.

ಎಸ್ ನಂಜುಂಡ ರಾವ್ ಸೊಗಸಾದ ನಿರೂಪಣೆಯಲ್ಲಿ ವಿದ್ವಾನ್ ಬಾಲಸುಬ್ರಮಣ್ಯ ಶರ್ಮ ಗಾಯನದಲ್ಲಿ, ವಿದ್ವಾನ್ ನಾರಾಯಣಸ್ವಾಮಿ ಮೃದಂಗದಲ್ಲಿ ಹಾಗೂ ವಿದ್ವಾನ್ ಮಹೇಶ ಸ್ವಾಮಿ ಕೊಳಲಿನಲ್ಲಿ ಹಾಗೂ ನಟವಾಂಗದಲ್ಲಿ ವಿದುಷಿ ಭಾವನಾ ಗಣೇಶ್ ತಿಸ್ರ ಏಕ ಅಲರಿಪು, ಆದಿ ತಾಳ ತೋಡಿ ರಾಗದ ರೂಪಮು ಜ್ಜುಚಿ ವರ್ಣಂ, ಮಿಶ್ರ ಚಾಪು ತಾಳದ ರಾಗ ಮಾಲೀಕ ರಾಗದ ಶಬ್ದಂ, ಆದಿತಾಳ ಕಲ್ಯಾಣಿ ರಾಗದ ಶೃಂಗಪುರಾದೀಶ್ವರಿ ಶಾರದಾ ಕೃತಿ, ಆದಿತಾಳ ಅಭೇರಿ ರಾಗದ ಅಕ್ಕಮಹಾದೇವಿ ವಚನ ಮತ್ತು ಕೊನೆಯಲ್ಲಿ ಆದಿತಾಳದ ನಟಭೈರವಿ ರಾಗದ ತಿಲ್ಲಾನದೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

# 1 ಲೀಟರ್ ತೈಲ ಮಾರಿದ್ರೆ ಎಷ್ಟು ಕಮಿಷನ್ ಸಿಗಲಿದೆ? ಇಲ್ಲಿದೆ ಮಾಹಿತಿ

• ಉದಯವಾಹಿನಿ, ಬೆಂಗಳೂರು

ರಿಲಯನ್ಸ್ ಜಿಯೋ–ಬಿಪಿ ಪೆಟ್ರೋಲ್ ಪಂಪ್ ಡೀಲರ್‌ಶಿಪ್ ಉತ್ತಮ ವ್ಯಾಪಾರ ಅವಕಾಶವಾಗಿದೆ. ಇದರಲ್ಲಿ ಹೂಡಿಕೆ ಮಾಡುವ ಮೂಲಕ ನೀವು ವಿಶ್ವಾಸಾರ್ಹ ಬ್ರ್ಯಾಂಡ್‌ನೊಂದಿಗೆ ಸಂಬಂಧ ಹೊಂದಬಹುದು ಮತ್ತು ದೀರ್ಘಾವಧಿಯ ಲಾಭವನ್ನು ಗಳಿಸಬಹುದು. ನೀವು ಪೆಟ್ರೋಲ್ ಪಂಪ್ ಉದ್ಯಮವನ್ನು ಪ್ರಾರಂಭಿಸಲು ಯೋಚಿಸುತ್ತಿದ್ದರೆ, ಮುಖೇಶ್ ಅಂಬಾನಿಯ ರಿಲಯನ್ಸ್ ಇಂಡಸ್ಟ್ರೀಸ್ ನಿಮಗೆ ವಿಶೇಷ ಅವಕಾಶವನ್ನು ನೀಡುತ್ತಿದೆ.

ರಿಲಯನ್ಸ್ ಪೆಟ್ರೋಲಿಯಂ ತನ್ನ ಪೆಟ್ರೋಲ್ ಪಂಪ್ ಜಾಲವನ್ನು ದೇಶಾದ್ಯಂತ ವಿಸ್ತರಿಸುತ್ತಿದೆ ಇದಕ್ಕಾಗಿ ಹೊಸ ಡೀಲರ್‌ಗಳನ್ನು ಸೇರಿಸುತ್ತಿದೆ. ಗುಜರಾತ್‌ನಲ್ಲಿರುವ ರಿಲಯನ್ಸ್‌ನ ವಿಶ್ವದ ಅತಿದೊಡ್ಡ ಸಂಸ್ಕರಣಾಗಾರವು ದಿನಕ್ಕೆ 1.24 ಮಿಲಿಯನ್ ಬ್ಯಾರೆಲ್ ತೈಲವನ್ನು ಉತ್ಪಾದಿಸುತ್ತದೆ ಮತ್ತು ರಿಲಯನ್ಸ್ ದೇಶಾದ್ಯಂತ 64,000 ಕ್ಕೂ ಹೆಚ್ಚು ಪೆಟ್ರೋಲ್ ಪಂಪ್‌ಗಳನ್ನು ಸಕ್ರಿಯವಾಗಿದೆ.

ರಿಲಯನ್ಸ್ ಜಿಯೋ–ಬಿಪಿ ಪೆಟ್ರೋಲ್ ಪಂಪ್ ಡೀಲರ್‌ಶಿಪ್ ಪಡೆಯುವುದು ಹೇಗೆ: ರಿಲಯನ್ಸ್ ಜಿಯೋ–ಬಿಪಿ ಪೆಟ್ರೋಲ್ ಪಂಪ್ ಡೀಲರ್ ಆಗಲು, ನೀವು ಮೊದಲು ಅವರ ಅಧಿಕೃತ ವೆಬ್‌ಸೈಟ್ Jio-BPಗೆ ಹೋಗಬೇಕು. ಅಲ್ಲಿ ನೋಂದಣಿಗಾಗಿ ನೀವು ನಿಮ್ಮ ಹೆಸರು, ಇಮೇಲ್ ಮತ್ತು ಮೊಬೈಲ್ ಸಂಖ್ಯೆಯನ್ನು ಒದಗಿಸಬೇಕಾಗುತ್ತದೆ. ಇದರ ನಂತರ, ನೀಡಲಾದ ಸೂಚನೆಗಳನ್ನು ಅನುಸರಿಸಿ ಅಗತ್ಯವಿರುವ ಮಾಹಿತಿಯನ್ನು ಭರ್ತಿ ಮಾಡಬೇಕು.

ಸ್ಥಳ ಮತ್ತು ಹೂಡಿಕೆಯ ಅವಶ್ಯಕತೆಗಳು: ಪೆಟ್ರೋಲ್ ಪಂಪ್ ನಡೆಸಲು, ನಿಮಗೆ 800 ಚದರ ಅಡಿ ಭೂಮಿ ಬೇಕಾಗುತ್ತದೆ (ಇದು ಹೆದ್ದಾರಿಯಲ್ಲಿದ್ದರೆ 1500 ಚದರ ಅಡಿ). ಹೂಡಿಕೆಗಾಗಿ ನೀವು 23 ಲಕ್ಷ ರೂಪಾಯಿಗಳ ಮರುಪಾವತಿಸಬಹುದಾದ ಭದ್ರತಾ ಠೇವಣಿ ಮತ್ತು 3.5 ಲಕ್ಷ ರೂಪಾಯಿಗಳ ಸಹಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಈ ಹೂಡಿಕೆಯು ನಿಮ್ಮ ಪೆಟ್ರೋಲ್ ಪಂಪ್‌ನ ಸುಗಮ ಕಾರ್ಯಾಚರಣೆಗೆ ಆರಂಭಿಕ ಬಂಡವಾಳವಾಗಿ ಕಾರ್ಯನಿರ್ವಹಿಸುತ್ತದೆ.

ಪೆಟ್ರೋಲ್ ಪಂಪ್ ಕಾರ್ಯಾಚರಣೆಗೆ ಅಗತ್ಯವಿರುವ ನೌಕರರು ರಿಲಯನ್ಸ್ ಪೆಟ್ರೋಲ್ ಪಂಪ್ ಅನ್ನು ಚಲಾಯಿಸಲು, ಕನಿಷ್ಠ ಮೂರು ಪಂಪ್ ಮ್ಯಾನೇಜರ್‌ಗಳು, ಎಂಟು ಇಂಧನ ಕೆಲಸಗಾರರು ಮತ್ತು ಇಬ್ಬರು ಗಾಳಿ ತುಂಬುವ ಕೆಲಸಗಾರರು ಅಗತ್ಯವಿದೆ. ರಿಲಯನ್ಸ್ ನಿಗದಿಪಡಿಸಿದ ಮಾರ್ಗಸೂಚಿಗಳ ಪ್ರಕಾರ ಈ ಪ್ರಮಾಣಿತ ಕಾರ್ಯವಿಧಾನಗಳನ್ನು ಅನುಸರಿಸಬೇಕು.

### ಡೀಲರ್‌ಶಿಪ್ ಪಡೆಯುವ ಪ್ರಕ್ರಿಯೆ

**ಡೀಲರ್‌ಶಿಪ್‌ಗಾಗಿ ಅರ್ಜಿ ಸಲ್ಲಿಸಲು, ನೀವು ರಿಲಯನ್ಸ್ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಫಾರ್ಮ್ ಅನ್ನು ಭರ್ತಿ ಮಾಡಬೇಕು, ಅದರಲ್ಲಿ ನಿಮ್ಮ ವ್ಯಾಪಾರಕ್ಕಾಗಿ ನೀವು ಭೂಮಿ ಮತ್ತು ಸ್ಥಳವನ್ನು ಆಯ್ಕೆ ಮಾಡಬೇಕು. ಫಾರ್ಮ್ ಅನ್ನು ಸಲ್ಲಿಸಿದ ನಂತರ, ಕಂಪನಿಯ ತಂಡವು ಅದನ್ನು ಪರಿಶೀಲಿಸುತ್ತದೆ ಮತ್ತು ನಿಮ್ಮನ್ನು ಸಂಪರ್ಕಿಸುತ್ತದೆ.**



ಉದಯವಾಹಿನಿ ಚಿತ್ರ

### ಹೂಡಿಕೆಯ ಲಾಭ

**ರಿಲಯನ್ಸ್ ಪೆಟ್ರೋಲ್ ಪಂಪ್ ಅನ್ನು ತೆರೆಯುವುದರಿಂದ ಆರ್ಥಿಕ ಪ್ರಯೋಜನಗಳನ್ನು ಒದಗಿಸುವುದು ಮಾತ್ರವಲ್ಲದೆ ಹೆಸರಾಂತ ಬ್ರಾಂಡ್‌ನೊಂದಿಗೆ ಸಂಬಂಧ ಹೊಂದಲು ಅವಕಾಶವನ್ನು ಒದಗಿಸುತ್ತದೆ. ಈ ಹೂಡಿಕೆಯು ನಿಮಗೆ ಸ್ಥಿರವಾದ ವ್ಯಾಪಾರ ಗುರುತನ್ನು ಒದಗಿಸುತ್ತದೆ, ಇದು ದೀರ್ಘಾವಧಿಯಲ್ಲಿ ಪ್ರಯೋಜನಕಾರಿಯಾಗಿದೆ.**

# ಯಾವ ದಿನ ಕೂದಲು ಮತ್ತು ಉಗುರುಗಳನ್ನು ಕತ್ತರಿಸಬೇಕು?

• ಉದಯವಾಹಿನಿ, ಬೆಂಗಳೂರು

ಒಳ್ಳೆಯದನ್ನು ಮಾಡು, ಕೆಟ್ಟದ್ದನ್ನು ಮಾಡಬೇಡ ಎಂದು ನಮ್ಮ ಹಿರಿಯರು ಹೇಳುತ್ತಾರೆ. ಇದಲ್ಲದೆ, ನಿಮ್ಮ ಕೂದಲನ್ನು ಕತ್ತರಿಸಲು ಅಥವಾ ನಿಮ್ಮ ಉಗುರುಗಳನ್ನು ಕತ್ತರಿಸಲು ಇಂದು ಒಳ್ಳೆಯ ದಿನವಲ್ಲ ಎಂದು ಹೇಳಲಾಗುತ್ತದೆ. ಹಲವರಿಗೆ ಇರುವ ಸಂದೇಹವೆಂದರೆ ಯಾವ ದಿನ ಕೂದಲು ಕತ್ತರಿಸಬೇಕು ಮತ್ತು ಯಾವ ದಿನ ಉಗುರು ಕತ್ತರಿಸಬೇಕು?

ಉಗುರುಗಳನ್ನು ಕತ್ತರಿಸಲು ಯಾವ ದಿನ ಶುಭ ಮತ್ತು ಕೂದಲು ಕತ್ತರಿಸಲು ಯಾವ ದಿನ ಶುಭ ಎಂಬ ವಿವರಗಳನ್ನು ಈಗ ನೋಡೋಣ.

ಉಗುರು ಮತ್ತು ಕೂದಲು ಕತ್ತರಿಸುವಾಗ ಈ ತಪ್ಪುಗಳನ್ನು ಮಾಡಬೇಡಿ. ಈ ತಪ್ಪನ್ನು ಮಾಡುವುದರಿಂದ ಆರೋಗ್ಯ ಸಮಸ್ಯೆಗಳಂತಹ ಆರ್ಥಿಕ ಸಮಸ್ಯೆಗಳಿಗೆ ಕಾರಣವಾಗಬಹುದು. ಗ್ರಹಗಳ ಪ್ರಭಾವವು ನಿಮ್ಮ ಮೇಲೆ ಬೀಳುತ್ತದೆ ಮತ್ತು ಬಡತನಕ್ಕೆ ಬೀಳುವ ಅಪಾಯವೂ ಇದೆ. ವಿಜ್ಞಾನದ ಪ್ರಕಾರ, ಕೂದಲನ್ನು ಕತ್ತರಿಸಲು ಉತ್ತಮ ಸಮಯವೆಂದರೆ ಬೆಳಿಗ್ಗೆ 6 ರಿಂದ ಮಧ್ಯಾಹ್ನ 12 ರವರೆಗೆ. ಸೋಮವಾರ ಕೂದಲು ಕತ್ತರಿಸುವುದರಿಂದ ಆದಾಯ ಹೆಚ್ಚಾಗುತ್ತದೆ. ಮಕ್ಕಳನ್ನು ಹುಡುಕುವವರು, ಮನೆಯಲ್ಲಿ ಒಬ್ಬನೇ ಮಗನಿರುವವರು ಸೋಮವಾರ ಕೂದಲು ಕತ್ತರಿಸಬಾರದು. ಮಂಗಳವಾರ ಮಂಗಳ ಗ್ರಹಕ್ಕೆ ಸೇರಿದೆ. ಮಂಗಳವನ್ನು ಧೈರ್ಯದ ಅಂಶವೆಂದು ಪರಿಗಣಿಸಲಾಗುತ್ತದೆ. ಮಂಗಳವಾರ ಉಗುರು ಕತ್ತರಿಸುವುದು ಮತ್ತು ಕೂದಲು ಕತ್ತರಿಸುವುದು ಕೋಪವನ್ನು ಹೆಚ್ಚಿಸುತ್ತದೆ. ಜೀವಿತಾವಧಿಯೂ ಕಡಿಮೆಯಾಗುತ್ತದೆ. ಬುಧವಾರ ಕೂದಲು ಕತ್ತರಿಸುವುದರಿಂದ ನಿರುದ್ಯೋಗಿಗಳಿಗೆ ಬುಧ ಉತ್ತಮ ಸ್ಥಾನವನ್ನು ಬಲಪಡಿಸುತ್ತದೆ ಮತ್ತು ಆದಾಯವನ್ನು ಹೆಚ್ಚಿಸುತ್ತದೆ.



ಉದಯವಾಹಿನಿ ಚಿತ್ರ

**ಗುರುವಾರ ಗುರು ಗ್ರಹದೊಂದಿಗೆ ಸಂಬಂಧಿಸಿದೆ, ಇಂದು ಇಂತಹ ಕೆಲಸಗಳನ್ನು ಮಾಡುವುದರಿಂದ ಲಕ್ಷ್ಮಿ ದೇವಿಗೆ ಕೋಪ ಬರುತ್ತದೆ. ಶುಕ್ರವಾರ ಲಕ್ಷ್ಮಿ ದೇವಿಗೆ ಪ್ರಿಯವಾದ ದಿನ. ಇಂದು ಇಂತಹ ಕೆಲಸಗಳನ್ನು ಮಾಡುವುದರಿಂದ ಒಳ್ಳೆಯ ಫಲಿತಾಂಶ ಸಿಗುವುದಿಲ್ಲ. ಆರ್ಥಿಕ ನಷ್ಟ ಉಂಟಾಗಲಿದೆ. ಶನಿವಾರ ಕೂಡ ಇಂತಹ ಕೆಲಸಗಳನ್ನು ಮಾಡಬಾರದು. ನೀವು ಅಂತಹ ಕೆಲಸಗಳನ್ನು ಮಾಡಿದರೆ, ಹಠಾತ್ ಮರಣವು ಆರ್ಥಿಕ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಭಾನುವಾರದಂದು ಇಂತಹ ಕೆಲಸಗಳನ್ನು ಮಾಡುವುದರಿಂದ ನಕಾರಾತ್ಮಕ ಪರಿಣಾಮಗಳು ಉಂಟಾಗುತ್ತವೆ ಮತ್ತು ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ. ವಿಧಿ, ತದಿಯಾ, ಪಂಚಮಿ, ಸಪ್ತಮಿ ಮತ್ತು ತ್ರಯೋದಶಿ ತಿಥಿಗಳಲ್ಲಿ ಇಂತಹ ಕೆಲಸಗಳನ್ನು ಮಾಡುವುದು ಒಳ್ಳೆಯದು.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ಕುತ್ತಿಗೆ / ಬೆನ್ನಿನಲ್ಲಿ ನಿರಂತರ ನೋವಿನಿಂದ ಬಳಲುವ ಸಾಧ್ಯತೆಯಿದೆ. ವಿಶೇಷವಾಗಿ ಇದರ ಜೊತೆ ಸಾಮಾನ್ಯ ದೌರ್ಬಲ್ಯವಿದ್ದಾಗ ಇದನ್ನು ನಿರ್ಲಕ್ಷಿಸದಿರಿ. ಇಂದು ವಿಶ್ರಾಂತಿ ಬಹಳ ಪ್ರಮುಖವಾಗಿರುತ್ತದೆ.

**ವೃಷಭ** ನಿಮ್ಮ ಶೀಘ್ರ ಕ್ರಮ ನಿಮ್ಮನ್ನು ಪ್ರೇರೇಪಿಸುತ್ತದೆ. ಯಶಸ್ಸಾಧಿಸಲು-ಸಮಯದ ಜೊತೆ ನಿಮ್ಮ ಆಲೋಚನೆಗಳನ್ನು ಬದಲಾಯಿಸಿಕೊಳ್ಳಿ-ಇದು ನಿಮ್ಮ ದೃಷ್ಟಿಯನ್ನು ವಿಸ್ತಾರಗೊಳಿಸುತ್ತದೆ ನಿಮ್ಮ ವ್ಯಕ್ತಿತ್ವವನ್ನು ವೃದ್ಧಿಸುತ್ತದೆ.

**ಮಿಥುನ** ನೀವು ಇಂದು ಸಂಬಂಧಗಳ ಮಹತ್ವವನ್ನು ಅನುಭವಿಸಬಹುದು. ಏಕೆಂದರೆ ದಿನದ ಹೆಚ್ಚಿನ ಸಮಯ ನೀವು ನಿಮ್ಮ ಕುಟುಂಬದ ಸದಸ್ಯರೊಂದಿಗೆ ಕಳೆಯುತ್ತೀರಿ.

**ಕರ್ಕಾಟಕ** ನಿಮ್ಮ ಜೀವನವನ್ನು ಲಘುವಾಗಿ ತೆಗೆದುಕೊಳ್ಳಬೇಡಿ ನೆನಪಿಡಿ, ಬದುಕಿನ ರಕ್ಷಣೆ ನಿಜವಾದ ಆಣೆ. ವಿದೇಶಿ ಸಂಪರ್ಕಗಳನ್ನು ಹೊಂದಿರುವ ವ್ಯಾಪಾರಿಗಳಿಗೆ ಇಂದು ಹಣದ ನಷ್ಟವಾಗುವ ಸಾಧ್ಯತೆ ಇದೆ.

**ಸಿಂಹ** ಉತ್ತಮ ಆರೋಗ್ಯ ಏನಾದರೂ ಅಸಾಮಾನ್ಯವಾಗಿದ್ದನ್ನು ಸಾಧಿಸಲು ಸಾಧ್ಯವಾಗಿಸುವ ಒಂದು ವಿಶೇಷ ದಿನ. ಯಾವುದೇ ಆಪ್ತ ಸಂಬಂಧಿಕರ ಬೆಂಬಲದಿಂದ ನೀವು ನಿಮ್ಮ ವ್ಯಾಪಾರದಲ್ಲಿ ಉತ್ತಮವಾಗಿ ಮಾಡಬಹುದು.

**ಕನ್ಯಾ** ನಿಮ್ಮ ಹೆಂಡತಿಯ ಜೊತೆ ಕುಟುಂಬದ ಸಮಸ್ಯೆಗಳನ್ನು ಹಂಚಿಕೊಳ್ಳಿ. ನಿಮ್ಮನ್ನು ನೀವೇ ಒಂದು ಪ್ರೀತಿಯ ಪೋಷಿಸುವ ಜೋಡಿಯನ್ನುದನ್ನು ಪುನಃ ಕಂಡುಹಿಡಿಯಲು ಸ್ವಲ್ಪ ಸಮಯ ಖರ್ಚು ಮಾಡಿ.

**ತುಲಾ** ಮಾನಸಿಕ ಒತ್ತಡ ತರುವ ಸುಪ್ತ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ನಿಮಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ.

**ವೃಶ್ಚಿಕ** ನಿಮ್ಮ ಒತ್ತಡ ನಿವಾರಿಸಲು ಕುಟುಂಬದ ಸದಸ್ಯರ ಬೆಂಬಲ ಪಡೆಯಿರಿ. ಅವರ ಸಹಾಯವನ್ನು ಗೌರವದಿಂದ ಸ್ವೀಕರಿಸಿ. ನೀವು ಭಾವನೆಗಳನ್ನು ಮತ್ತು ಒತ್ತಡಗಳನ್ನು ಒಳಗೆ ಅದುಮಿಡಬಾರದು.

**ಧನಸ್ಸು** ಗರ್ಭಿಣಿಯರಿಗೆ ವಿಶೇಷ ಕಾಳಜಿಯ ದಿನ. ನೀವು ಜನರು ನಿಮ್ಮಿಂದ ಏನು ಬಯಸುತ್ತಾರೆಂದು ನಿಖರವಾಗಿ ತಿಳಿದಿರುವಂತೆ ತೋರುತ್ತದೆ. ಆದರೆ ಇಂದು ನಿಮ್ಮ ಖರ್ಚುಗಳಲ್ಲಿ ತುಂಬಾ ಉದಾರಿಯಾಗಿರದಿರಲು ಪ್ರಯತ್ನಿಸಿ.

**ಮಕರ** ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆಕ್ರಮಿಸಿಕೊಳ್ಳಲು ಬಿಡಬೇಡಿ. ಶಾಂತವಾಗಿ ಮತ್ತು ಒತ್ತಡ ಮುಕ್ತವಾಗಿ ಉಳಿಯಲು ಪ್ರಯತ್ನಿಸಿ ಹಾಗೂ ಅದು ನಿಮ್ಮ ಮಾನಸಿಕ ದೃಢತೆಯನ್ನು ಹೆಚ್ಚಿಸುತ್ತದೆ.

**ಕುಂಭ** ಧರ್ಮಾರ್ಥ ಮತ್ತು ಸಮಾಜ ಸೇವೆ ಇಂದು ನಿಮ್ಮನ್ನು ಸೆಳೆಯುತ್ತವೆ - ನೀವು ಧರ್ಮಾರ್ಥ ಕಾರಣಕ್ಕಾಗಿ ನಿಮ್ಮ ಸಮಯ ವ್ಯಯಿಸಿದಲ್ಲಿ ಅಗಾಧವಾದ ವ್ಯತ್ಯಾಸ ಉಂಟುಮಾಡಬಹುದು.

**ಮೀನ** ದಿನದ ಕೊನೆಯಲ್ಲಿ ನಿಮಗಾಗಿ ಸಮಯ ಸಿಗುತ್ತದೆ ಮತ್ತು ನಿಕಟ ವ್ಯಕ್ತಿಯನ್ನು ಭೇಟಿಯಾಗುವ ಮೂಲಕ ನೀವು ಈ ಸಮಯವನ್ನು ಚೆನ್ನಾಗಿ ಬಳಸಿಕೊಳ್ಳಬಹುದು.

# ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಮಾಡದ ಬೊಮ್ಮಾಯಿ: ಡಿಕೆಶಿ

## ಬೊಮ್ಮಾಯಿ ಕಾಂಗ್ರೆಸ್ ನೀಡಿರುವ ಒಂದೇ ಒಂದು ಯೋಜನೆ ನಿಮ್ಮ ಅವಧಿಯಲ್ಲಿ ನೀಡಿದ್ದರೆ, ನಾವು ಈ ಕ್ಷೇತ್ರ ಬಿಟ್ಟು ಹೋಗುತ್ತೇವೆ

• ಉದಯವಾಹಿನಿ, ಹಾವೇರಿ

ಬಸವರಾಜ ಬೊಮ್ಮಾಯಿ ಅವರೇ ಕಾಂಗ್ರೆಸ್ ನೀಡಿರುವ ಒಂದೇ ಒಂದು ಯೋಜನೆ ನಿಮ್ಮ ಅವಧಿಯಲ್ಲಿ ನೀಡಿದ್ದರೆ, ನಾವು ಶಿಗ್ಗಾಂವಿ ಕ್ಷೇತ್ರ ಬಿಟ್ಟು ಹೋಗುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಸವಾಲು ಹಾಕಿದರು.


ಶಿಗ್ಗಾವಿ ಕ್ಷೇತ್ರದಲ್ಲಿ ತಾತ, ಮಗನ ನಂತರ ಮೊಮ್ಮಗ ಚುನಾವಣಾ ಅಖಾಡಕ್ಕೆ ಬಂದಿದ್ದಾರೆ.

ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಮಾಡದ ಬೊಮ್ಮಾಯಿ ಅವರ 17 ವರ್ಷದ ರಾಜಕಾರಣ ಕೊನೆಯಾಗಬೇಕು. ಕ್ಷೇತ್ರದ ಜನ ಕಾಂಗ್ರೆಸ್‌ಗೆ ಮತ ಹಾಕಬೇಕು ಎಂದು ಡಿಸಿಎಂ ಡಿ. ಕೆ. ಶಿವಕುಮಾರ್ ಅವರು ಕರೆ ನೀಡಿದರು.

ಯಾರಿಗೂ ಹೆಣ್ಣು ನೋಡಲು ಹೋಗಿ ತಾನೇ ಮದುವೆ ಆದನಂತೆ.

ಬಸವರಾಜ ಬೊಮ್ಮಾಯಿ ಅವರ ಸ್ಥಿತಿ ಇದೇ ರೀತಿಯಾಗಿದೆ. ನಾನು ಮಾಧ್ಯಮಗಳಲ್ಲಿ ನೋಡುತ್ತಿದ್ದೆ. ಟಿಕೆಟ್ ನನಗೆ ಬೇಡ ಕಾರ್ಯಕರ್ತರಿಗೆ ನೀಡಿ ಎಂದು ಬೊಮ್ಮಾಯಿ ಹೇಳುತ್ತಿದ್ದರು. ಕೊನೆಗೆ ತಮ್ಮ ಮಗನಿಗೆ ಟಿಕೆಟ್ ಕೊಡಿಸಿದ್ದಾರೆ. 17 ವರ್ಷಗಳಿಂದ ಬಸವರಾಜ ಬೊಮ್ಮಾಯಿಯವರು ಕ್ಷೇತ್ರದ ಅಭಿವೃದ್ಧಿ ಮಾಡಿಲ್ಲ. ಬಸವರಾಜ ಬೊಮ್ಮಾಯಿ ಅವರೇ ಕಾಂಗ್ರೆಸ್ ನೀಡಿರುವ ಒಂದೇ ಒಂದು ಯೋಜನೆ ನಿಮ್ಮ ಅವಧಿಯಲ್ಲಿ ನೀಡಿದ್ದರೆ, ನಾವು ಈ ಕ್ಷೇತ್ರ ಬಿಟ್ಟು ಹೋಗುತ್ತೇವೆ ಎಂದು ಸವಾಲು ಹಾಕಿದರು. ಕಾಂಗ್ರೆಸ್ ಪಕ್ಷದ ಶಾಸಕರನ್ನು ಆಪರೇಷನ್ ಕಮಲ ಮಾಡಿ ಬಿಜೆಪಿ ಸರ್ಕಾರ ರಚನೆ ಮಾಡಿತ್ತು. ಈ ವೇಳೆಯಲ್ಲಿ ಮುಖ್ಯಮಂತ್ರಿ ಆಗಿದ್ದ ಬೊಮ್ಮಾಯಿ ಅವರಿಗೆ ತಮ್ಮ ಕ್ಷೇತ್ರವನ್ನು ಅಭಿವೃದ್ಧಿ ಮಾಡುವ ಸದಾವಕಾಶ ಸಿಕ್ಕಿತ್ತು.

ಬದುಕಿನ ಮೇಲೆ ರಾಜಕಾರಣ



ಆದರೂ ಅವರು ಕ್ಷೇತ್ರವನ್ನು ಅಭಿವೃದ್ಧಿ ಮಾಡಲಿಲ್ಲ ಎಂದು ಕಿಡಿಕಾರಿದರು.

ಚನ್ನಪಟ್ಟಣದ ಟಿಕೆಟ್ ಅನ್ನು ನನ್ನ ತಮ್ಮ ಸುರೇಶ್‌ಗೆ ನೀಡಬಹುದಿತ್ತು. ಆದರೆ ಕಾಂಗ್ರೆಸ್ ಪಕ್ಷ ಹಾಗೂ ನಾನು ಆ ಕೆಲಸ ಮಾಡದೆ, ಬಿಜೆಪಿ ಸಹವಾಸ ಸಾಕು ಎಂದು ಕಾಂಗ್ರೆಸ್ ಸೇರಿದ ಯೋಗೇಶ್ವರ್ ಅವರಿಗೆ ಟಿಕೆಟ್ ನೀಡಲಾಗಿದೆ. ಕಾಂಗ್ರೆಸ್ ಸೇರಿದ ಅವರು ದಡ್ಡರೇ ಕಾಂಗ್ರೆಸ್ ಸರ್ಕಾರದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಅವರಿಗೆ ಅರಿವಾಗಿದೆ. ಶಿಗ್ಗಾವಿ ಕ್ಷೇತ್ರದ ಜನರೇ ನಿಮ್ಮ ಮನೆ ಬಾಗಿಲಿಗೆ ಅಧಿಕಾರ ಬಂದಿದೆ. ಬೊಮ್ಮಾಯಿ ಅವರ ನೇತೃತ್ವದಲ್ಲಿ ಬಿಜೆಪಿ ಚುನಾವಣೆ ಎದುರಿಸಿತು, ಏಕೆ ಅಧಿಕಾರಕ್ಕೆ ಬರಲಿಲ್ಲ. ಯಡಿಯೂರಪ್ಪ ಅವರು ಆಪರೇಷನ್ ಕಮಲ ನಡೆಸಿ ಸರ್ಕಾರ ಮಾಡಿದರು.

### ಪಕ್ಷದ ಮೇಲೆ ವಿಶ್ವಾಸವಿಡಿ

ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಗಳಾದಾಗ ಅನ್ನಭಾಗ್ಯ, ಕ್ಷೀರ ಭಾಗ್ಯ, ಕೃಷಿ ಭಾಗ್ಯ ಯೋಜನೆಗಳು ಜಾರಿಗೆ ಬಂದವು. 2023 ರಲ್ಲಿ ಅಧಿಕಾರಕ್ಕೆ ಬರುವ ಮುಂಚಿತವಾಗಿ ಕರ್ನಾಟಕದ ಜನರ ಬಳಿ ಮನವಿ ಮಾಡಿ ಕಾಂಗ್ರೆಸ್ ಪಕ್ಷದ ಮೇಲೆ ವಿಶ್ವಾಸವಿಡಿ ಎಂದೆವು. ಜನ ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿದ್ದರು. ಕಾಂಗ್ರೆಸ್ ಭಾವನೆ ಮೇಲೆ ರಾಜಕಾರಣ ಮಾಡುವುದಿಲ್ಲ, ಬದುಕಿನ ಮೇಲೆ ರಾಜಕಾರಣ ಮಾಡುತ್ತದೆ ಎಂದು ಹಳ್ಳಿ, ಹಳ್ಳಿಯನ್ನು ಸುತ್ತಿ ಜನ ಜಾಗೃತಿ ಮಾಡಿದೆವು ಎಂದರು.

ಆದರೆ ಈ ಬಾರಿ ಅವರ ನಾಣ್ಯ ಚಲಾವಣೆಯಾಗಲಿಲ್ಲ ಎಂದರು. ವೀರೇಂದ್ರ ಪಾಟೀಲ್ ಅವರು ಮುಖ್ಯಮಂತ್ರಿಗಳಾಗಿದ್ದಾಗ, ಬಗರ್ ಹುಕುಂ ಅರ್ಜಿ ಹಾಕಿಸಿ ರೈತರಿಗೆ ಜಮೀನು ನೀಡುವ ಮಹತ್ತರವಾದ ಕೆಲಸ ಆರಂಭವಾಯಿತು. ಇಂದಿರಾ ಗಾಂಧಿ, ದೇವರಾಜ ಅರಸು ಅವರ ಕಾಲದಲ್ಲಿ ಭೂ ಸುಧಾರಣಾ ಕಾಯ್ದೆಗಳನ್ನು ಜಾರಿಗೆ ತಂದು, ಉಳುವವನೇ ಭೂಮಿಯ ಒಡೆಯ ಕಾನೂನನ್ನು ಜಾರಿಗೆ ತರಲಾಯಿತು.

ವೃದ್ಧಾಪ್ಯ ವೇತನ, ವಿಧವಾ ವೇತನವನ್ನು ಅಶಕ್ತರಿಗೆ ನೀಡಲಾಯಿತು.

> ಬಡ, ಮಾಧ್ಯಮ ವರ್ಗದ ಜನರು ಬದುಕು ನಡೆಸಲು ತತ್ತರಿಸುತ್ತಿದ್ದರು. ಜನರ ಬವಣೆ ನೋಡಲು ಆಗದೆ ಅಧಿಕಾರಕ್ಕೆ ಬಂದ ತಕ್ಷಣ ಕೊಟ್ಟ ಮಾತಿನಂತೆ, ಐದು ಗ್ಯಾರಂಟಿಗಳನ್ನು ಕಾಂಗ್ರೆಸ್ ಸರ್ಕಾರ ನೀಡಿದೆ. ಶಕ್ತಿ ಯೋಜನೆಯಿಂದ ನಮ್ಮ ಹೆಣ್ಣುಮಕ್ಕಳು ಧರ್ಮಸ್ಥಳ, ಕೊಲ್ಲೂರು ಸೇರಿದಂತೆ ರಾಜ್ಯದ ನಾನಾ ಭಾಗಗಳ ಪುಣ್ಯಕ್ಷೇತ್ರಗಳನ್ನು ನೋಡುತ್ತಿದ್ದಾರೆ
> -ಡಿ ಕೆ ಶಿವಕುಮಾರ್, ಡಿಸಿಎಂ

# ಬೆಳೆಹಾನಿ ರೈತರ ಪಟ್ಟಿ ಪ್ರಕಟ: ಆಕ್ಷೇಪಣೆಗಳಿಗೆ ಆಹ್ವಾನ

• ಉದಯವಾಹಿನಿ, ಚಿತ್ರದುರ್ಗ

ಕಳೆದ ಅಕ್ಟೋಬರ್ ಮಾಹೆಯಲ್ಲಿ ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು ಹಾಗೂ ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ನೈಸರ್ಗಿಕ ವಿಕೋಪಗಳಾದ ಪ್ರವಾಹ, ಅತಿವೃಷ್ಠಿಯಿಂದ ಬೆಳೆಹಾನಿ ಆದ ರೈತರ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಈ ಕುರಿತು ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು ಹಾಗೂ ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಕಳೆದ ಅಕ್ಟೋಬರ್ ಮಾಹೆಯಲ್ಲಿ ನೈಸರ್ಗಿಕ ವಿಕೋಪಗಳಾದ ಪ್ರವಾಹ, ಅತಿವೃಷ್ಠಿಯಿಂದ ಉಂಟಾದ ಬೆಳೆ ಹಾನಿ ಬಗ್ಗೆ ಜಂಟಿ ಸಮೀಕ್ಷಾ ತಂಡವು ಸ್ಥಳ ಪರಿಶೀಲನೆ ನಡೆಸಿ, ಬೆಳೆ ಹಾನಿ ಕ್ಷೇತ್ರಗಳ ಮಾಹಿತಿ ನೀಡಿದೆ.

ಜಿಲ್ಲೆಯಲ್ಲಿ ಒಟ್ಟು 914.45 ಹೆಕ್ಟೇರ್ ಕೃಷಿ ಬೆಳೆ ಹಾಗೂ 241.80 ತೋಟಗಾರಿಕೆ ಬೆಳೆ ಸೇರಿ ಒಟ್ಟು 1,156.25 ಹೆಕ್ಟೇರ್ ಕ್ಷೇತ್ರದಲ್ಲಿ ಬೆಳೆ ಹಾನಿಯಾಗಿದೆ. ಚಿತ್ರದುರ್ಗ ತಾಲ್ಲೂಕಿನಲ್ಲಿ 172.77 ಹೆಕ್ಟೇರ್ ಕೃಷಿ, 94.50 ತೋಟಗಾರಿಕೆ ಸೇರಿ 267.27 ಹೆಕ್ಟೇರ್ ಬೆಳೆ ಹಾನಿ ಸಂಭವಿಸಿದೆ. ಚಳ್ಳಕೆರೆ ತಾಲ್ಲೂಕಿನಲ್ಲಿ 478.47 ಹೆಕ್ಟೇರ್ ಕೃಷಿ ಬೆಳೆ, 89.40 ಹೆಕ್ಟೇರ್ ತೋಟಗಾರಿಕೆ ಸೇರಿ 567.87 ಹೆಕ್ಟೇರ್ ಬೆಳೆ ಹಾನಿಯಾಗಿದೆ. ಹಿರಿಯೂರು ತಾಲ್ಲೂಕಿನಲ್ಲಿ 162.50 ಹೆಕ್ಟೇರ್ ಕೃಷಿ, 35 ಹೆಕ್ಟೇರ್ ತೋಟಗಾರಿಕೆ ಬೆಳೆ ಸೇರಿ 197.50 ಹೆಕ್ಟೇರ್ ಹಾನಿಯಾಗಿದೆ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ 100.71 ಹೆಕ್ಟೇರ್ ಕೃಷಿ ಬೆಳೆ ಹಾಗೂ 22.90 ಹೆಕ್ಟೇರ್ ತೋಟಗಾರಿಕೆ ಬೆಳೆ ಸೇರಿ 123.61 ಹೆಕ್ಟೇರ್ ಬೆಳೆ ಹಾನಿಯಾಗಿದೆ.



**ಜಿಲ್ಲೆಯಲ್ಲಿ 1,156.25 ಹೆಕ್ಟೇರ್ ಬೆಳೆಹಾನಿ**

ಬೆಳೆಹಾನಿಯಾದ ರೈತರ ಪಟ್ಟಿಯನ್ನು ಜಿಲ್ಲಾಧಿಕಾರಿಗಳ ಕಚೇರಿ, ಉಪವಿಭಾಗಾಧಿಕರಿಗಳ ಕಚೇರಿ ಸೇರಿದಂತೆ ಆಯಾ ತಾಲ್ಲೂಕು ತಹಶೀಲ್ದಾರ್ ಕಚೇರಿ, ಗ್ರಾಮ ಪಂಚಾಯತಿ ಕಚೇರಿ, ರೈತ ಸಂಪರ್ಕ ಕೇಂದ್ರಗಳಲ್ಲಿ ಬುಧವಾರದಂದು ಪ್ರಕಟಿಸಲಾಗಿದೆ. ಈ ಕುರಿತು ಯಾವುದಾದರೂ ಆಕ್ಷೇಪಣೆಗಳು ಇದ್ದಲ್ಲಿ, ಸಂಬಂಧಪಟ್ಟ ತಹಶೀಲ್ದಾರ್, ಕೃಷಿ, ತೋಟಗಾರಿಕೆ ಇಲಾಖೆಯ ಕಚೇರಿಗಳಿಗೆ 7 ದಿನಗಳೊಳಗಾಗಿ ಸಲ್ಲಿಸಬಹುದು.

ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದರೆ ಪಟ್ಟಿಯನ್ನು ಅಂತಿಮಗೊಳಿಸಿ ನಿಯಮಾನುಸಾರ ಪರಿಹಾರ ಪಾವತಿಗೆ ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಳೆ ಬಿಡುವು: ಹಿಂಗಾರು ಬಿತ್ತನೆ ಚುರುಕು

• ಉದಯವಾಹಿನಿ, ಲಕ್ಷ್ಮೇಶ್ವರ

ಒಂದೂವರೆ ತಿಂಗಳಿಂದ ಸತತ ಸುರಿದ ಮಳೆ ದೀಪಾವಳಿ ನಂತರ ಬಿಡುವು ನೀಡಿದೆ. ಈಗ ಹಿಂಗಾರು ಬಿತ್ತನೆ ಬಿರುಸು ಪಡೆದುಕೊಂಡಿದೆ. ಮಳೆ ನಿಲ್ಲುವುದನ್ನೇ ಕಾಯುತ್ತಿದ್ದ ರೈತರು ಬಿಳಿಜೋಳ, ಕಡಲೆ, ಕುಸುಬಿ, ಗೋಧಿ ಬಿತ್ತನೆ ಮಾಡಲು ಮುಂದಾಗಿದ್ದಾರೆ.

ಸದ್ಯ ಉತ್ತಮ ಮಳೆ ಆಗಿದ್ದು ಹಿಂಗಾರು ಬೆಳೆಗಳು ಚೆನ್ನಾಗಿ ಫಸಲು ನೀಡಬಹುದು ಎಂಬ ನಿರೀಕ್ಷೆ ರೈತರದು. ವಿಶೇಷ ಎಂದರೆ ಮುಂಗಾರು ಹಂಗಾಮಿನ ಬೆಳೆಗಳನ್ನು ಎರೆ ಭೂಮಿಗಳಲ್ಲಿ ಹೆಚ್ಚಾಗಿ ಬಿತ್ತನೆ ಮಾಡಲಾಗುತ್ತದೆ. ಅದರಲ್ಲೂ ಗೋಧಿ, ಕುಸುಬೆ, ಬಿಳಿಜೋಳ ಮತ್ತು ಕಡಲೆ ತಂಪು ಹವಾಗುಣದಲ್ಲಿ ಬೆಳೆಯುವ ಬೆಳೆಗಳು. ಪ್ರಸ್ತುತ ಸಾಲಿನಲ್ಲಿ 3,800 ಹೆಕ್ಟೇರ್ ತೃಣ ಧಾನ್ಯ, 7,870 ಹೆಕ್ಟೇರ್ ದ್ವಿದಳ ಧಾನ್ಯ, 3,860 ಹೆಕ್ಟೇರ್‌ಗಳಲ್ಲಿ ಎಣ್ಣೆ ಕಾಳು, 1,300 ಹೆಕ್ಟೇರ್‌ಗಳಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಉದ್ದೇಶಿಸಲಾಗಿದೆ. 2,700 ಹೆಕ್ಟೇರ್‌ಗಳಲ್ಲಿ ಬಿಳಿಜೋಳ, 6,700 ಹೆಕ್ಟೇರ್‌ಗಳಲ್ಲಿ ಕಡಲೆ, 1,000 ಹೆಕ್ಟೇರ್‌ಗಳಲ್ಲಿ ಕುಸುಬೆ ಮತ್ತು 500 ಹೆಕ್ಟೇರ್‌ಗಳಲ್ಲಿ ಗೋಧಿ ಬಿತ್ತನೆ ಆಗಬಹುದು ಎಂದು ಕೃಷಿ ಇಲಾಖೆ ಅಂದಾಜು ಮಾಡಿದೆ.



ಉದಯವಾಹಿನಿ ಚಿತ್ರ


ಈ ವರ್ಷ ಆರಂಭದಲ್ಲಿಯೇ ಹಿಂಗಾರು ಮಳೆ ಚೆನ್ನಾಗಿ ಸುರಿದಿರುವುದು ಅನ್ನದಾತರಲ್ಲಿ ಆಶಾಭಾವ ಮೂಡಿಸಿದೆ. ಹೆಚ್ಚು ತಂಪು ವಾತಾವರಣ ಬಿಟ್ಟಷ್ಟು ಹಿಂಗಾರು ಬೆಳೆಗಳು ಚೆನ್ನಾಗಿ ಬೆಳೆಯುತ್ತವೆ. ಈ ವರ್ಷ ನಿರಂತರ ಮಳೆ ಆಗಿರುವ ಕಾರಣ ಹೆಚ್ಚು ಪ್ರಮಾಣದಲ್ಲಿ ತಂಪು ಬಿಡಬಹುದು ಎಂದು ರೈತರು ಲೆಕ್ಕಾಚಾರ ಹಾಕಿದ್ದಾರೆ.

# ಕಬ್ಬು ಅರೆಯುವ ಹಂಗಾಮನ್ನು ಒಂದು ವಾರ ಮೊದಲು ಆರಂಭಿಸುವಂತೆ ಆದೇಶ: ಶಿವಾನಂದ ಪಾಟೀಲ

• ಉದಯವಾಹಿನಿ, ಹುಬ್ಬಳ್ಳಿ

ಪ್ರಸ್ತುತ ವರ್ಷ ಉತ್ತರ ಕರ್ನಾಟಕ ಭಾಗದಲ್ಲಿ ಕಬ್ಬು ಅರೆಯುವ ಹಂಗಾಮನ್ನು ಒಂದು ವಾರ ಮೊದಲು ಆರಂಭಿಸುವಂತೆ ಆದೇಶ ಹೊರಡಿಸಲಾಗಿದೆ' ಎಂದು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ಈ ಮೊದಲು ನವೆಂಬರ್ 15ರಿಂದ ಕಬ್ಬು ಅರೆಯಲು ಆರಂಭಿಸುವಂತೆ ಆದೇಶಿಸಲಾಗಿತ್ತು. ರೈತರ ಒತ್ತಾಯ ಹಾಗೂ ಕಾರ್ಖಾನೆ ಮಾಲೀಕರ ಕೋರಿಕೆ ಮೇರೆಗೆ ನವೆಂಬರ್ 8ರಿಂದ ಆರಂಭಿಸಲು ತೀರ್ಮಾನಿಸಲಾಗಿದೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಮೂರು ತಿಂಗಳ ಹಿಂದೆಯೇ ಆರಂಭಿಸಲಾಗಿದೆ' ಎಂದರು. ಬೆಂಬಲ ಬೆಲೆಯಲ್ಲಿ ಹೆಸರು ಕಾಳು ಖರೀದಿ ಪ್ರಕ್ರಿಯೆ ಮುಗಿದಿತ್ತು. ಈಗ ಮತ್ತೆ ಅದನ್ನು ವಿಸ್ತರಿಸಿ, 32 ಸಾವಿರ ಮೆಟ್ರಿಕ್ ಟನ್ ಖರೀದಿವರೆಗೆ ಹೆಚ್ಚಳ ಮಾಡಲಾಗಿದೆ. ಅದರ ಜೊತೆಗೆ ಸೋಯಾಬಿನ್ ಖರೀದಿ ಸಹ ವಿಸ್ತರಿಸಲಾಗಿದೆ. ದರ ಕುಸಿತವಾದಾಗಲೆಲ್ಲ ಬೆಳೆಗೆ ಬೆಂಬಲ ಬೆಲೆ ಘೋಷಿಸಿ ಎಪಿಎಂಸಿಯಲ್ಲಿ ಖರೀದಿಸಲಾಗುತ್ತಿದೆ. ಇದೇ ಮೊದಲ ಬಾರಿಗೆ ಸೋಯಾಬಿನ್, ಹೆಸರು, ಸೂರ್ಯಕಾಂತಿ ಮತ್ತು ಕೊಬ್ಬರಿಗೆ ಬೆಂಬಲ ಬೆಲೆ ಘೋಷಿಸಿ, ಏಕಕಾಲದಲ್ಲಿ ಖರೀದಿಸಲಾಗಿದೆ' ಎಂದ ಸಚಿವರು, 'ಎಪಿಎಂಸಿ ಕಾಯ್ದೆ ಹಿಂಪಡೆದ ಕಾರಣ ರಾಜ್ಯದಲ್ಲಿನ 166 ಎಪಿಎಂಸಿ 200 ಕೋಟಿ ಲಾಭಗಳಿಸಿದೆ' ಎಂದು ತಿಳಿಸಿದರು. ನೂತನ ಜವಳಿ ಕಾಯ್ದೆ ಜಾರಿಗೆ ತರಲು ಉದ್ದೇಶಿಸಲಾಗಿದ್ದು, ಇಲಾಖೆಯಲ್ಲಿನ ಸಿಬ್ಬಂದಿ ಕೊರತೆ ಸೇರಿದಂತೆ ಇತರ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂದರು.



> ರಾಜ್ಯದಲ್ಲಿ ಆರು ಲಕ್ಷ ಹೆಕ್ಟೇರ್ ಕಬ್ಬು ಕಟಾವಿಗೆ ಸಿದ್ಧವಿದ್ದು, ಎಂಬತ್ತು ಕಾರ್ಖಾನೆಗಳು ಕಬ್ಬು ಅರೆಯಲಿವೆ. ಪ್ರತಿ ಟನ್ ಕಬ್ಬಿಗೆ 3,400 ಘೋಷಣೆ ಮಾಡಲಾಗಿದೆ. ಕಳೆದ ವರ್ಷ 3,150 ಇತ್ತು -ಶಿವಾನಂದ ಪಾಟೀಲ

# ನಿಯಮ ಪಾಲಿಸದ ಪವನ ವಿದ್ಯುತ್ ಕಂಪನಿಗಳು

• ಉದಯವಾಹಿನಿ, ರೋಣ

ಇತ್ತೀಚಿನ ದಿನಗಳಲ್ಲಿ ತಾಲ್ಲೂಕಿನಾದ್ಯಂತ ಪವನ ವಿದ್ಯುತ್ ಕಂಪನಿಗಳ ಹಾವಳಿ ಹೆಚ್ಚಾಗಿದ್ದು ಘಟಕ ಅಳವಡಿಕೆ ಸಂದರ್ಭದಲ್ಲಿ ನಿಯಮ ಪಾಲಿಸದ ಮತ್ತು ರೈತರಿಗೆ ಸರಿಯಾದ ಮಾಹಿತಿ ನೀಡದ ಕಂಪನಿಗಳ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರೋಣ ಪುರಸಭೆ ವ್ಯಾಪ್ತಿಯ ಮಜರೆ ಗ್ರಾಮ ಕೃಷ್ಣಾಪುರದ ರಿ.ಸ.ನಂ.18ರ ಜಮೀನಿನಲ್ಲಿ ಖಾಸಗಿ ಪವನ ವಿದ್ಯುತ್ ಕಂಪನಿಯು ಕೃಷಿ ಭೂಮಿಯನ್ನು ಪರಿವರ್ತನೆಗೊಳಿಸದೆ ಮತ್ತು ಅಕ್ಕಪಕ್ಕದ ಜಮೀನುಗಳ ರೈತರ ಪೂರ್ವಾನುಮತಿ ಪಡೆಯದೆ ವಿದ್ಯುತ್ ಘಟಕ ಅಳವಡಿಕೆಗೆ ಮುಂದಾಗಿದೆ.

ವಿದ್ಯುತ್ ಘಟಕದ ವ್ಯಾಪ್ತಿ ಪಕ್ಕದ ರಿಸನಂ 22 ಮತ್ತು 23 ಜಮೀನಿನವರೆಗೆ ವ್ಯಾಪಿಸುತ್ತಿದ್ದು ಇದನ್ನು ಪ್ರಶ್ನಿಸಿದ ಜಮೀನಿನ ಮಾಲೀಕರಾದ ರಾಮಣ್ಣ ನವಲಗುಂದ, ಮಹದೇವಪ್ಪ ಗಾಜಿ ಎಂಬ ರೈತರಿಗೆ, ರೋಣ ಪೊಲೀಸ್ ಠಾಣೆಯ ಪೊಲೀಸ್ ಸಿಬ್ಬಂದಿ ತಕರಾರು ಮಾಡದಂತೆ ಮತ್ತು



ಉದಯವಾಹಿನಿ ಚಿತ್ರ

ಆ ಕಂಪನಿ ಖರೀದಿಸಿದ ಜಮೀನಿನಿಂದ ಹೊರ ಹೋಗುವಂತೆ ಗದರಿಸಿದ್ದು, ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಪವನ ವಿದ್ಯುತ್ ಘಟಕಗಳು ಅಷ್ಟೇ ಅಲ್ಲದೆ ಅವುಗಳ ನಿರ್ಮಾಣ ಕಾರ್ಯದಲ್ಲಿ ಬಳಕೆಯಾಗುವ ಕಾಂಕ್ರೀಟ್ ಮಿಕ್ಸರ್‌ಗೂ ರೈತರ ಜಮೀನು ಖರೀದಿ ಮಾಡಿದ್ದು ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗೆ ಪ್ರಮುಖವಾಗಿ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡದೇ ಬಳಕೆ ಮಾಡುತ್ತಿದ್ದಾರೆ. ಆದರೆ, ಸಂಬಂಧಿಸಿದ ಅಧಿಕಾರಿಗಳು ಮಾತ್ರ ಅದನ್ನು ತಡೆಯುವಲ್ಲಿ ವಿಫಲರಾಗಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಸಂದಾಯವಾಗಬೇಕಿದ್ದ ಆದಾಯಕ್ಕೂ ಅಧಿಕಾರಿಗಳೇ ಅಡ್ಡಗಾಲು ಹಾಕುತ್ತಿದ್ದಾರೆ' ಎಂದು ರೈತರು ದೂರಿದ್ದಾರೆ. ನಮ್ಮ ಪಕ್ಕದ ಜಮೀನಿನಲ್ಲಿ ಪವನ ವಿದ್ಯುತ್ ಯಂತ್ರ ಅಳವಡಿಸುತ್ತಿದ್ದು ಇದರಿಂದ ನಮ್ಮ ಜಮೀನಿಗೆ ತೊಂದರೆಯಾಗುತ್ತಿದೆ ಎಂದು ಪ್ರಶ್ನಿಸಲು ಹೋದ ನಮ್ಮ ತಾಯಿಗೆ ಕಂಪನಿಯವರು ನಿಂದಿಸಿ ಹೊರಹೋಗುವಂತೆ ಗದರಿಸಿದ್ದಾರೆ. ಜತೆಗೆ ಸ್ಥಳದಲ್ಲಿದ್ದ ಪೊಲೀಸರು ಸಹ ನಮ್ಮ ಸಹಾಯಕ್ಕೆ ಬರದೇ ಕಂಪನಿಯವರ ಪರ ಮಾತನಾಡಿದರು' ಎಂದು ಕೃಷ್ಣಾಪುರದ ಯುವ ರೈತ ಮಹದೇವಪ್ಪ ಗಾಜಿ ಆರೋಪ ಮಾಡಿದ್ದಾರೆ.

> ಪವನ ವಿದ್ಯುತ್ ಕಂಪನಿಯವರು ನಮಗೆ ಸರಿಯಾದ ಮಾಹಿತಿ ನೀಡದ ಕಾರಣ ಕೆಲಸ ಸ್ಥಗಿತಗೊಳಿಸುವಂತೆ ಮನವಿ ಮಾಡಿದಾಗ ಪೊಲೀಸರನ್ನು ಕರೆಸಿ ಕೆಲಸ ಸ್ಥಗಿತಗೊಳಿಸಿದರೆ ಆ ದಿನದ ಕಾರ್ಮಿಕರ ವೇತನ ಮತ್ತು ಕಂಪನಿಗಾಗುವ ಹಾನಿಯನ್ನು ನೀವೇ ಭರಿಸಬೇಕು ಎಂದು ಗದರಿದ್ದಾರೆ
> -ರಾಮಣ್ಣ, ರೈತ ನವಲಗುಂದ

# 13.6 ಕೆಜಿ ಅಕ್ರಮ ಗಾಂಜಾ ವಶ

• ಉದಯವಾಹಿನಿ, ಚಳ್ಳಕೆರೆ



ಉದಯವಾಹಿನಿ ಚಿತ್ರ

ಚಳ್ಳಕೆರೆ ನಗರದ ನಿವಾಸಿ ಮೆಹಬೂಬ್ ಸುಬಾನ್ ಬಿನ್ ಅಯಾತ್ ಸಾಬ್ ಇವರ ವಾಸದ ಮನೆಯ ಮಲಗುವ ಕೋಣೆಯಲ್ಲಿ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ಮತ್ತು ನ್ಯೂಸ್ ಪೇಪರ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿ ಇಟ್ಟ ಒಟ್ಟು 13.670 ಕೆ.ಜಿ. ಒಣ ಗಾಂಜಾವನ್ನು ಅಬಕಾರಿ ಪೊಲೀಸರು ವಶಪಡಿಕೊಂಡಿದ್ದಾರೆ. ಖಚಿತ ವರ್ತಮಾನದ ಮೇರೆಗೆ ಬುಧವಾರ ಬೆಳಗಿನ ಜಾವ 05:30 ಸುಮಾರಿನಲ್ಲಿ, ಅಬಕಾರಿ ಉಪ ಆಯುಕ್ತ ಡಾ.ಬಿ.ಮಾದೇಶ ಅವರ ನಿರ್ದೇಶನದಂತೆ, ಜಿಲ್ಲಾ ವಿಚಕ್ಷಣಾ ದಳ ಅಬಕಾರಿ ನಿರೀಕ್ಷಕಿ ವನಿತಾ.ಎ, ಅಬಕಾರಿ ಪೊಲೀಸರಾದ ರಮೇಶ್ ನಾಯ್ .ಕೆ , ಬಸವರಾಜ.ಜೆ, ವಾಹನ ಚಾಲಕ ನಾಗರಾಜ ತೋಳಮಟ್ಟಿ ಅವರ ತಂಡ ದಾಳಿ ನಡೆಸಿ ಅಂದಾಜು ರೂ.6 ಲಕ್ಷ ಮೌಲ್ಯದ ಅಕ್ರಮ ಗಾಂಜಾ ಜಪ್ತು ಮಾಡಿದೆ. ಎನ್.ಡಿ.ಪಿ.ಎಸ್. ಕಾಯ್ದೆ 1985 ರನ್ವಯ 20(ಬಿ) (ಬಿ) 25 ರ ಉಲ್ಲಂಘನೆ ಮತ್ತು ಕಲಂ 8(ಸಿ) ರಿತ್ಯಾ ಪ್ರಕರಣ ದಾಖಲಿಸಲಾಗಿದ್ದು, ಎ1 ಆರೋಪಿಯಾದ ಮೆಹಬೂಬ್ ಸುಬಾನ್ ಬಿನ್ ಅಯಾತ್ ಸಾಬ್ ಮತ್ತು ಎ2 ಆರೋಪಿಯಾದ ಮನೆಯ ಮಾಲೀಕನನ್ನು ಪತ್ತೆ ಹಚ್ಚಿ ಬಂಧಿಸುವ ಕಾರ್ಯದಲ್ಲಿ ಅಬಕಾರಿ ಪೊಲೀಸರು ತೊಡಗಿದ್ದಾರೆ.

# ಬಾಲಕಿಗೆ ಲೈಂಗಿಕ ಕಿರುಕುಳ: ವನಶ್ರೀ ಶಿಕ್ಷಣ ಸಂಸ್ಥೆಯ ಮುಖ್ಯಸ್ಥನ ವಿರುದ್ಧ ಪ್ರಕರಣ

• ಉದಯವಾಹಿನಿ, ಸಾಗರ

ದಲಿತ ಸಮುದಾಯಕ್ಕೆ ಸೇರಿದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇರೆಗೆ ಇಲ್ಲಿನ ವರದಹಳ್ಳಿ ರಸ್ತೆಯ ವನಶ್ರೀ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಎಚ್.ಪಿ.ಮಂಜಪ್ಪ ವಿರುದ್ಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಬುಧವಾರ ಪ್ರಕರಣ ದಾಖಲಾಗಿದೆ. ವನಶ್ರೀ ವಸತಿ ಶಿಕ್ಷಣ ಸಂಸ್ಥೆಯಲ್ಲಿ ಓದುತ್ತಿರುವ ಬಾಲಕಿ ಮೇಲೆ ಶಾಲೆಯಲ್ಲಿ ಯಾರೂ ಇಲ್ಲದ ಸಮಯ ನೋಡಿಕೊಂಡು ಮಂಜಪ್ಪ ಅವರು ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಆರೋಪಿ ಮಂಜಪ್ಪ ತಲೆಮರೆಸಿಕೊಂಡಿದ್ದು ಪೋಕ್ಸೊ ಹಾಗೂ ಪರಿಶಿಷ್ಟ ಜಾತಿ, ಪಂಗಡದ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

# ರೌಡಿಶೀಟರ್ ಪ್ರಕರಣ: ಅತಿಥಿ ಶಿಕ್ಷಕರಿಗೆ ನಡತೆ ಪ್ರಮಾಣಪತ್ರ

• ಉದಯವಾಹಿನಿ, ಶಹಾಪುರ

ತಾಲ್ಲೂಕಿನ ರಸ್ತಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರೌಡಿಶೀಟರ್ ಭಾಗಪ್ಪ ರಸ್ತಾಪುರ ಎಂಬ ಅತಿಥಿ ಶಿಕ್ಷಕನ ಪ್ರಕರಣದಿಂದ ಎಚ್ಚೆತ್ತ ಶಿಕ್ಷಣ ಇಲಾಖೆ ಅಧಿಕಾರಿಗಳು ಸದ್ಯ ಸೇವೆ ಸಲ್ಲಿಸುತ್ತಿರುವ ಅತಿಥಿ ಶಿಕ್ಷಕರ ನಡತೆ ಪ್ರಮಾಣ ಪತ್ರವನ್ನು ಪಡೆಯಲು ಮುಂದಡಿ ಇಟ್ಟಿದ್ದಾರೆ.

'ಸದ್ಯ ಸೇವೆ ಸಲ್ಲಿಸುತ್ತಿರುವ ಅತಿಥಿ ಶಿಕ್ಷಕರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಹಾಗೂ ಯಾವುದಾದರು ಕ್ರಿಮಿನಲ್ ಪ್ರಕರಣದಲ್ಲಿ ಭಾಗಯಾಗಿದ್ದರೆ ಅದರ ಬಗ್ಗೆ ನಮೂದಿಸುವುದು. ಕ್ರಿಮಿನಲ್ ಹಿನ್ನೆಲೆ ಹೊಂದಿದ್ದರೆ ಸಂಪೂರ್ಣವಾದ ಮಾಹಿತಿಯನ್ನು ಆಯಾ ಪೊಲೀಸ್ ಠಾಣೆಯ ವ್ಯಾಪ್ತಿಯ ಅಧಿಕಾರಿಯಿಂದ ಪಡೆದುಕೊಂಡು ಸೇವೆ ಸಲ್ಲಿಸುತ್ತಿರುವ ಶಾಲಾ ಮುಖ್ಯಶಿಕ್ಷಕಗೆ ಪ್ರಮಾಣಪತ್ರ ನೀಡಬೇಕು ಎಂಬ ಷರತ್ತು ಹಾಕಲಾಗುತ್ತಿದೆ' ಎಂದು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. ತಾಲ್ಲೂಕಿನಲ್ಲಿ ಶಿಕ್ಷಕರ ಕೊರತೆ ಉಂಟಾಗಿದ್ದರಿಂದ ಶಿಕ್ಷಕರ ವೃತ್ತಿ ತರಬೇತಿ ಪಡೆದ ಯುವಕರನ್ನು ಮೆರಿಟ್ ಆಧಾರದ ಮೇಲೆ ತೆಗೆದುಕೊಳ್ಳಲು ಶಿಕ್ಷಣ ಇಲಾಖೆ ಸೂಚನೆ ನೀಡಿದ್ದರಿಂದ ತಾಲ್ಲೂಕಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 444 ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡಿದೆ.

ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳುವಾಗ ಪೂರ್ವಾನ್ವಯ ಷರತ್ತುಗಳನ್ನು ವಿಧಿಸದೆ ನೇಮಕಾತಿ ಮಾಡಿಕೊಳ್ಳಲಾಗಿತ್ತು. ಆದರೆ ರೌಡಿಶೀಟರ್ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿರುವುದು ಬೆಳಕಿಗೆ ಬಂದ ತಕ್ಷಣ ಶಿಕ್ಷಣ ಇಲಾಖೆ ಮುಜುಗರಕ್ಕೆ ಒಳಪಟ್ಟಿದೆ. 'ಮಕ್ಕಳ ಸಂರಕ್ಷಣೆಯ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣ ಇಲಾಖೆಯು ಪಾಲಕರ ಆತಂಕವನ್ನು ಹೋಗಲಾಡಿಸಬೇಕು' ಎಂದು ಬಿಜೆಪಿಯ ಹಿರಿಯ ಮುಖಂಡ ಯಲ್ಲಯ್ಯ ನಾಯಕ ವನದುರ್ಗ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಮನವಿ ಮಾಡಿದ್ದಾರೆ.

> ರೌಡಿಶೀಟರ್ ಸ್ಥಳೀಯ ಪತ್ರಿಕೆಯಲ್ಲಿ ವರದಿಗಾರನಾಗಿ ಸೇವೆ ಸಲ್ಲಿಸುತ್ತಿರುವುದು ಪೊಲೀಸ್ ಇಲಾಖೆ ಗಮನಕ್ಕೆ ಬಂದ ತಕ್ಷಣ ತಾಲ್ಲೂಕಿನ ಪತ್ರಕರ್ತರ ಕ್ರಿಮಿನಲ್ ಹಿನ್ನೆಲೆ ಬಗ್ಗೆ ಮಾಹಿತಿ ಕಲೆ ಹಾಕುವ ಕೆಲಸ ಶುರುವಾಗಿದೆ. ಅಲ್ಲದೆ ನಕಲಿ ಪತ್ರಕರ್ತರ ಹಾವಳಿಯೂ ಹೆಚ್ಚಾದ ಬಗ್ಗೆ ವಿವಿಧ ಇಲಾಖೆಯಿಂದ ದೂರು ಕೇಳಿ ಬರುತ್ತಲಿವೆ. ಸಾರ್ವಜನಿಕ ಕೆಲಸಗಳಿಗೆ ಅಡ್ಡಿ ಪಡಿಸಿದ ಬಗ್ಗೆ ನೊಂದವರು ದೂರು ಸಲ್ಲಿಸಿದರೆ ಅಗತ್ಯ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು
> -ಎಂ.ಪಾಟೀಲ, ಪಿ.ಎಸ್‌ಐ, ಶಹಾಪುರ ಠಾಣೆ

# ದ್ವಿಚಕ್ರ ವಾಹನ ಸವಾರನ ಬಂಧನ

• ಉದಯವಾಹಿನಿ, ಧಾರವಾಡ

ನಗರದ ಆರ್.ಎನ್.ಶೆಟ್ಟಿ ಜಿಲ್ಲಾ ಕ್ರೀಡಾಂಗಣ ಸಮೀಪ ಬುಧವಾರ ರಾತ್ರಿ, ದ್ವಿಚಕ್ರ ವಾಹನ ಸವಾರ ಮತ್ತು ಕಾರಿನಲ್ಲಿದ್ದವರ ನಡುವೆ ವಾಗ್ವಾದ ನಡೆದು ಸವಾರ ಪಿಸ್ತೂಲಿನಿಂದ ಗುಂಡು ಹಾರಿಸಿದ್ದು ಕಾರಿನ ಗಾಜಿಗೆ ಹಾನಿಯಾಗಿದೆ. ರಾತ್ರಿ 12.30ರ ಹೊತ್ತಿನಲ್ಲಿ ಘಟನೆ ನಡೆದಿದೆ. ದ್ವಿಚಕ್ರ ವಾಹನ ಸವಾರ ಅಭಿಷೇಕ್ ಬಡ್ಡಿಮನೆ (31) ಅವರನ್ನು ಬಂಧಿಸಲಾಗಿದೆ. ಪ್ರಜ್ವಲ್, ದಿನೇಶ್ ಮತ್ತು ಗಣೇಶ್ ಅವರನ್ನು ವಶಕ್ಕೆ ಪಡೆಯಲಾಗಿದೆ. ಉಪನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪೊಲೀಸ್ ಆಯುಕ್ತ ಎನ್.ಶಶಿಕುಮಾರ್ ಸುದ್ದಿಗಾರರೊಂದಿಗೆ ಮಾತನಾಡಿ, 'ಘಟನೆ ಸಂಬಂಧಿಸಿದಂತೆ ಎರಡು ದೂರುಗಳು ದಾಖಲಾಗಿವೆ. 'ದ್ವಿಚಕ್ರವಾಹನದಲ್ಲಿ ತಾನು ಸಾಗುವಾಗ ಕಾರು ಗುದ್ದಿಸಿ, ಪಿಸ್ತೂಲು ಕಸಿದುಕೊಳ್ಳಲು ಯತ್ನಿಸಿ, ಕಾರಿನಲ್ಲಿ ಹೊತ್ತೊಯ್ಯಲು ಮತ್ತು ಕೊಲೆ ಮಾಡಲು ಯತ್ನಿಸಿದ್ಧಾರೆ' ಎಂದು ಅಭಿಷೇಕ್ ದೂರು ನೀಡಿದ್ದಾರೆ. 'ಅಭಿಷೇಕ್ ಅವರು ದ್ವಿಚಕ್ರ ವಾಹನವನ್ನು ಅಡ್ಡಾದಿಡ್ಡಿಯಾಗಿ ವೇಗವಾಗಿ ಚಲಾಯಿಸಿ ನಮ್ಮ ಕಾರಿಗೆ ಗುದ್ದಿಸಿದ್ದಾರೆ. ಕಾರಿನಿಂದ ನಾವು ಇಳಿಯುವಷ್ಟರಲ್ಲಿ ಪಿಸ್ತೂಲಿನಿಂದ ಗುಂಡು ಹಾರಿಸಿದ್ಧಾರೆ' ಎಂದು ಪ್ರಜ್ವಲ್ ದೂರು ನೀಡಿದ್ಧಾರೆ' ಎಂದು ತಿಳಿಸಿದರು.

# ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ

• ಉದಯವಾಹಿನಿ, ಶಿವಮೊಗ್ಗ

ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ - 2025 ಕ್ಕೆ ಸಂಬಂಧಿಸಿದಂತೆ 113 ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಅಧಿಕಾರಿಗಳು ದಿ: 09-11-2024, 10-11-2024, 23-11-2024 ಮತ್ತು 24-11-24 ರಂದು ತಮ್ಮ ಮತಗಟ್ಟೆಗಲಲ್ಲಿ ಹಾಜರಿದ್ದು ಕಾರ್ಯ ನಿರ್ವಹಿಸಲಿದ್ದಾರೆ. ಮತದಾರರು ತಮ್ಮ ವ್ಯಾಪ್ತಿಯ ಮತಗಟ್ಟೆಯ ಮತದಾರರ ಪಟ್ಟಿ ಪರಿಶೀಲಿಸಿಕೊಂಡು ತಮ್ಮ ಹೆಸರು ಹಾಗೂ ತಮ್ಮ ಕುಟುಂಬದ ಇತರೆ ಸದಸ್ಯರ ಹೆಸರು ಮತದಾರರ ಪಟ್ಟಿಯಲ್ಲಿರುವ ಬಗ್ಗೆ ಪರಿಶೀಲಿಸಿಕೊಳ್ಳಬಹುದಾಗಿದೆ. 17 ವರ್ಷ ತುಂಬಿದ ಅಥವಾ 18 ವರ್ಷ ಪೂರೈಸಿದ ಯುವ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಲು, ಮತದಾರರ ಗುರುತಿನ ಚೀಟಿಗಳಲ್ಲಿ ಮುದ್ರಣ ದೋಷ ಉಂಟಾಗಿದ್ದರೆ ತಿದ್ದುಪಡಿ ಮಾಡಲು, ಒಂದು ಮತದಾನ ಕೇಂದ್ರದಿಂದ ಮತ್ತೊಂದು ಮತದಾನ ಕೇಂದ್ರಕ್ಕೆ ವಿಳಾಸ ಬದಲಾಯಿಸಿಕೊಂಡಿದ್ದಲ್ಲಿ ವರ್ಗಾವಣೆ ಮಾಡಲು ಹಾಗೂ ಮತದಾರರು ಮೃತಪಟ್ಟಿದ್ದಲ್ಲಿ ಮತದಾರರ ಪಟ್ಟಿಯಿಂದ ತೆಗೆದುಹಾಕಲು ಅವಕಾಶವಿದೆ. ಮತದಾರರು ತಮ್ಮ ಮೊಬೈಲ್ ನ ವೋಟರ್ ಹೆಲ್ಪ್ಲೈನ್ ಆಯಪ್ ನಲ್ಲಿ ನಮೂನೆ-6 ರಲ್ಲಿ ಸೇರ್ಪಡೆಗೆ, ನಮೂನೆ-7 ರಲ್ಲಿ ತೆಗೆದುಹಾಕಲು ಹಾಗೂ ನಮೂನೆ-8 ರಲ್ಲಿ ತಿದ್ದುಪಡಿಗಾಗಿ, ವರ್ಗಾವಣೆಗಾಗಿ ಅವಕಾಶವಿದೆ. ಮತದಾರರು ಈ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು 113 ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿ ಹಾಗೂ ಮಹಾನಗರಪಾಲಿಕೆ ಆಯುಕ್ತರು ಕೋರಿದ್ದಾರೆ.

# ಹತ್ಯೆಗೊಳಗಾದ ಕುಟುಂಬಕ್ಕೆ ಸಾಂತ್ವನ ಹೇಳದ ಅಧಿಕಾರಿಗಳ ವಿರುದ್ಧ ಆಕ್ರೋಶ

## • ವಿವಾಹಿತ ಮಹಿಳೆ ಮೇಲೆ ಅತ್ಯಾಚಾರ ಹತ್ಯೆ, ಆರೋಪಿಗಳಿಗೆ ಗಲ್ಲು ಶಿಕ್ಷೆ ವಿಧಿಸುವಂತೆ ಹೋರಾಟ

• ಉದಯವಾಹಿನಿ, ಮುದ್ದೇಬಿಹಾಳ

ಮುದ್ದೇಬಿಹಾಳ ತಾಲ್ಲೂಕಿನ ಮುದ್ನಾಳ ತಾಂಡಾದ ವಿವಾಹಿತ ಮಹಿಳೆ ಶೋಭಾ ಲಮಾಣಿ ಮೇಲೆ ನ. 2 ರಂದು ಸಾಮೂಹಿಕವಾಗಿ ಅತ್ಯಚಾರಮಾಡಿ ಮಹಿಳೆಯನ್ನು ಅಮಾನುಷವಾಗಿ ಹತ್ಯೆಗೈದರು ಇಲ್ಲಿಯವರೆಗೆ ಮೃತ ಮಹಿಳೆಯ ಕುಟುಂಬಕ್ಕೆ ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕಾ ಮತ್ತು ಜಿಲ್ಲಾ ಅಧಿಕಾರಿಗಳು, ತಾಲ್ಲೂಕ ಆಡಳಿತ ಅಧಿಕಾರಿಗಳು ಇಲ್ಲಿಯವರೆಗೆ ಭೇಟಿ ನೀಡಿಲ್ಲ ಮತ್ತು ಸ್ಥಳೀಯ ಶಾಸಕರು ಸಹ ಆ ಕುಟುಂಬಕ್ಕೆ ಭೇಟಿ ನೀಡಿ ಸಾಂತ್ವನ ಹೇಳದೆ ಇರುವುದು ವಿಷಾದನೀಯ ಸಂಗತಿ ಇದನ್ನು ನಾವು ಉಗ್ರವಾಗಿ ಖಂಡಿಸುತ್ತೇವೆ ಎಂದು ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಹರೀಶ ನಾಟಿಕಾರ, ಬಂಜಾರ ಸಮಾಜದ ಮುಖಂಡರಾದ ಬಿ .ಬಿ ಲಮಾಣಿ, ರಾಜು ಜಾಧವ, ರವಿ ನಾಯಕ ಹೇಳಿದರು.

ಗುರುವಾರ ಆಲ್ ಇಂಡಿಯಾ ಬಂಜಾರ ಸೇವಾ ಸಂಘ ಮುದ್ದೇಬಿಹಾಳ ಹಾಗೂ ವಿವಿಧ ದಲಿತಪರ ಸಂಘಟನೆಗಳಿಂದ ಬಂಜಾರ ಸಮಾಜದ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ ಹತ್ಯೆಯನ್ನು ಮಾಡಿದ ಆರೋಪಗಳಿಗೆ ಗಲ್ಲು ಶಿಕ್ಷೆ ವಿಧಿಸಬೇಕಕೆಲು ಆಗ್ರಹಿಸಿ ನಡೆದ ಬೃಹತ್ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದರು.



ಉದಯವಾಹಿನಿ ಚಿತ್ರ

> ದಲಿತ ಮಹಿಳೆಯ ಮೇಲೆ ಅತ್ಯಾಚಾರ ಹತ್ಯೆ ನಡೆದರೆ ಕಾನೂನಿನ ಪ್ರಕಾರ ಆ ಕುಟುಂಬಕ್ಕೆ ತುರ್ತು ಪರಿಹಾರವಾಗಿ 5 ಲಕ್ಷ ರೂ ನಂತರ 20 ಲಕ್ಷ ರೂ ಪರಿಹಾರ ಮತ್ತು ಆರೋಪಗಳಿಗೆ ಶಿಕ್ಷೆಯಾದರೆ 50 ಲಕ್ಷ ರೂ ನೀಡಬೇಕೆಂದು ಕಾನೂನು ಇದೆ ಇಲ್ಲಿ ದಲಿತ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ ಹತ್ಯಗೈದರು ಆ ಕುಟುಂಬಕ್ಕೆ ಸ್ಥಳೀಯ ಶಾಸಕರು, ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕ,ಮತ್ತು ಜಿಲ್ಲೆಯ ಅಧಿಕಾರಿಗಳು ಭೇಟಿ ಸಾಂತ್ವನ ಹೇಳದೆ ಇರುವುದು ಖಂಡನೆ ವಿಪರ್ಯಾಸ -ಹರೀಶ್ ನಾಟಿಕಾರ, ದಲಿತ ಮುಖಂಡ

ಈ ಪ್ರಕರಣವನ್ನು ಸಿಓಡಿಗೆ ಒಪ್ಪಿಸಬೇಕು ದಲಿತ ಮಹಿಳೆಯ ಮೇಲೆ ಅತ್ಯಾಚಾರ ಹತ್ಯೆ ನಡೆದರೆ ಕಾನೂನಿನ ಪ್ರಕಾರ ನೀಡಬೇಕಾದ ಪರಿಹಾರವನ್ನು ನೀಡಬೇಕು ತಪ್ಪಿತಸ್ಥ ಆರೋಪಿಗಳಿಗೆ ಗಲ್ಲು ಶಿಕ್ಷೆ ನೀಡಬೇಕೆಂದು ಒತ್ತಾಯಿಸಿದರು. ಸಿ .ಜಿ ವಿಜಯಕರ, ಎಸ್ ಪಿ ಸೇವಾಲಾಲ ಮಾತನಾಡಿ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಮಾನವ ಸಮಾಜ ತಲೆಗ್ಗಿಸುವಂತಹ ಅಮಾನವೀಯ ಘಟನೆ ನಡೆದಿರಲಿಲ್ಲ ಮುದ್ನಾಳ ತಾಂಡಾದ ಮಹಿಳೆಯನ್ನು ನಿರ್ಜನ ಪ್ರದೇಶದಲ್ಲಿ ಸಾಮೂಹಿಕ ಅತ್ಯಾಚಾರ ಮಾಡಿ ಹತ್ಯೆಗೈದ ಆರೋಪಗಳಿಗೆ ಗಲ್ಲು ಶಿಕ್ಷೆ ವಿಧಿಸಬೇಕು ಆರೋಪಿಗಳ ಆಸ್ತಿಮುಟ್ಟುಗೂಲು ಹಾಕಿಕೊಳ್ಳಬೇಕೆಂದು ಆಗ್ರಹಿಸಿದರು.

**ಆರೋಪಿಗಳಿಗೆ ಗಲ್ಲು ಶಿಕ್ಷೆ ವಿಧಿಸಬೇಕು**

ಪಟ್ಟಣದ ಸೇವಾಲಾಲ ವೃತ್ತದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಅಂಬೇಡ್ಕರ್ ವೃತ್ತ ಹಾಗೂ ಬಸವೇಶ್ವರ ವೃತ್ತದಲ್ಲಿ ಮಾನವ ಸರಪಳಿ ಮಾಡಿ ಕೆಲ ಹೊತ್ತು ರಸ್ತೆ ತಡೆಮಾಡಿ ಟೈಯರ್‌ಗೆ ಬೆಂಕಿ ಹಚ್ಚಿ ಪ್ರತಿಭಟಿಸಿ ಅಲ್ಲಿಂದ ತಹಶಿಲ್ದಾರ ಕಚೇರಿಗೆ ಆಗಮಿಸಿ ಗ್ರೇಡ್ 2 ತಹಶಿಲ್ದಾರ ಸಂಗಮೇಶ ಮಳ್ಳಿಕೇರಿ ಅವರಿಗೆ ಮನವಿಯನ್ನು ಸಲ್ಲಿಸಿದರು.

ಈ ವೇಳೆ ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ತಾಲ್ಲೂಕ ಅಧ್ಯಕ್ಷ ಬಹದ್ದೂರ್ ರಾಠೋಡ, ಬಿ ಎಸ್ ಲಮಾಣಿ, ಲಕ್ಷ್ಮಣ ಲಮಾಣಿ, ವಾಲಪ್ಪ ಲಮಾಣಿ, ಸಂತೋಷ ಚವ್ಹಾಣ, ಬಸವರಾಜ ಚಿಂತಾಮಣಿ, ಪರಶುರಾಮ ಮುರಾಳ, ಥಾವರಪ್ಪ ಜಾಧವ, ಅಶೋಕ ರಾಠೋಡ, ಲಕ್ಷ್ಮೀಬಾಯಿ ಲಮಾಣಿ,ಜ್ಯೋತಿ ಲಮಾಣಿ ದೇವಕಿ ನಾಯಕ ,ಕಮಲಾಬಾಯಿ ಚವ್ಹಾಣ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಬಂಜಾರ ಸಮಾಜದ ಮಹಿಳೆಯರು ಯುವಕರು ಮುಖಂಡರು ಭಾಗವಹಿಸಿದ್ದರು.

ಉದಯ ವಾಹಿನಿ
ದೇಶ/ವಿದೇಶ
ಶುಕ್ರವಾರ 08 ನವೆಂಬರ್ 2024 | 07

# ಮಕ್ಕಳಿಗೆ ಸ್ವಯಂಚಾಲಿತ ಪೌರತ್ವ ಲಭಿಸುವ ಅವಕಾಶ ರದ್ದುಗೊಳಿಸುವುದಾಗಿ ಘೋಷಣೆ

## 'ಹುಟ್ಟಿನಿಂದ ಪೌರತ್ವ' ರದ್ದು: ಡೊನಾಲ್ಡ್ ಟ್ರಂಪ್ ನೀತಿಯಿಂದ ಗ್ರೀನ್ ಕಾರ್ಡ್ ಆಕಾಂಕ್ಷಿ ಭಾರತೀಯರಿಗೆ ಸಂಕಷ್ಟ

**ವಾಷಿಂಗ್ಟನ್:** ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಎರಡನೇ ಅವಧಿಗೆ ಗದ್ದುಗೆ ಏರಲು ಸಿದ್ಧರಾಗಿದ್ದಾರೆ. ಟ್ರಂಪ್ ಅವರ ಗೆಲುವು ಭಾರತೀಯರಿಗೆ ಎಷ್ಟು ಪ್ರಯೋಜನಕಾರಿ ಅಥವಾ ಅಪಾಯಕಾರಿ ಎನ್ನುವ ಕುರಿತು ಚರ್ಚೆಗಳು ನಡೆಯುತ್ತಿವೆ. ಟ್ರಂಪ್ ಅವರು ಭಾರತ ತಮ್ಮ ಸ್ನೇಹಿತ ಎನ್ನುತ್ತಿದ್ದರೂ, ಅವರು ಭಾರತದ ಮೇಲೆ ಅನೇಕ ಬಾರಿ ನೇರಾನೇರ ವಾಗ್ದಾಳಿ ನಡೆಸಿದ್ದನ್ನು ಮರೆಯುವಂತಿಲ್ಲ. ಹಾಗೆಯೇ ಅವರ ವಲಸೆ, ಸುಂಕ ಮತ್ತು ವಿದೇಶಾಂಗ ನೀತಿಗಳು ಭಾರತಕ್ಕೆ ಇಕ್ಕಟ್ಟು ಉಂಟುಮಾಡುವ ಸಾಧ್ಯತೆ ಇದೆ. ಇದರಲ್ಲಿ ಗ್ರೀನ್ ಕಾರ್ಡ್ ನಿರೀಕ್ಷಿಸುತ್ತಿರುವ ಭಾರತೀಯರ ಭವಿಷ್ಯವೂ ಸೇರಿದೆ.


ಮಕ್ಕಳಿಗೆ ಸ್ವಯಂಚಾಲಿತ ಪೌರತ್ವ ನೀಡುವ ನಿಯಮಕ್ಕೆ ಅಂತ್ಯ ಹಾಡುವುದು ಟ್ರಂಪ್ ಅವರ ಆದ್ಯತಾ ಪಟ್ಟಿಯಲ್ಲಿದೆ. ಟ್ರಂಪ್ ಅವರು ಅಧಿಕಾರಕ್ಕೆ ಏರಿದ ಮೊದಲ ದಿನವೇ ಈ ಕುರಿತಾದ ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕುವುದಾಗಿ ಪ್ರಚಾರದ ವೇಳೆ ಪ್ರಕಟಿಸಲಾಗಿತ್ತು.

ಟ್ರಂಪ್, ರಿಪಬ್ಲಿಕನ್ ಪಕ್ಷದ ಈ ಉದ್ದೇಶ ಲಕ್ಷಾಂತರ ಭಾರತೀಯರ ಮೇಲೆ ಪರಿಣಾಮ ಬೀರಲಿದೆ. ಸ್ವಯಂ ಚಾಲಿತ ಪೌರತ್ವ ರದ್ದತಿಯು ಅಕ್ರಮ ವಲಸಿಗರಿಗೆ ಜನಿಸುವ ಮಕ್ಕಳಿಗೆ ಮಾತ್ರವೇ ಅನ್ವಯವಾಗುವುದಿಲ್ಲ ಎನ್ನುವುದು ಗಮನಿಸಬೇಕಾದ ಸಂಗತಿ. ಟ್ರಂಪ್, ವಾನ್ಸ್ ಅವರ ಘೋಷಣೆ ಪ್ರಕಾರ, ತಮ್ಮ ಮಕ್ಕಳು ಸ್ವಯಂಚಾಲಿತವಾಗಿ ಅಮೆರಿಕನ್ ಪೌರತ್ವ ಪಡೆಯಬೇಕು ಎಂದಾದರೆ ಪೋಷಕರಲ್ಲಿ ಒಬ್ಬರಾದರೂ ಅಮೆರಿಕದ ನಾಗರಿಕನಾಗಿರಬೇಕು ಅಥವಾ ಕಾನೂನು ಬದ್ಧ ಕಾಯಂ ನಿವಾಸಿಯಾಗಿರಬೇಕು ಎಂದು ಕಾನೂನು ರೂಪಿಸುವಂತೆ ಫೆಡರಲ್ ಸಂಸ್ಥೆಗಳಿಗೆ ಸೂಚಿಸುತ್ತೇನೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದರು. ಕಾರ್ಯಕಾರಿ ಆದೇಶದ ಕರಡಿನಲ್ಲಿ ಅಮೆರಿಕ ಸಂವಿಧಾನದ 14ನೇ ತಿದ್ದುಪಡಿ ತರುವುದಾಗಿ ಹೇಳಲಾಗಿದೆ. ಆದರೆ, ಕಾರ್ಯಕಾರಿ ಆದೇಶವನ್ನು ಹೊರಡಿಸಿದ್ದಲ್ಲಿ, ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಅವಕಾಶವಿದೆ ಎಂದು ವಲಸಿಗರ ಪರ ವಕಾಲತ್ತು ವಹಿಸಿರುವವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಒಂದು ವೇಳೆ ಈ ಆದೇಶ ಜಾರಿಯಾದಲ್ಲಿ ಭಾರತೀಯ ಸಮುದಾಯಕ್ಕೆ ಭಾರಿ ಹಿನ್ನಡೆ ಉಂಟಾಗಲಿದೆ. ಅಮೆರಿಕದಲ್ಲಿ 4.8 ಮಿಲಿಯನ್ ಭಾರತೀಯರಿದ್ದಾರೆ. ಅವರಲ್ಲಿ ಶೇ 34ರಷ್ಟು, ಅಂದರೆ 16 ಲಕ್ಷದಷ್ಟು ಜನರು ಅಮೆರಿಕದಲ್ಲಿಯೇ ಜನಿಸಿದವರು ಎನ್ನುತ್ತದೆ ರಿಸರ್ಚ್ 2022ರಲ್ಲಿ ನಡೆಸಿದ ಅಮೆರಿಕ ಜನಗಣತಿಯ ವಿಶ್ಲೇಷಣೆ.

ಆದೇಶದ ಅನ್ವಯ, ಅಮೆರಿಕದ ಪ್ರಜೆಯಾಗಿರಲಿ ಅಥವಾ ಗ್ರೀನ್ ಕಾರ್ಡ್ ಬಳಕೆದಾರರೇ ಆಗಿರಲಿ, ಭಾರತೀಯ ದಂಪತಿಗೆ ಜನಿಸಿದ ಮಕ್ಕಳು ಸ್ವಯಂಚಾಲಿತ ಪೌರತ್ವಕ್ಕೆ ಅರ್ಹರಾಗುವುದಿಲ್ಲ. ಅಮೆರಿಕದಲ್ಲಿ ಎಚ್-1ಬಿ ವೀಸಾದಡಿ ಕೆಲಸ ಮಾಡುತ್ತಿರುವ ಸಾವಿರಾರು ಭಾರತೀಯರು, ದಶಕಗಳಿಂದಲೂ ಗ್ರೀನ್ ಕಾರ್ಡ್‌ಗೆ ಕಾದು ಕಾದು ಹೈರಾಣಾಗಿದ್ದಾರೆ. ಉದ್ಯೋಗಕ್ಕೆ ಸಂಬಂಧಿಸಿದ ಗ್ರೀನ್ ಕಾರ್ಡ್‌ನಲ್ಲಿ ವರ್ಷಕ್ಕೆ ಇರುವ ಮಿತಿ 1.40 ಲಕ್ಷ. ವಾರ್ಷಿಕ ಮಿತಿಯ ಜತೆಗೆ ಉದ್ಯೋಗ ಅಥವಾ ಕುಟುಂಬ ಆಧಾರಿತ ಗ್ರೀನ್ ಕಾರ್ಡ್‌ಗಳಲ್ಲಿ ಯಾವುದೇ ದೇಶಕ್ಕೆ ಒಟ್ಟಾರೆ ಗ್ರೀನ್ ಕಾರ್ಡ್‌ನ ಶೇ 7ಕ್ಕಿಂತ ಹೆಚ್ಚು ಪ್ರಾತಿನಿಧ್ಯ ದೊರಕುವುದಿಲ್ಲ. ಹೀಗಾಗಿ ಇದು ಉದ್ಯೋಗ ಆಧಾರಿತ ವರ್ಗದಲ್ಲಿ ಭಾರತೀಯರ ಮೇಲೆ ಪರಿಣಾಮ ಬೀರಲಿದೆ.

**10 ಲಕ್ಷ ದಾಟಿರುವ ಬ್ಯಾಕ್‌ಲಾಗ್:** ಭಾರತದಿಂದ ಬಂದವರಲ್ಲಿ ಇಬಿ– 2, ಇಬಿ– 3 (ಕೌಶಲ ವರ್ಗ) ಉದ್ಯೋಗ ಆಧಾರಿತ ಗ್ರೀನ್ ಕಾರ್ಡ್ ಬ್ಯಾಕ್‌ಲಾಗ್ ಮಾರ್ಚ್ 2023ರ ವೇಳೆಗೆ ಹತ್ತು ಲಕ್ಷ ದಾಟಿದೆ ಎನ್ನುವುದು ಕ್ಯಾಟೊ ಸಂಸ್ಥೆಯ ವಲಸೆ ಅಧ್ಯಯನ ವಿಭಾಗದ ನಿರ್ದೇಶಕ ಡೇವಿಡ್ ಜೆ ಬೀರ್ ನಡೆಸಿದ ಅಧ್ಯಯನ ಬಹಿರಂಗಪಡಿಸಿದೆ. ಸಾವು ಮತ್ತು ವಯಸ್ಸಿನಂತಹ ಅಂಶಗಳನ್ನು ಪರಿಗಣಿಸಿದ್ದಲ್ಲಿ ಗ್ರೀನ್ ಕಾರ್ಡ್‌ಗೆ ಕಾಯುವಿಕೆ 54 ವರ್ಷಗಳಾಗುತ್ತವೆ. ಇಲ್ಲದಿದ್ದರೆ 134 ವರ್ಷಗಳಷ್ಟು ಸಮಯ ಬೇಕು. ಈ ವರ್ಗದಲ್ಲಿ ಕಾಯುತ್ತಿರುವ 4.14 ಲಕ್ಷ ಭಾರತೀಯರು ಗ್ರೀನ್ ಕಾರ್ಡ್ ಸಿಗುವ ಮುನ್ನವೇ ಮರಣ ಅಪ್ಪುತ್ತಾರೆ. ಹಾಗೆಯೇ ಲಕ್ಷಕ್ಕೂ ಅಧಿಕ ಭಾರತೀಯ ಕುಟುಂಬಗಳ ಮಕ್ಕಳು 21 ವರ್ಷ ತಲುಪುತ್ತಾರೆ. ಇದರಿಂದಾಗಿ ಅವರ ಅವಲಂಬಿತ ವೀಸಾ ಕೂಡ ಮಾನ್ಯವಾಗುವುದಿಲ್ಲ. ಅತ್ತ ಗ್ರೀನ್ ಕಾರ್ಡ್ ಸರದಿಯಿಂದಲೂ ಅವರು ಸ್ಥಾನ ಕಳೆದುಕೊಳ್ಳುತ್ತಾರೆ. ಪ್ರಸ್ತುತ ಅಮೆರಿಕದಲ್ಲಿ ಜನಿಸದ ಅಂತಹ ಮಕ್ಕಳು, ಅವರ ಕುಟುಂಬಗಳು ಗ್ರೀನ್ ಕಾರ್ಡ್ ಬ್ಯಾಕ್‌ಲಾಗ್‌ನಲ್ಲಿ ಸಿಲುಕಿದ್ದು, ಅವರು 21 ವರ್ಷಕ್ಕೆ ಬಂದ ಬಳಿಕ ಸ್ವಯಂ ಗಡೀಪಾರಾಗಬೇಕು ಇಲ್ಲವೇ ಮತ್ತೊಂದು ವೀಸಾಕ್ಕೆ ಅರ್ಜಿ ಸಲ್ಲಿಸಬೇಕು.

ಅವರಿಗೆ ಅಂತಾರಾಷ್ಟ್ರೀಯ ವಿದ್ಯಾರ್ಥಿ ವೀಸಾ ಒಂದು ಆಯ್ಕೆಯಾಗಿದೆ.



**ಅಮೆರಿಕನ್ನರಲ್ಲಿ ತಳಮಳ**

ಡೊನಾಲ್ಡ್ ಟ್ರಂಪ್ ಮತ್ತೆ ಅಮೆರಿಕ ಅಧ್ಯಕ್ಷರಾಗಿ ಆಯ್ಕೆಯಾಗುವಲ್ಲಿ ಭಾರತೀಯ ಸಮುದಾಯ ಪ್ರಮುಖ ಪಾತ್ರ ವಹಿಸಿದ್ದರೂ, ಟ್ರಂಪ್ ಅವರ ನೀತಿ ಭಾರತೀಯ ಅಮೆರಿಕನ್ನರಲ್ಲಿ ತಳಮಳ ಮೂಡಿಸಿದೆ. ಟ್ರಂಪ್ ಘೋಷಣೆ ಮಾಡಿದಂತೆ ವಲಸೆ ನೀತಿ ಆದೇಶಕ್ಕೆ ಸಹಿ ಹಾಕಿದ್ದಲ್ಲಿ, ಹತ್ತಾರು ವರ್ಷಗಳಿಂದ ಗ್ರೀನ್ ಕಾರ್ಡ್‌ಗಾಗಿ ಕಾದು ನಿಂತಿರುವ ಭಾರತೀಯರ ಸ್ಥಿತಿ ಅತಂತ್ರವಾಗಲಿದೆ

- ಅಮೆರಿಕದಲ್ಲಿ ಗ್ರೀನ್ ಕಾರ್ಡ್‌ಗಾಗಿ ಕಾದಿರುವ ಭಾರತೀಯರ ಸಂಖ್ಯೆ ಸುಮಾರು 12 ಲಕ್ಷ
- ಅಮೆರಿಕದಲ್ಲಿ ಜನಿಸಿದ ಲಕ್ಷಾಂತರ ಮಕ್ಕಳು 21 ವರ್ಷ ದಾಟಿದ ಬಳಿಕ ಅತಂತ್ರರಾಗುವ ಭೀತಿ

# ಅಮೆರಿಕ ದಾಳಿ: ಮರಣದಂಡನೆ ಶಿಕ್ಷೆಯಿಂದ ಪಾರು

**ನ್ಯೂಯಾರ್ಕ್:** 2001ರ ಸೆ.11ರಂದು ಅಮೆರಿಕನ್ ವರ್ಲ್ಡ್ ಟ್ರೇಡ್ ಮೇಲಿನ ಭಯೋತ್ಪಾದಕ ದಾಳಿಯ ರೂವಾರಿ ಖಾಲಿದ್ ಶೇಖ್ ಮೊಹಮ್ಮದ್ ಮತ್ತು ಅವರ ಇಬ್ಬರು ಸಹಚರರ ಮನವಿ ಒಪ್ಪಂದಗಳನ್ನು ಮಿಲಿಟರಿ ನ್ಯಾಯಾಧೀಶರು ಒಪ್ಪಿಕೊಂಡಿದ್ದಾರೆ ಮತ್ತು ಅವರು ಮರಣದಂಡನೆಯಿಂದ ಪಾರಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ಒಪ್ಪಂದದ ವಿವರಗಳನ್ನು ಬಹಿರಂಗಪಡಿಸುವುದನ್ನು ತಡೆಯುವ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರ ಆದೇಶವನ್ನು ನ್ಯಾಯಾಧೀಶರು ರದ್ದುಗೊಳಿಸಿದ್ದಾರೆ ಎಂದು ಸರ್ಕಾರಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 9/11 ಭಯೋತ್ಪಾದಕ ದಾಳಿಯಲ್ಲಿ ಸುಮಾರು 3,000 ಜನರು ಮೃತಪಟ್ಟಿದ್ದಾರೆ. ಈ ಪ್ರಕರಣದಲ್ಲಿ ಸಂಚುಕೋರ ಖಾಲಿದ್ ಶೇಖ್ ಮೊಹಮ್ಮದ್, ಆತನ ಇಬ್ಬರು ಸಹಚರರಿಗೆ ಮರಣದಂಡನೆ ವಿಧಿಸಲಾಗಿದೆ. ದೀರ್ಘಾವಧಿಯ ಈ ಪ್ರಕರಣದಲ್ಲಿ, ಸರ್ಕಾರಿ ವಕೀಲರು ಅಪರಾಧಿಗಳ ಮನವಿಯನ್ನು ಪರಿಗಣಿಸಲು ಮತ್ತು ಮರಣದಂಡನೆಯಿಂದ ವಿನಾಯಿತಿ ನೀಡಲು ಸೇನಾ ವಕೀಲರೊಂದಿಗೆ ಮಾತುಕತೆ ನಡೆಸಿದ್ದಾರೆ. ಕ್ಯೂಬಾದ ಗ್ವಾಂಟನಾಮೊ ಕೊಲ್ಲಿಯಲ್ಲಿ ಉನ್ನತ ಮಿಲಿಟರಿ ಆಯೋಗವು ಇದನ್ನು ಅನುಮೋದಿಸಿದೆ. ಒಪ್ಪಂದ ಮತ್ತು ಶಿಕ್ಷೆಯ ಪರಿವರ್ತನೆಯ ಪ್ರಯತ್ನವು ಅಮೆರಿಕನ್ ಪ್ರಾಸಿಕ್ಯೂಷನ್ ಇತಿಹಾಸದಲ್ಲಿ ಅತ್ಯಂತ ಅವಮಾನಕರ ಕಾನೂನು ಹೋರಾಟಗಳಲ್ಲಿ ಒಂದನ್ನು ಸೃಷ್ಟಿಸಿತು. ಈ ಮನವಿಯಲ್ಲಿ, ಅಪರಾಧಿಗಳು ಸಿಐಎ ಕಸ್ಟಡಿಯಲ್ಲಿದ್ದಾಗ ತಾವು ಅನುಭವಿಸಿದ ಚಿತ್ರಹಿಂಸೆಯನ್ನು ವಿವರಿಸಿದ್ದಾರೆ. ಆದರೆ ಈ ಮೇಲ್ಮನವಿಯನ್ನು ನಿರ್ಧರಿಸಲು ಹಲವು ವರ್ಷಗಳೇ ಬೇಕಾಯಿತು. ಒಪ್ಪಂದವನ್ನು ಕಳೆದ ಬೇಸಿಗೆಯಲ್ಲಿ ಬಹಿರಂಗಪಡಿಸಲಾಗಿದೆ. ಅಮೆರಿಕದ ನೆಲದಲ್ಲಿ ಇದುವರೆಗೆ ನಡೆದಿರುವ ಅತ್ಯಂತ ಹೇಯ ಪ್ರಕರಣಗಳಲ್ಲಿ ಇದೂ ಒಂದಾಗಿದ್ದರೂ, ಅಪರಾಧಿಗಳಿಗೆ ಮರಣದಂಡನೆಯನ್ನು ತಗ್ಗಿಸುವ ಮಾತುಕತೆಯು ಮಹತ್ವದ ಹೆಜ್ಜೆಯಾಗಿದೆ. ಅದನ್ನು ನಿರ್ಧರಿಸಲು ರಕ್ಷಣಾ ಕಾರ್ಯದರ್ಶಿ ಕಚೇರಿಗೆ ಬಿಟ್ಟದ್ದು ಎಂದು ಆಸ್ಟಿನ್ ಆ ಸಮಯದಲ್ಲಿ ಹೇಳಿದ್ದಾರೆ. ಆದರೆ ನ್ಯಾಯಾಧೀಶರ ನಿರ್ಧಾರದ ಬಗ್ಗೆ ಪೆಂಟಗನ್ ಇನ್ನೂ ಪ್ರತಿಕ್ರಿಯಿಸಿಲ್ಲ ಎಂದು ಮಾಧ್ಯಮ ಕಾರ್ಯದರ್ಶಿ ಮೇಜರ್ ಜನರಲ್ ಪ್ಯಾಟ್ ರೈಡರ್ ಹೇಳಿದ್ದಾರೆ.



**ನ್ಯಾಯಾಲಯಗಳಿಗೆ ಅಧಿಕಾರವಿಲ್ಲ**

ನ್ಯಾಯಾಲಯಗಳಿಗೆ ಅಧಿಕಾರವಿಲ್ಲ ಗ್ವಾಂಟನಾಮೊ ನ್ಯಾಯಾಲಯವು ನೀಡಿದ 29-ಪುಟದ ಆದೇಶವು ರಕ್ಷಣಾ ಇಲಾಖೆಯ ಬ್ಲಾಗ್‌ನ ಪ್ರಕಾರ, ಮನವಿ ಒಪ್ಪಂದದ ಒಪ್ಪಂದಗಳನ್ನು ನಿರ್ಧರಿಸಲು ಮಿಲಿಟರಿ ನ್ಯಾಯಾಲಯಗಳಿಗೆ ಅಧಿಕಾರವಿಲ್ಲ ಎಂದು ಉಲ್ಲೇಖಿಸಲಾಗಿದೆ.

# ಹಿಂದೂಗಳ ಮೇಲೆ ಬಾಂಗ್ಲಾ ಸೇನೆಯಿಂದ ದಾಳಿ

**ಢಾಕಾ:** ಇಸ್ಕಾನ್ ವಿರುದ್ಧ ಮುಸ್ಲಿಂ ವ್ಯಾಪಾರಿ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿರುವುದನ್ನು ಖಂಡಿಸಿ ಹಿಂದೂಗಳು ಬಾಂಗ್ಲಾದೇಶದ ಬಂದರು ನಗರವಾದ ಚಿತ್ತಗಾಂಗ್‌ನಲ್ಲಿ ಪ್ರತಿಭಟನೆ ನಡೆಸಿದರು. ಈ ಕಾರಣಕ್ಕೆ ಬಾಂಗ್ಲಾ ಭದ್ರತಾ ಪಡೆಗಳು ಹಿಂದೂ ಸಮುದಾಯದ ಮೇಲೆ ಭಾರಿ ದಬ್ಬಾಳಿಕೆಯನ್ನು ನಡೆಸಿದೆ. ನ.5 ರಂದು ಹಜಾರಿ ಗಲಿ ಪ್ರದೇಶದಲ್ಲಿ ಈ ಘಟನೆಯು ಆರಂಭವಾಯಿತು. ಇಸ್ಲಾಮಿಕ್ ಗುಂಪಾದ ಜಮಾತ್-ಎ-ಇಸ್ಲಾಮಿ ಸದಸ್ಯ ಉಸ್ಮಾನ್ ಅಲಿ ಸಾಮಾಜಿಕ ಮಾಧ್ಯಮದಲ್ಲಿ ಹಿಂದೂ ಧರ್ಮ ಮತ್ತು ಇಂಟರ್ನ್ಯಾಷನಲ್ ಸೊಸೈಟಿ ಫಾರ್ ಕೃಷ್ಣ ಕಾನ್ಶಿಯಸ್ನೆಸ್ ವಿರುದ್ಧ ಅವಹೇಳನಕಾರಿ ಹೇಳಿಕೆಯ ಪೋಸ್ಟ್ ಹಾಕಿದ್ದ. ಇದನ್ನು ಖಂಡಿಸಿ ಹಿಂದೂ ನಿವಾಸಿಗಳು ಅಲಿ ಅಂಗಡಿಯ ಹೊರಗೆ ಜಮಾಯಿಸಿ ಪ್ರತಿಭಟಿಸಿದರು. ಇದು ಎರಡು ಸಮುದಾಯಗಳ ನಡುವೆ ಘರ್ಷಣೆಗೆ ಕಾರಣವಾಯಿತು. ಸುವ್ಯವಸ್ಥೆಯನ್ನು ಸರಿಪಡಿಸಲು ಬಾಂಗ್ಲಾದೇಶ ಸೇನೆ ಸೇರಿದಂತೆ ಭದ್ರತಾ ಪಡೆಗಳನ್ನು ನಿಯೋಜಿಸಿದಾಗ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಬಹಿಷ್ಕೃತ ಬಾಂಗ್ಲಾದೇಶಿ ಲೇಖಕಿ ತಸ್ಲೀಮಾ ನಸ್ರೀನ್ ಕೂಡ ಈ ವೀಡಿಯೊವನ್ನು ಹಂಚಿಕೊಂಡಿದ್ದಾರೆ.

ಭದ್ರತಾ ಸಿಬ್ಬಂದಿ ನಾಗರಿಕರೊಂದಿಗೆ ಘರ್ಷಣೆ, ಅವರನ್ನು ಬೆನ್ನಟ್ಟಿ ಸೇನಾ ಸಿಬ್ಬಂದಿ ಹಾಗೂ ಪೊಲೀಸರು ಲಾಠಿ ಪ್ರಹಾರ ಮಾಡುತ್ತಿರುವ ದೃಶ್ಯಾವಳಿಗಳು ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ. ಕೆಲವರು ಸಿಸಿಟಿವಿ ಕ್ಯಾಮೆರಾಗಳನ್ನು ಹಾಳುಗೆಡವಿದ್ದಾರೆ. ಚಿತ್ತಗಾಂಗ್ ಮೆಟ್ರೋಪಾಲಿಟನ್ ಪೊಲೀಸ್‌ನ ಹಿರಿಯ ಅಧಿಕಾರಿಯೊಬ್ಬರಿಗೆ, ಪ್ರತಿಭಟನಾಕಾರರು ಇಟ್ಟಿಗೆ ಮತ್ತು ಆಸಿಡ್ ಎಸೆದಿದ್ದಾರೆ. ಒಂಬತ್ತು ಅಧಿಕಾರಿಗಳು ಗಾಯಗೊಂಡಿದ್ದಾರೆ. ಮಂಗಳವಾರ ಅಧಿಕಾರಿಗಳು 582 ವ್ಯಕ್ತಿಗಳ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದಾರೆ. ಕೃತ್ಯವೆಸಗಿದ 49 ಜನರನ್ನು ಬಂಧಿಸಲಾಗಿದೆ ಎಂದು ಮೂಲಗಳು ವರದಿ ಮಾಡಿವೆ.

ಹಿಂದೂ ಪ್ರಾಬಲ್ಯದ ವ್ಯಾಪಾರ ಪ್ರದೇಶವಾದ ಹಜಾರಿ ಗಲಿಯು ಭಾರೀ ಕಣ್ಗಾವಲಿನಲ್ಲಿದೆ ಮತ್ತು ನಡೆಯುತ್ತಿರುವ ಕಾರ್ಯಾಚರಣೆಗಳಿಂದಾಗಿ ಅನೇಕ ನಿವಾಸಿಗಳು ಹೊರಹೋಗಲು ಸಾಧ್ಯವಾಗುತ್ತಿಲ್ಲ.

ಪೊಲೀಸರು ಆ ಪ್ರದೇಶದಲ್ಲಿ ಮನೆ-ಮನೆಗೆ ತೆರಳಿ ಶೋಧ ನಡೆಸುತ್ತಿರುವ ಬಗ್ಗೆಯೂ ವರದಿಯಾಗಿದೆ.

# ಕಾಲರ್ ಐಡಿ ಮಾಹಿತಿಯನ್ನು ನಂಬಬೇಡಿ

## ಸರ್ಕಾರಿ ಅಧಿಕಾರಿಗಳಿಗೆ ಸೈಬರ್ ಮಾರ್ಗಸೂಚಿ



**ನವದೆಹಲಿ:** ಫೋನ್ ಕರೆಯ ವೇಳೆ ಕಾಣಿಸಿಕೊಳ್ಳುವ ಮಾಹಿತಿಯನ್ನು ನಂಬದಂತೆ ಸರ್ಕಾರಿ ಅಧಿಕಾರಿಗಳಿಗೆ ರಾಷ್ಟ್ರೀಯ ಮಾಹಿತಿ ವಿಜ್ಞಾನ ಕೇಂದ್ರವು (ಎನ್‌ಐಸಿ) ಎಚ್ಚರಿಕೆ ನೀಡಿದೆ.

ಗೋಪ್ಯ, ವೈಯಕ್ತಿಕ ಮಾಹಿತಿಯನ್ನು ಕದಿಯುವ ಸಲುವಾಗಿ ಕೃತ್ರಿಮ ಧ್ವನಿ ಬಳಸಿ ಮೋಸ ಮಾಡುವ (ವಿಶಿಂಗ್) ಜಾಲ ಹೆಚ್ಚಾಗಿದ್ದರಿಂದ ಈ ಎಚ್ಚರಿಕೆ ನೀಡಿದೆ. ಸರ್ಕಾರದ ಹಿರಿಯ ಅಧಿಕಾರಿಗಳು, ಕಾನೂನು ಜಾರಿ ಸಂಸ್ಥೆಗಳು ಅಥವಾ ತಾಂತ್ರಿಕ ಬೆಂಬಲ ಸಿಬ್ಬಂದಿ ಎಂದು ಹೇಳಿಕೊಂಡು ಬಲೆಗೆ ಕೆಡವುವ ಸಾಧ್ಯತೆ ಇದೆ ಎಂದು ಎನ್‌ಐಸಿ ಹೇಳಿದೆ. ಅಲ್ಲದೇ ಇದು ಪ್ರಮುಖವಾದ ಅರಿಕೆ ಎಂದು ಅದು ತಿಳಿಸಿದೆ.

ಕಾಲರ್ ಐಡಿ ಮಾಹಿತಿಯನ್ನು ತಿದ್ದುಪಡಿ ಮಾಡಿ, ಸರ್ಕಾರಿ ಸಂಖ್ಯೆಯಿಂದ ಕರೆ ಬರುತ್ತಿದೆ ಎನ್ನುವ ರೀತಿ ಬಿಂಬಿಸುತ್ತಾರೆ ಎಂದು ಟಿಪ್ಪಣಿಯಲ್ಲಿ ಹೇಳಲಾಗಿದೆ. ಈ ಟಿಪ್ಪಣಿಯನ್ನು ಹಲವು ಸರ್ಕಾರಿ ಕಚೇರಿಗಳಿಗೆ, ಸಚಿವಾಲಯಗಳಿಗೆ ಕಳುಹಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ, ಸರ್ಕಾರಿ ಅಧಿಕಾರಿಗಳನ್ನು ಗುರಿಯಾಗಿಸಿಕೊಂಡು ಗೋಪ್ಯ ಮಾಹಿತಿಯನ್ನು ಕದಿಯಲು ಮತ್ತು ಸರ್ಕಾರದ ಅಧಿಕೃತ ಮಾಹಿತಿಗೆ ಕನ್ನ ಹಾಕುವ ದಾಳಿಯ ಪ್ರಮಾಣ ಹೆಚ್ಚಾಗಿದೆ ಎಂದು ಟಿಪ್ಪಣಿಯಲ್ಲಿ ಉಲ್ಲೇಖಿಸಲಾಗಿದೆ.

ವಿಶಿಂಗ್ ಅಥವಾ ವಾಯ್ಸ್-ಫಿಶಿಂಗ್ ಸಾಮಾಜಿಕ ಇಂಜಿನಿಯರಿಂಗ್ ದಾಳಿಯಾಗಿದ್ದು, ಇದರಲ್ಲಿ ಮೋಸಗಾರರು ಹಣಕಾಸಿನ ವಿವರದಂತಹ ಸೂಕ್ಷ್ಮ ಮಾಹಿತಿಯನ್ನು ಹಂಚಿಕೊಳ್ಳಲು ವ್ಯಕ್ತಿಗಳನ್ನು ಮನವೊಲಿಸುತ್ತಾರೆ. ಇದಕ್ಕಾಗಿ ದೂರವಾಣಿ ಕರೆಗಳು ಅಥವಾ ಧ್ವನಿ ಸಂದೇಶಗಳನ್ನು ಬಳಸುತ್ತಾರೆ. ತುರ್ತು ಸಂದೇಶ ಎಂದು ಹೇಳಿ ನಂಬಿಸುತ್ತಾರೆ. ನೀವು ಉತ್ತರಿಸದಿದ್ದರೆ, ಅದರಿಂದ ಗಂಭೀರ ಪರಿಣಾಮಗಳನ್ನು ಎದುರಿಸುತ್ತೀರಿ ಎಂದು ಭಯ ಬೀಳಿಸುತ್ತಾರೆ.

ಗೊಂದಲಕ್ಕೀಡು ಮಾಡಲು ಅಥವಾ ಭಯಪಡಿಸಲು ಸಂಕೀರ್ಣ ತಾಂತ್ರಿಕ ಭಾಷೆ ಬಳಸುತ್ತಾರೆ. ಈ ವೇಳೆ ಅವರ ವಂಚನೆಯ ಬಲೆಗೆ ಬೀಳುವ ಸಾಧ್ಯತೆ ಇರುತ್ತದೆ ಎಂದು ಟಿಪ್ಪಣಿಯಲ್ಲಿ ಹೇಳಲಾಗಿದೆ. ಕಾಲರ್ ಐಡಿ ಮಾಹಿತಿಯನ್ನು ಸುಲಭವಾಗಿ ತಿರುಚಬಹುದು ಎಂದು ಒತ್ತಿ ಹೇಳಲಾಗಿದ್ದು, ಸರ್ಕಾರಿ ಅಧಿಕಾರಿಗಳು ಇಂತಹ ತಂತ್ರಗಳ ವಿರುದ್ಧ ಎಚ್ಚರಿಕೆ ಯಿಂದ ಇರಬೇಕೆಂದು ಸಲಹೆ ನೀಡಿದೆ.

# ಇರುಮುಡಿಯಲ್ಲಿ ಕರ್ಪೂರ, ಅಗರಬತ್ತಿ ತರುವಂತಿಲ್ಲ


**ಶಬರಿಮಲೆ:** ತ್ಯಾಜ್ಯವಾಗಿ ಮಾರ್ಪಡುವ ವಸ್ತು ಗಳನ್ನು ಶಬರಿಮಲೆಗೆ ಭೇಟಿ ನೀಡುವ ಭಕ್ತರು ತಮ್ಮ ಇರುಮುಡಿಕಟ್ಟುವಿನಲ್ಲಿ ತರದಂತೆ ತಿರುವಾಂಕೂರು ದೇವಸ್ವಂ ಮಂಡಳಿ ವಿನಂತಿಸಿದೆ.ಇನ್ನು ಮುಂದೆ ಇರುಮುಡಿ ಕಟ್ಟುವಿನಲ್ಲಿ ಕರ್ಪೂರ, ಅಗರಬತ್ತಿ, ಪನ್ನೀರು ಇಡದಂತೆ ಸೂಚಿಸಲಾಗಿದೆ. ತಿರುವಾಂಕೂರು ದೇವಸ್ವಂ ಮಂಡಳಿಯ ದೇವಾಲಯಗಳಲ್ಲಿ ಕರ್ಪೂರ, ಅಗರಬತ್ತಿ, ಪನ್ನೀರು ಬಳಸದಂತೆ ಸುತ್ತೋಲೆ ಹೊರಡಿಸಲಾಗುವುದು ಎಂದು ದೇವಸ್ವಂ ಮಂಡಳಿ ಅಧ್ಯಕ್ಷ ಪಿ.ಎಸ್. ಪ್ರಶಾಂತ್, ಸದಸ್ಯ ಎ. ಅಜಿಕುಮಾರ್ ಹೇಳಿದ್ದಾರೆ. ಇದಲ್ಲದೆ, ಈ ಸಂಬಂಧ ಕೊಚ್ಚಿ, ಮಲಬಾರ್ ದೇ ವಸ್ವಂ ಮಂಡಳಿಗಳಿಗೂ ಪತ್ರವನ್ನು ನೀಡಲಾಗುವುದು.

ರಾಜ್ಯದ ಖಾಸಗಿ ದೇವ ಸ್ಥಾನಗಳ ಆಡಳಿತ ಮಂಡಳಿಗಳಿಗೆ, ಇತರೆ ರಾಜ್ಯಗಳ ಗುರುಸ್ವಾಮಿಗಳಿಗೂ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದ್ದಾರೆ.

ಕರ್ಪೂರ ಮತ್ತು ಅಗರಬತ್ತಿಗಳು ಪೂಜೆಯ ವಸ್ತುಗಳಾಗಿದ್ದರೂ, ಬೆಂಕಿಯ ಅಪಾಯದ ಕಾರಣ ಅವುಗಳನ್ನು ಸನ್ನಿಧಾನದಲ್ಲಿ ಬಳಸಲು ಅನುಮತಿಸಲಾಗುವುದಿಲ್ಲ. ಹೀಗಾಗಿ ಇರು ಮುಡಿಕಟ್ಟುಗಳಲ್ಲಿ ಭಕ್ತರು ತರುವ ಬಹುತೇಕ ವಸ್ತುಗಳನ್ನು ಎಸೆಯುವುದು ವಾಡಿಕೆ. ನಂತರ ದೇವಾಲಯದ ಮಂಡಳಿಯು ಅಂತಹ ತ್ಯಾಜ್ಯವನ್ನು ಪಂಡಿತವಲಂನಲ್ಲಿರುವ ದಹನಕಾರಕಕ್ಕೆ ತೆಗೆದು ಕೊಂಡು ಹೋಗಿ ಸುಡಬೇಕು. ಈ ಪರಿಸ್ಥಿತಿ ತಪ್ಪಿಸಲು ಹೊಸ ನಿಯಮ ರೂಪಿಸಲಾಗಿದೆ ಎಂದು ದೇವಸ್ವಂ ಮಂಡಳಿ ತಿಳಿಸಿದೆ. ಹಿಂದೆ ಭಕ್ತರು ಕಾಲ್ನಡಿಗೆಯಲ್ಲಿ ಬರುವಾಗ ಅಕ್ಕಿ, ತೆಂಗಿನಕಾಯಿಯನ್ನು ಬೆನ್ನ ಮೇಲೆ ಹೊತ್ತುಕೊಂಡು ಬರುತ್ತಿದ್ದರು. ಆದರೆ ಈಗ ಎಲ್ಲೆಂದರಲ್ಲಿ ಸಿಗುವುದರಿಂದ ಆಹಾರದ ಅವಶ್ಯಕತೆ ಇಲ್ಲದಂತಾಗಿದೆ. ಸ್ವಲ್ಪ ಅಕ್ಕಿಯನ್ನು ಬೆನ್ನಿನ ಮೇಲೆ ಇಟ್ಟು ಶಬರಿಮಲೆಯಲ್ಲಿ ಅರ್ಪಿಸಿ. ಮುಂಭಾಗದಲ್ಲಿ ಕಂದು ಅಕ್ಕಿ, ತುಪ್ಪದ ತೆಂಗಿನಕಾಯಿ, ಬೆಲ್ಲ, ಕದಳಿ ಬಾಳೆಹಣ್ಣು, ವೀಳ್ಯದೆಲೆ, ಅಡಿಕೆ ಮತ್ತು ಕಣಿ ಪೊನ್ನು (ನಾಣ್ಯ) ಮಾತ್ರ ತರುವ ಅಗತ್ಯವಿದೆ ಎಂದು ತಂತ್ರಿಗಳ ಪತ್ರದಲ್ಲಿ ತಿಳಿಸಲಾಗಿದೆ.

ಕ್ಯೂ ಆರ್ ಕೋಡ್ ಮೂಲಕ ಸ್ಪಾಟ್ ಬುಕ್ಕಿಂಗ್ ಮಾಡಿದ ಯಾತ್ರಾರ್ಥಿಗಳಿಗೆ ಸರ್ವ ಜ್ಞಾನದ ಪಾಸ್ ನೀಡಲಾಗುತ್ತದೆ. ಇದಕ್ಕಾಗಿ ವಿಶೇಷ ವ್ಯವಸ್ಥೆಯನ್ನು ಸಿದ್ಧಪಡಿಸಲಾಗುವುದು ಎಂದು ದೇವಸ್ವಂ ಮಂಡಳಿ ತಿಳಿಸಿದೆ. ಸ್ಪಾಟ್ ಬುಕ್ಕಿಂಗ್ ಮೂಲಕ ಪ್ರತಿದಿನ 10,000 ಜನರು ದರ್ಶನ ಪಡೆಯಬಹುದು. ವರ್ಚುವಲ್ ಕ್ಯೂ ಬುಕ್ಕಿಂಗ್ ಮೂಲಕ 70,000 ಜನರು ದರ್ಶನ ಪಡೆಯಬಹುದು. ಹೀಗಾಗಿ ಒಂದೇ ದಿನದಲ್ಲಿ ಒಟ್ಟು 80 ಸಾವಿರ ಮಂದಿ ದರ್ಶನ ಪಡೆಯಲಿದ್ದಾರೆ. ಪಂಪಾ, ಎರುಮೇಲಿ, ಸತ್ರಂನಲ್ಲಿ ಸ್ಪಾಟ್ ಬುಕಿಂಗ್ ಕೌಂಟರ್‌ಗಳನ್ನು ತೆರೆಯಲಾಗುವುದು.

ಪಂಪಾದಲ್ಲಿ ಸಂಚಾರ ದಟ್ಟಣೆಯನ್ನು ಪರಿಗಣಿಸಿ ಅಲ್ಲಿ ಕೌಂಟರ್‌ಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು ಎನ್ನುವ ಮಾಹಿತಿ ನೀಡಿದ್ದಾರೆ.




**ಈ ಮಧ್ಯೆ, ಮಂಡಲ ಅವಧಿಯಲ್ಲಿ ಶಬರಿಮಲೆ ದರ್ಶನಕ್ಕೆ ಸ್ಪಾಟ್ ಬುಕ್ಕಿಂಗ್ ಬಗ್ಗೆ ದೇವಸ್ವಂ ಮಂಡಳಿ ಸ್ಪಷ್ಟನೆ ನೀಡಿದೆ. ವರ್ಚುವಲ್ ಕ್ಯೂ ಬುಕ್ಕಿಂಗ್ ಇಲ್ಲದೆ ಆಗಮಿಸುವ ಯಾತ್ರಾರ್ಥಿಗಳಿಗೆ ಮೂರು ಸ್ಥಳಗಳಲ್ಲಿ ಸ್ಪಾಟ್ ಬುಕ್ಕಿಂಗ್ ಸೌಲಭ್ಯವನ್ನು ಒದಗಿಸಲು ದೇವಸ್ವಂ ಮಂಡಳಿ ನಿರ್ಧರಿಸಿದೆ. ಈ ಬುಕಿಂಗ್‌ಗೆ ಆಧಾರ್ ಕಾರ್ಡ್ ಕಡ್ಡಾಯವಾಗಿದೆ. ಸ್ಪಾಟ್ ಬುಕ್ಕಿಂಗ್ ಮಾಡುವವರಿಗೆ ಭಾವಚಿತ್ರವಿರುವ ವಿಶೇಷ ಪಾಸ್ ನೀಡಲು ಮಂಡಳಿ ನಿರ್ಧರಿಸಿದೆ.**

# ಮರಳುಗಾಡು ಸೌದಿ ಅರೇಬಿಯಾದಲ್ಲಿ ಹಿಮಪಾತ, ಮಳೆ

**ರಿಯಾದ್:** ಸೌದಿ ಅರೇಬಿಯಾ ಎಂದರೆ ಮರಳುಗಾಡು. ಸದಾ ಸುಡುವಷ್ಟು ಬಿಸಿಲಿರುವ ಮರುಭೂಮಿಯಲ್ಲಿ ಈಗ ಹಿಮಪಾತ, ಮಳೆಯ ಅಬ್ಬರ. ಹವಾಮಾನ ವೈಪರೀತ್ಯದಿಂದಾಗಿ ಸೌದಿ ಅರೇಬಿಯಾದ ಹಲವು ಭಾಗಗಳಲ್ಲಿ ಹಿಮ ಬೀಳುತ್ತಿದೆ. ಕಣ್ಣು ಹಾಯಿಸಿದಷ್ಟು ದೂರ ಕಾಣುತ್ತಿದ್ದ ಮರಳು ಗುಡ್ಡಗಳ ಮೇಲೆ ಹಿಮಗಳ ರಾಶಿ ಬಿದ್ದಿದೆ.

ಅಲ್ -ಜಾವ್ಫ್ ಪ್ರಾಂತ್ಯದ ಉತ್ತರ ಗಡಿ ಪ್ರದೇಶಗಳಾದ ರಿಯಾದ್, ಮೆಕ್ಕಾ, ಅಸಿರ್, ತಬೂಕ್, ಅಲ್ ಬಹಾಹ್ ಪ್ರದೇಶಗಳಲ್ಲಿ ಭಾರಿ ಪ್ರಮಾಣದಲ್ಲಿ ಆಲಿಕಲ್ಲು ಮಳೆ ಮತ್ತು ಹಿಮ ಬೀಳುತ್ತಿದೆ. ಮರುಭೂಮಿಯಲ್ಲಿ ಹಿಮ ಮತ್ತು ಮಳೆಯಾಗುತ್ತಿರುವ ಅಪರೂಪದ ದೃಶ್ಯ ನೋಡಿ ಸ್ಥಳೀಯರು ಅಚ್ಚರಿಗೊಂಡಿದ್ದಾರೆ. ಇದರ ವಿಡಿಯೊ, ಫೋಟೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.



**ಭಾರಿ ಪ್ರಮಾಣದಲ್ಲಿ ಆಲಿಕಲ್ಲು ಮಳೆ, ಹಿಮ ಬೀಳುತ್ತಿದೆ**

**ಮರುಭೂಮಿಯಲ್ಲಿ ಹಿಮ ಬೀಳುವುದು ಸಾಮಾನ್ಯವೇ?:** ಮರುಭೂಮಿಯಲ್ಲಿ ಹಿಮ ಬೀಳುವುದು ತೀರಾ ಅಪರೂಪದ ವಿದ್ಯಮಾನ. ಆದರೆ ಹಿಮ ಬೀಳುವುದೇ ಇಲ್ಲ ಎನ್ನುವಂತಿಲ್ಲ ಎನ್ನುತ್ತಾರೆ ತಜ್ಞರು. ಕೆಲವು ವರ್ಷಗಳ ಹಿಂದೆ ಸಹರಾ ಮರುಭೂಮಿ ಪ್ರದೇಶದ ಪಟ್ಟಣದಲ್ಲಿ ತಾಪಮಾನ 58 ಡಿಗ್ರಿಗೆ ಏರಿಕೆಯಾಗಿತ್ತು.

ಆದರೆ ಏಕಾಏಕಿ ಆದ ಹಿಮಪಾತದಿಂದ ತಾಪಮಾನ ಇಳಿಕೆಯಾಗಿ ಮೈನಸ್ 2 ಡಿಗ್ರಿಗೆ ತಲುಪಿತ್ತು. ಹವಾಮಾನ ಬದಲಾವಣೆಯ ಕಾರಣದಿಂದಾಗಿ ಈ ರೀತಿ ವಿದ್ಯಮಾನವು ಸಂಭವಿಸುತ್ತದೆ. ಹವಾಮಾನ ವೈಪರೀತ್ಯಗಳ ಪರಿಣಾಮಗಳಿಗೆ ಪಶ್ಚಿಮ ಏಷ್ಯಾವು ಹೆಚ್ಚು ಒಳಗಾಗುತ್ತವೆ.

ಜಾಗತಿಕ ಹವಾಮಾನ ಬದಲಾವಣೆಯಿಂದಾಗಿ ವಾತಾವರಣದ ಪರಿಸ್ಥಿತಿಗಳಲ್ಲೂ ಬದಲಾವಣೆಯಾಗುತ್ತವೆ. ಹೀಗಾಗಿ ಮರುಭೂಮಿಗಳಲ್ಲಿ ಹಿಮಪಾತ ಸೇರಿದಂತೆ ಇಂತಹ ಅಸಾಮಾನ್ಯ ಹವಾಮಾನ ಘಟನೆಗಳು ಆಗಾಗ ಆಗುತ್ತವೆ ಎನ್ನುತ್ತಾರೆ ತಜ್ಞರು.

# ಸುಂದರ್ ಪಿಚೈ ಸೇರಿ ಭಾರತ ಮೂಲದ ಪ್ರಮುಖರ ಸ್ವಾಗತ



**ವಾಷಿಂಗ್ಟನ್:** ಡೊನಾಲ್ಡ್ ಟ್ರಂಪ್ ಅವರು ಮತ್ತೊಮ್ಮೆ ಅಧ್ಯಕ್ಷರಾಗಿ ಆಯ್ಕೆಯಾಗಿರುವುದನ್ನು ಅಮೆರಿಕದಲ್ಲಿ ನೆಲೆಸಿರುವ ಭಾರತ ಮೂಲದ ಪ್ರಮುಖರು ಸ್ವಾಗತಿಸಿದ್ದಾರೆ.


ಭಾರತ-ಅಮೆರಿಕ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸಲು ಟ್ರಂಪ್ ಅವರೊಂದಿಗೆ ಕೈಜೋಡಿಸಿ ಕೆಲಸ ಮಾಡುವ ಭರವಸೆಯನ್ನೂ ಅವರು ನೀಡಿದ್ದಾರೆ. ಪ್ಯಾಲೆಸ್ಟೀನ್ ಬಂಡುಕೋರರ ಹಲವು ಕುಟುಂಬಗಳ ಸದಸ್ಯರು ಇಸ್ರೇಲ್‌ನಲ್ಲಿ ವಾಸವಿದ್ದಾರೆ. ಈ ಪೈಕಿ ಇಸ್ರೇಲ್ ಪೌರತ್ವವನ್ನು ಪಡೆದು ಕೊಂಡಿರುವವರೂ ಇದ್ದಾರೆ. ಇವರನ್ನು 7 ರಿಂದ 20 ವರ್ಷಗಳ ಅವಧಿಗೆ ಗಾಜಾ ಪಟ್ಟಿ ಅಥವಾ ಇತರ ಪ್ರದೇಶಗಳಿಗೆ ಗಡೀಪಾರು ಮಾಡಲು ನೂತನ ಮಸೂದೆಯು ಅವಕಾಶ ನೀಡುತ್ತದೆ. ಇಸ್ರೇಲ್‌ನಲ್ಲಿರುವ ಪ್ಯಾಲೆಸ್ಟೀನ್ ಸದಸ್ಯರು ಹಾಗೂ ಪೂರ್ವ ಜೆರುಸಲೇಂ ಪ್ರದೇಶದಲ್ಲಿರುವ ಜನರಿಗೆ ಈ ನೀತಿ ಅನ್ವಯವಾಗಲಿದೆ. ಇಸ್ರೇಲ್ ವಶದಲ್ಲಿರುವ ವೆಸ್ಟ್ ಬ್ಯಾಂಕ್‌ನಲ್ಲಿರುವ ಜನರಿಗೆ ಈ ನೀತಿ ಅನ್ವಯವಾಗುತ್ತದೆಯೇ, ಇಲ್ಲವೇ ಎಂಬುದು ಸ್ಪಷ್ಟವಾಗಿಲ್ಲ.

ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಲಿಕುಡ್ ಪಕ್ಷ, ಅದರ ಮಿತ್ರಪಕ್ಷಗಳ ಸದಸ್ಯರ ಬೆಂಬಲದೊಂದಿಗೆ 61-41 ಮತಗಳಿಂದ ಮಸೂದೆಯನ್ನು ಅಂಗೀಕರಿಸಲಾಯಿತು.

**ಕಾರಣವೇನು?:** ಪ್ಯಾಲೆಸ್ಟೀನ್ ದಾಳಿಕೋರರ ಕುಟುಂಬ ಸದಸ್ಯರಾಗಿರುವ ಇವರಿಗೆ ಇಸ್ರೇಲ್ ಮೇಲಿನ ದಾಳಿ ಬಗ್ಗೆ ಮೊದಲೇ ತಿಳಿದಿರುತ್ತದೆ. ಭಯೋತ್ಪಾದನೆಯಂತಹ ಕೃತ್ಯಕ್ಕೆ ಇವರು ಬೆಂಬಲ ನೀಡಿದ್ದಾರೆ ಎಂಬ ಕಾರಣದಿಂದ ಗಡೀಪಾರು ಮಾಡಲಾಗುವುದು ಎಂದು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ.

# ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿಯಲ್ಲಿ ಮಹತ್ವದ ನಿರ್ಧಾರ

## ಎಫ್‌ಸಿಐನಿಂದ 10,700 ಕೋಟಿ ರೂ. ಇಕ್ವಿಟಿಗೆ ಕೇಂದ್ರದ ಅನುಮೋದನೆ, ದುಡಿಯುವ ಬಂಡವಾಳಕ್ಕಾಗಿ 10,700 ಕೋಟಿ ರೂ.



**ಇಕ್ವಿಟಿ ಮೂಲಕ ಆರ್ಥಿಕ ಬಲ**

**ಹೊಸದಿಲ್ಲಿ:** ಭಾರತೀಯ ಆಹಾರ ನಿಗಮದಿಂದ 2024 – 25 ರಲ್ಲಿ ದುಡಿಯುವ ಬಂಡವಾಳಕ್ಕಾಗಿ 10,700 ಕೋಟಿ ರೂ. ಇಕ್ವಿಟಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ನವದೆಹಲಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ.

2024-25ರಲ್ಲಿ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಅನ್ನು ಈಕ್ವಿಟಿಗೆ ಪರಿವರ್ತಿಸುವ ಮೂಲಕ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದಲ್ಲಿ 10,700 ಕೋಟಿ ರೂ. ಈಕ್ವಿಟಿಯ ಇನ್ಫ್ಯೂಷನ್ ಅನ್ನು ಕ್ಯಾಬಿನೆಟ್ ಅನುಮೋದಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿ ಅನುಮೋದಿಸಿದ್ದು, ಕೃಷಿ ಕ್ಷೇತ್ರ ಬಲಪಡಿಸುವ ಗುರಿಯೊಂದಿಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದರು.

1964ರಲ್ಲಿ 100 ಕೋಟಿ ಮತ್ತು ಈಕ್ವಿಟಿ 4 ಕೋಟಿ ರೂ. ಅಧಿಕೃತ ಬಂಡವಾಳದೊಂದಿಗೆ ಪ್ರಾರಂಭವಾದ ಎಫ್‌ಸಿಐ ಕಾಲಕ್ರಮೇಣ ತನ್ನ ಕಾರ್ಯಾಚರಣೆ ವಿಸ್ತರಿಸಿಕೊಂಡಿದ್ದು, ಪರಿಣಾಮ ಅಧಿಕೃತ ಬಂಡವಾಳ 11,000 ಕೋಟಿ ರೂ. ಇದ್ದದ್ದು ಫೆಬ್ರವರಿ 2024ರಲ್ಲಿ 21,000 ಕೋಟಿ ಆಗಿದೆ. ಎಫ್‌ಸಿಐಯ ಈಕ್ವಿಟಿ ರೂ. 2019-20ರ ಹಣಕಾಸು ವರ್ಷದಲ್ಲಿ 4,496 ಕೋಟಿ ರೂ.ಗೆ ಏರಿಕೆಯಾಗಿದೆ ಎಂದು ತಿಳಿಸಿದರು.

2023-24ರ ಹಣಕಾಸು ವರ್ಷದಲ್ಲಿ 10,157 ಕೋಟಿ ರೂ. ಇತ್ತು. ಈಗ ಗಮನಾರ್ಹ ಮೊತ್ತವಾಗಿ 10,700 ಕೋಟಿ ರೂ. ಇಕ್ವಿಟಿ ಮೂಲಕ ಆರ್ಥಿಕ ಬಲ ನೀಡುವ ಜತೆಗೆ ಹಲವು ಕಾರ್ಯ ಚಟುವಟಿಕೆಗಳಿಗೆ ಉತ್ತೇಜನ ಸಹ ನೀಡಿದೆ. ಕನಿಷ್ಟ ಬೆಂಬಲ ಬೆಲೆಯಲ್ಲಿ ಆಹಾರ ಧಾನ್ಯ ವಿತರಣೆ ಮತ್ತು ಮಾರುಕಟ್ಟೆಯಲ್ಲಿ ಆಹಾರ ಧಾನ್ಯದ ಬೆಲೆ ಸ್ಥಿರಗೊಳಿಸುವ ಮೂಲಕ ಆಹಾರ ಭದ್ರತೆ ಕಲ್ಪಿಸುವಲ್ಲಿ ಎಫ್‌ಸಿಐ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಹೇಳಿದರು.

ಎಂಎಸ್‌ಪಿ-ಆಧಾರಿತ ಸಂಗ್ರಹಣೆ ಮತ್ತು ಎಫ್‌ಸಿಐಯ ಕಾರ್ಯಾಚರಣೆ ಸಾಮರ್ಥ್ಯಗಳಲ್ಲಿನ ಹೂಡಿಕೆಗೆ ಕೇಂದ್ರ ಸರ್ಕಾರದ ಬದ್ಧತೆಯನ್ನು ಇದು ಪ್ರತಿಪಾದಿಸುತ್ತದೆ. ಕರ್ನಾಟಕದಲ್ಲಿ ಬೆಂಬಲ ಬೆಲೆ ಯೋಜನೆಯಡಿ ಹೆಸರು ಕಾಳು ಖರೀದಿ ಹೆಚ್ಚಳಕ್ಕೆ ಕೇಂದ್ರ ಸರ್ಕಾರ ಆದೇಶಿಸಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ರಾಜ್ಯ ಸರ್ಕಾರ ಮತ್ತು ಕೇಂದ್ರದ ನೋಡಲ್ ಏಜೆನ್ಸಿಗಳು ಈ ಕೂಡಲೇ ರಾಜ್ಯಾದ್ಯಂತ ಹೆಸರು ಕಾಳು ಖರೀದಿ ಕೇಂದ್ರಗಳನ್ನು ಸ್ಥಾಪಿಸಬೇಕು ಮತ್ತು ತ್ವರಿತವಾಗಿ ಖರೀದಿ ಪ್ರಕ್ರಿಯೆ ಪ್ರಾರಂಭಿಸಬೇಕು ಎಂದು ಸಚಿವ ಜೋಶಿ ಸೂಚಿಸಿದ್ದಾರೆ. ಬೆಂಬಲ ಬೆಲೆ ನೀಡುವ ಮೂಲಕ ಸದಾ ರೈತರ ಬೆನ್ನಿಗೆ ನಿಂತಿರುವ ಕೇಂದ್ರ ಸರ್ಕಾರಕ್ಕೂ ಮತ್ತು ಕೇಂದ್ರ ಕೃಷಿ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಕನ್ನಡ ನಾಡಿನ ಸಮಸ್ತ ರೈತರ ಪರವಾಗಿ ಅಭಿನಂದನೆ ಸಲ್ಲಿಸುತ್ತೇವೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಈಗಾಗಲೇ ರಾಜ್ಯದಲ್ಲಿ ಬೆಂಬಲ ಬೆಲೆಯಲ್ಲಿ 22215 ಮೆಟ್ರಿಕ್ ಟನ್ ಹೆಸರು ಕಾಳು ಸಂಗ್ರಹಿಸಿದ್ದು, ಹೆಚ್ಚುವರಿಯಾಗಿ 16105 ಮೆ.ಟನ್ ಹೆಸರು ಖರೀದಿ ಪ್ರಕ್ರಿಯೆ ನಡೆಯಲಿದೆ. ಈ ಮೂಲಕ ಕೇಂದ್ರ ಸರ್ಕಾರ ಹೆಸರು ಬೆಳೆಗಾರರ ಬೆಂಬಲಕ್ಕೆ ನಿಂತಿದೆ ಎಂದು ಸಚಿವ ಪ್ರಲ್ಹಾದ ಜೋಶಿ ಪ್ರತಿಪಾದಿಸಿದ್ದಾರೆ.

**ರಾಜ್ಯ ಸರ್ಕಾರ ಮತ್ತು ಕೇಂದ್ರದ ನೋಡಲ್ ಏಜೆನ್ಸಿಗಳು ಈ ಕೂಡಲೇ ರಾಜ್ಯಾದ್ಯಂತ ಹೆಸರು ಕಾಳು ಖರೀದಿ ಕೇಂದ್ರಗಳನ್ನು ಸ್ಥಾಪಿಸಬೇಕು ಮತ್ತು ತ್ವರಿತವಾಗಿ ಖರೀದಿ ಪ್ರಕ್ರಿಯೆ ಪ್ರಾರಂಭಿಸಬೇಕು. ಮೀನ್ಸ್ ಅಡ್ವಾನ್ಸ್ ಅನ್ನು ಈಕ್ವಿಟಿಗೆ ಪರಿವರ್ತಿಸುವ ಮೂಲಕ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದಲ್ಲಿ 10,700 ಕೋಟಿ ರೂ. ಈಕ್ವಿಟಿಯ ಇನ್ಫ್ಯೂಷನ್ ಅನ್ನು ಕ್ಯಾಬಿನೆಟ್ ಅನುಮೋದಿಸಿದೆ**

**-ಪ್ರಲ್ಹಾದ ಜೋಶಿ**
**ಕೇಂದ್ರ ಸಚಿವ**

# ಮಿನಿ ನ್ಯೂಸ್

## ಅಗ್ನಿ ಅವಘಡ: 18 ಮಂದಿಗೆ ಗಾಯ

**ಮುಂಬೈ:** ಇಲ್ಲಿನ ಸ್ಟೀಲ್ ಕಂಪನಿಯೊಂದರಲ್ಲಿ ಅಗ್ನಿ ಅವಘಡ ಸಂಭವಿಸಿದ ಪರಿಣಾಮ 18 ಮಂದಿ ಗಾಯಗೊಂಡಿದ್ದು ಒಬ್ಬರ ಸ್ಥಿತಿ ಚಿಂತಾಜನಕವಾಗಿರುವ ಘಟನೆ ಮಹಾರಾಷ್ಟ್ರದ ವಾರ್ಧಾ ಜಿಲ್ಲೆಯಲ್ಲಿ ನಡೆದಿದೆ. ಇಲ್ಲಿನ ಭುಗಾಂವ್ ಸ್ಟೀಲ್ ಕಂಪನಿಯಲ್ಲಿ ನಿನ್ನೆ ರಾತ್ರಿ 7 ಗಂಟೆಗೆ ಅಗ್ನಿ ಅನಾಹುತ ಸಂಭವಿಸಿದೆ ಎಂದು ಪೊಲೀಸರು ಹೇಳಿದ್ದಾರೆ.

ಬೆಂಕಿ ಅವಘಡದಲ್ಲಿ ಬಹುತೇಕ ಕಾರ್ಮಿಕರಿಗೆ ಸುಟ್ಟಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಒಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದು ಬಂದಿದೆ. ಹೆಚ್ಚಿನ ಚಿಕಿತ್ಸೆಗೆ ಮೂವರು ಮಂದಿಯನ್ನ ನಾಗ್ಪುರಕ್ಕೆ ರವಾನಿಸಲಾಗಿದೆ. ಅಗ್ನಿ ಶಾಮಕ ದಳ ಬೆಂಕಿಯನ್ನ ಹತೋಟಿಗೆ ತರುವಲ್ಲಿ ಯಶಸ್ವಿಯಾಗಿದೆ. ಅವಘಡ ಹೇಗೆ ನಡೆದಿದೆ ಎನ್ನುವ ನಿಖರ ಕಾರಣಗಳ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಕಂಪನಿಯ ಆಡಳಿತ ಮಂಡಳಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ.

## ಭಾರತದ ಕಾನ್ಸುಲರ್ ಶಿಬಿರ ರದ್ದು

**ಟೊರಾಂಟೊ:** ಕೆನಡಾದ ವಿವಿಧೆಡೆ ನಡೆಸಲು ಉದ್ದೇಶಿಸಿರುವ ಕೆಲವು ಕಾನ್ಸುಲರ್ ಶಿಬಿರಗಳನ್ನು ರದ್ದುಗೊಳಿಸಿರುವುದಾಗಿ ಭಾರತದ ಕಾನ್ಸುಲೇಟ್ ಜನರಲ್ ಕಚೇರಿ ಗುರುವಾರ ಹೇಳಿದೆ. ಕಾನ್ಸುಲರ್ ಶಿಬಿರಗಳಿಗೆ ಕನಿಷ್ಠ ಭದ್ರತೆ ಒದಗಿಸಲು ಅಸಮರ್ಥರಾಗಿದ್ದೇವೆ ಎಂದು ಕೆನಡಾದ ಭದ್ರತಾ ಅಧಿಕಾರಿಗಳು ಹೇಳಿರುವುದರಿಂದ ಈ ನಿರ್ಧಾರ ತೆಗೆದುಕೊಂಡಿದೆ.

ಹಿಂದೂ ಸಭಾ ಮಂದಿರ ಮತ್ತು ಭಾರತದ ದೂತವಾಸ ಕಚೇರಿಯು ಬ್ರಾಂಪ್ಟನ್‌ನಲ್ಲಿ ಜಂಟಿಯಾಗಿ ಆಯೋಜಿಸಿದ್ದ ಕಾನ್ಸುಲರ್ ಶಿಬಿರದ ತಾಣಕ್ಕೆ ಖಾಲಿಸ್ತಾನಿ ಪರ ಹೋರಾಟಗಾರರು ನುಗ್ಗಿ, ಅಲ್ಲಿದ್ದವರೊಂದಿಗೆ ಘರ್ಷಣೆ ನಡೆಸಿದ್ದ ಘಟನೆ ಈಚೆಗೆ ನಡೆದಿತ್ತು. ಅದರ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. 'ಶಿಬಿರಗಳಿಗೆ ಭದ್ರತೆ ಒದಗಿಸಲು ಸಾಧ್ಯವಿಲ್ಲ ಎಂದು ಭದ್ರತಾ ಏಜೆನ್ಸಿಗಳು ತಿಳಿಸಿವೆ. ಆದ್ದರಿಂದ ನಿಗದಿತ ಶಿಬಿರಗಳನ್ನು ರದ್ದುಗೊಳಿಸಿದ್ದೇವೆ' ಎಂದು ಭಾರತದ ಕಾನ್ಸುಲರ್ ಜನರಲ್ 'ಎಕ್ಸ್'ನಲ್ಲಿ ಪ್ರಕಟಿಸಿದ್ದಾರೆ. ಖಾಲಿಸ್ತಾನ ಧ್ವಜಗಳನ್ನು ಹಿಡಿದಿದ್ದ ಪ್ರತಿಭಟನಕಾರರು ಹಿಂದೂ ಸಭಾ ದೇವಾಲಯದ ಆವರಣದೊಳಗೆ ನುಗ್ಗಿ, ದಾಂದಲೆ ನಡೆಸಿದ್ದ ಘಟನೆಯನ್ನು ಭಾರತ ತೀವ್ರವಾಗಿ ಖಂಡಿಸಿತ್ತು. ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರೂ ಈ ಘಟನೆಯನ್ನು ಖಂಡಿಸಿದ್ದರು.

## ಹಣಕಾಸು ಸಚಿವರನ್ನು ಪದಚ್ಯುತಿಗೊಳಿಸಿದ ಜರ್ಮನ್ ಚಾನ್ಸಲರ್ ಓಲಾಫ್

**ಬರ್ಲಿನ್:** ಜರ್ಮನಿಯ ಹಣಕಾಸು ಸಚಿವರನ್ನು ಪದಚ್ಯುತಿಗೊಳಿಸಿರುವ ಚಾನ್ಸಲರ್ ಓಲಾಫ್ ಸ್ಕೋಲ್ಜ್, 2025ರ ಜನವರಿಯಲ್ಲಿ ವಿಶ್ವಾಸಮತ ಯಾಚನೆ ನಡೆಸುವುದಾಗಿ ಘೋಷಿಸಿದ್ದಾರೆ. ಅಮೆರಿಕ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶ ಬುಧವಾರವಷ್ಟೇ ಪ್ರಕಟವಾಗಿದೆ. ಇದರ ಬೆನ್ನಲ್ಲೇ, ಯುರೋಪಿನ ಬೃಹತ್ ಆರ್ಥಿಕತೆಗಳಲ್ಲಿ ಒಂದಾದ ಜರ್ಮನಿಯಲ್ಲಿ ರಾಜಕೀಯ ಬಿಕ್ಕಟ್ಟು ತಲೆದೋರುವ ಲಕ್ಷಣ ಕಂಡುಬಂದಿದೆ. ಹಣಕಾಸು ಸಚಿವರೂ ಆಗಿರುವ ಮೈತ್ರಿಯ ಭಾಗವಾಗಿರುವ ಫ್ರೀ ಡೆಮಾಕ್ರಟ್ಸ್ ಪಕ್ಷದ ಕ್ರಿಸ್ಟಿಯನ್ ಲಿಂಡ್ನರ್ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿರುವ ಓಲಾಫ್ ಅವರು, ತಮ್ಮ 'ಸಾಮಾಜಿಕ ಪ್ರಜಾಪ್ರಭುತ್ವವಾದಿ ಪಕ್ಷ'ದೊಂದಿಗೆ ಏಕಾಂಗಿಯಾಗಿ ಅಥವಾ ಮಿತ್ರ ಪಕ್ಷ 'ಗ್ರೀನ್ಸ್'ನೊಂದಿಗೆ ಸೇರಿ ಅಲ್ಪ ಬಹುಮತದ ಸರ್ಕಾರವನ್ನು ಮುನ್ನಡೆಸುವ ಸಾಧ್ಯತೆ ಇದೆ. ಬಜೆಟ್ ನೀತಿ ಮತ್ತು ಜರ್ಮನಿಯ ಆರ್ಥಿಕ ದಿಕ್ಕೂಚಿಗೆ ಸಂಬಂಧಿಸಿದಂತೆ ಉಂಟಾದ ಕಿತ್ತಾಟ, ಸರ್ಕಾರದ ಜನಪ್ರಿಯತೆ ಕುಸಿಯುತ್ತಿರುವುದು ಹಾಗೂ ತೀವ್ರ ಬಲ, ಎಡಪಂಥೀಯ ಶಕ್ತಿಗಳ ತಿಕ್ಕಾಟವು ಮೂರು ಪಕ್ಷಗಳನ್ನೊಳಗೊಂಡ ಮೈತ್ರಿಯಲ್ಲಿ ಬಿರುಕು ಮೂಡಿಸಿದೆ. ಲಿಂಗ್ನರ್ ಅವರನ್ನು ವಜಾಗೊಳಿಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿರುವ ಓಲಾಫ್, 'ಸಮರ್ಥವಾಗಿ ಕಾರ್ಯನಿರ್ವಹಿಸುವ ಮತ್ತು ದೇಶಕ್ಕೆ ಅಗತ್ಯವಿರುವ ನಿರ್ಧಾರಗಳನ್ನು ಕೈಗೊಳ್ಳುವ ದೃಢ ಸರ್ಕಾರ ನಮಗೆ ಬೇಕಿದೆ' ಎಂದಿದ್ದಾರೆ. ಬಜೆಟ್ ವಿಚಾರಗಳಲ್ಲಿ ಮೂಗು ತೂರಿಸುವುದು, ನಿರ್ಧಾರಗಳಿಗೆ ತೊಡಕುಂಟು ಮಾಡುತ್ತಿದ್ದ ಕಾರಣಕ್ಕೆ ಲಿಂಡ್ನರ್ ಅವರನ್ನು ವಜಾಗೊಳಿಸಿರುವುದಾಗಿ ಹೇಳಿರುವ ಚಾನ್ಸಲರ್, ಅವರು ನಕಲಿ ಕಾರಣಗಳನ್ನು ಮುಂದೊಡ್ಡಿ ಕಾನುನುಗಳಿಗೆ ಅಡ್ಡಿಪಡಿಸುತ್ತಿದ್ದರು ಎಂದು ದೂರಿದ್ದಾರೆ.

## ಬುಡಕಟ್ಟು: ನಾಯಕ ಮಂಡಲ್ ಮುರ್ಮು ಬಿಜೆಪಿ ಸೇರ್ಪಡೆ

**ರಾಂಚಿ:** ಸಂತಾಲ್ ಪ್ರಾಂತ್ಯದ ಬುಡಕಟ್ಟು ಸಮುದಾಯದ ನಾಯಕ ಮಂಡಲ್ ಮುರ್ಮು ಬಿಜೆಪಿ ಸೇರ್ಪಡೆಗೊಂಡಿದ್ದಾರೆ ಎಂದು ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಚಂಪಾಯಿ ಸೋರೆನ್ ಗುರುವಾರ ಹೇಳಿದ್ದಾರೆ. ಸೆರೈಕೆಲಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಸೋರೆನ್ ಅವರು ಮಾಧ್ಯಮಗಳಿಗೆ ಈ ಮಾಹಿತಿ ನೀಡಿದರು. ಬಾಂಗ್ಲಾದೇಶದಿಂದ ನುಸುಳುವವರು ಸ್ಥಳೀಯ ಬುಡಕಟ್ಟು ಜನರಿಗೆ ತೊಂದರೆ ನೀಡುತ್ತಿದ್ದಾರೆ. ಆದರೆ ರಾಜ್ಯ ಸರ್ಕಾರ ಈ ಕುರಿತು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿದ್ದಾರೆ. ಕೆಲ ದಿನಗಳ ಹಿಂದಷ್ಟೇ ಮುಖ್ಯಮಂತ್ರಿ ಹೇಮಂತ್ ಸೋರೆನ್ ಅವರ ನಾಮಪತ್ರಕ್ಕೆ ಮಂಡಲ್ ಮುರ್ಮು ಪ್ರಸ್ತಾವಕರಾಗಿ ಸಹಿ ಮಾಡಿದ್ದರು. ಬುಡಕಟ್ಟು ಸಮುದಾಯಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ರಾಜ್ಯ ಸರ್ಕಾರ ಗಮನ ನೀಡುತ್ತಿಲ್ಲ, ಬಾಂಗ್ಲಾದೇಶದಿಂದ ನುಸುಳಿದವರು ರಾಜಕೀಯ ಪ್ರಭಾವ ಬಳಸಿ ಬುಡಕಟ್ಟು ಭೂಮಿಯನ್ನು ವಶಪಡಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು. ಹಾಗೇ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳ ಅಸ್ತವ್ಯಸ್ತಗೊಂಡಿವೆ ಎಂದು ಅವರು ಆರೋಪ ಮಾಡಿದರು. ಈ ಹಿನ್ನೆಲೆಯಲ್ಲಿ ಮಂಡಲ್ ಮುರ್ಮು ಬಿಜೆಪಿ ಸೇರಿದ್ದಾರೆ ಎಂದರು.

## ಸೇನೆಯ ಗುಂಡಿಗೆ ಉಗ್ರ ಬಲಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ವಶ

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಓರ್ವ ಉಗ್ರ ಹತ್ಯೆಯಾಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾರ್ಯಾಚರಣೆ ನಡೆದ ಸ್ಥಳದಿಂದ ಎಕೆ 47 ರೈಫಲ್, ಎರಡು ಹ್ಯಾಂಡ್ ಗ್ರೆನೇಡ್, ನಾಲ್ಕು ಮ್ಯಾಗಜೀನ್‌ಗಳು, ಮದ್ದುಗುಂಡುಗಳು ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಲೋಲಾಬ್ ಪ್ರದೇಶದಲ್ಲಿ ಮಂಗಳವಾರ ಕಾರ್ಯಾಚರಣೆ ಆರಂಭವಾಗಿತ್ತು. ಬುಧವಾರ ಸಹ ಈ ಕಾರ್ಯಾಚರಣೆ ಮುಂದುವರೆದಿತ್ತು. ಓರ್ವ ಉಗ್ರನ ಹತ್ಯೆಯ ನಂತರ ಈ ಕಾರ್ಯಾಚರಣೆ ನಿಲ್ಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಂಗಳವಾರ ಬಂಡಿಪೋರಾ ಜಿಲ್ಲೆಯ ಕೆತ್ಸುನ್ ಅರಣ್ಯದಲ್ಲಿ ಒಬ್ಬ ಭಯೋತ್ಪಾದಕನನ್ನು ಹತ್ಯೆಗೈಯ್ಯಲಾಗಿತ್ತು. ಆ ಪ್ರದೇಶದಲ್ಲಿ ಕಾರ್ಯಾಚರಣೆ ಇನ್ನೂ ಮುಂದುವರೆದಿದೆ.

ಕಳೆದ ತಿಂಗಳು ಗಂದರ್‌ಬಾಲ್ ಜಿಲ್ಲೆಯ ಗಗಂಗೀರ್ ಪ್ರದೇಶದಲ್ಲಿ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಆರು ಕಾರ್ಮಿಕರು ಮತ್ತು ಸ್ಥಳೀಯ ವೈದ್ಯರು ಸಾವನ್ನಪ್ಪಿದ್ದರು.


# ಅನುಷ್ಕಾ ಶೆಟ್ಟಿ ಫ್ಯಾನ್ಸ್‌ಗೆ ಡಬಲ್ ಧಮಾಕ

ಘಾಟಿ ಚಿತ್ರದ ಫಸ್ಟ್ ಲುಕ್ ಔಟ್

ಕುಡ್ಲದ ಬೆಡಗಿ ಅನುಷ್ಕಾ ಶೆಟ್ಟಿಗೆ ಹುಟ್ಟುಹಬ್ಬದ ಸಂಭ್ರಮ. ಈ ದಿನದಿಂದು ಅವರ ಸಿನಿಮಾಗಾಗಿ ಎದುರು ನೋಡುತ್ತಿರುವ ಫ್ಯಾನ್ಸ್‌ಗೆ ಬಿಗ್ ಅಪ್‌ಡೇಟ್‌ವೊಂದು ಸಿಕ್ಕಿದೆ. ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಂಡಿರುವ ಅನುಷ್ಕಾ ಲುಕ್ ಅನ್ನು ಚಿತ್ರತಂಡ ಅನಾವರಣ ಮಾಡಿದೆ. ಅಭಿಮಾನಿಗಳಿಗೆ ಡಬಲ್ ಧಮಾಕ ಎಂಬಂತೆ ಎರಡು ಸಿನಿಮಾಗಳ ಹೊಸ ಪೋಸ್ಟರ್ ಅನ್ನು ನಟಿಯ ಹುಟ್ಟುಹಬ್ಬದಂದು ಚಿತ್ರತಂಡ ಅನಾವರಣ ಮಾಡಿದೆ. ಅದರಲ್ಲಿ ಅನುಷ್ಕಾ ನಟನೆಯ ಬಹುನಿರೀಕ್ಷಿತ 'ಘಾಟಿ' ಚಿತ್ರದ ಪೋಸ್ಟರ್ ರಿವೀಲ್ ಆಗಿದೆ. ರಕ್ತ ಮೆತ್ತಿದ ಕೈಗಳಲ್ಲಿ ಚುಟ್ಟಾ ಹಿಡಿದು ಸೇದುತ್ತಾ ಖಡಕ್ ಲುಕ್‌ನಲ್ಲಿ ನಟಿ ಕಾಣಿಸಿಕೊಂಡಿದ್ದಾರೆ. ಈ ಪೋಸ್ಟರ್ ನೋಡಿದ್ರೆ, ಈ ಹಿಂದಿನ ಅರುಂಧತಿ, ಭಾಗಮತಿ ಪಾತ್ರಗಳನ್ನು ನೆನಪಿಸುವಂತಿದೆ. ಇನ್ನೂ ಈ ಚಿತ್ರವನ್ನು ಕ್ರಿಶ್ ನಿರ್ದೇಶನ ಮಾಡಿದ್ದಾರೆ. 'ಘಾಟಿ' ಸಿನಿಮಾ ನಿರ್ಮಾಣ ಮಾಡಿರೋದು ನಟ ಪ್ರಭಾಸ್ ಸಹಭಾಗಿತ್ವದ ಯುವಿ ಕ್ರಿಯೇಶನ್ಸ್. ಸದ್ಯ ನಟಿಯ ಲುಕ್‌ಗೆ ಫ್ಯಾನ್ಸ್ ಫಿದಾ ಆಗಿದ್ದಾರೆ. ಕ್ವೀನ್ ಇಸ್ ಬ್ಯಾಕ್ ಎನ್ನುತ್ತಾ ಫ್ಯಾನ್ಸ್ ಸಂಭ್ರಮಿಸುತ್ತಿದ್ದಾರೆ. ಇದರ ಜೊತೆಗೆ ಅನುಷ್ಕಾ ಶೆಟ್ಟಿ ನಟನೆಯ ಮಲಯಾಳಂ ಸಿನಿಮಾ 'ಕತನಾರ್' ಚಿತ್ರದ ಲುಕ್ ಕೂಡ ರಿವೀಲ್ ಆಗಿದೆ. ನೀಲ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.



# ಟ್ರೋಲ್‌ಗೆ ಡೋಂಟ್ ಕೇರ್ ಎನ್ನುತ್ತಾ ಹೊಸ ರೀಲ್ಸ್ ಹಂಚಿಕೊಂಡ ನಿವೇದಿತಾ




ಚಂದನ್ ಶೆಟ್ಟಿ ಜೊತೆ ಡಿವೋರ್ಸ್ ಆದ್ಮೇಲೆ ನಿವೇದಿತಾ ಗೌಡ ಸೋಶಿಯಲ್ ಮೀಡಿಯಾದಲ್ಲಿ ಹೆಚ್ಚು ಆಯಕ್ಟೀವ್ ಆಗಿದ್ದಾರೆ. ಟ್ರೋಲಿಗರ ಕಾಟದ ನಡುವೆಯೂ ಹೊಸ ರೀಲ್ಸ್‌ವೊಂದನ್ನು ನಟಿ ಹಂಚಿಕೊಂಡಿದ್ದಾರೆ. ಕೆಂಪು ಬಣ್ಣದ ಗೌನ್ ಧರಿಸಿ ಸಖತ್ ಹಾಟ್ ಆಗಿ ನಟಿ ಪೋಸ್ ಕೊಟ್ಟಿದ್ದಾರೆ. ಸಖತ್ ಸ್ಟೈಲೀಶ್ ಆಗಿ ನಟಿ ಕಾಣಿಸಿಕೊಂಡಿದ್ದಾರೆ. ಹೊಸ ರೀಲ್ಸ್‌ನಲ್ಲಿ ನಟಿಯ ಅವತಾರ ಕಂಡು ಸಖತ್ ಹಾಟ್ ಮಗಾ ಎಂದು ನೆಟ್ಟಿಗರು ಬಗೆ ಬಗೆಯ ಕಾಮೆಂಟ್ ಮಾಡಿದ್ದಾರೆ. ನಿಮಗೆ ಡಿವೋರ್ಸ್ ಆಗಿದೆ ಅನ್ನೋದು ನೆನಪಿದ್ಯಾ ಎಂದೆಲ್ಲಾ ನಟಿಗೆ ನೆಟ್ಟಿಗರು ಪ್ರಶ್ನೆ ಮಾಡಿದ್ದಾರೆ.

ಆದರೆ ಈ ಯಾವ ಕಾಮೆಂಟ್‌ಗಳಿಗೂ ತಲೆಕೆಡಿಸಿಕೊಳ್ಳದೇ ನಟಿ ಸೈಲೆಂಟ್ ಆಗಿದ್ದಾರೆ. ಇನ್ನೂ ಚಂದನ್ ಶೆಟ್ಟಿ ಜೊತೆ 'ಮುದ್ದು ರಾಕ್ಷಸಿ' ಎಂಬ ಸಿನಿಮಾದಲ್ಲಿ ನಟಿಸಿದ್ದಾರೆ. ಇದರ ರಿಲೀಸ್‌ಗೆ ನಟಿ ಎದುರು ನೋಡ್ತಿದ್ದಾರೆ. ಸೃಜನ್ ಲೋಕೇಶ್ ನಟನೆಯ 'ಜಿಎಸ್‌ಟಿ' ಸಿನಿಮಾದಲ್ಲಿ ನಿವೇದಿತಾ ನಟಿಸಿ ದ್ದಾರೆ. ಅಂದಹಾಗೆ, ಚಂದನ್ ಶೆಟ್ಟಿ ಜೊತೆ ನಿವೇದಿತಾ 2020ರಲ್ಲಿ ಮೈಸೂರಿನಲ್ಲಿ ಮದುವೆಯಾದರು. 2024ರ ಜೂನ್‌ನಲ್ಲಿ ಈ ಜೋಡಿ ಡಿವೋರ್ಸ್ ಘೋಷಿಸಿದರು.


# ಶಾರುಖ್‌ಗೆ ಕೊಲೆ ಬೆದರಿಕೆ

50 ಲಕ್ಷಕ್ಕೆ ಬೇಡಿಕೆ



ಸಲ್ಮಾನ್ ಖಾನ್ ಬಳಿಕ ಬಾಲಿವುಡ್ ಸೂಪರ್ ಸ್ಟಾರ್ ಶಾರುಖ್ ಖಾನ್‌ಗೆ ವ್ಯಕ್ತಿಯೊಬ್ಬ ಕೊಲೆ ಬೆದರಿಕೆ ಹಾಕಿದ್ದಾನೆ.ಬಾಲಿವುಡ್ ನಟ ಸಲ್ಮಾನ್ ಖಾನ್ ಬಳಿಕ ಇದೀಗ ಬಾಲಿವುಡ್ ಸೂಪರ್‌ಸ್ಟಾರ್ ಶಾರುಖ್ ಖಾನ್‌ಗೆ ಅಪರಿಚಿತ ವ್ಯಕ್ತಿಯಿಂದ ಕೊಲೆ ಬೆದರಿಕೆ ಕರೆಯೊಂದು ಬಂದಿದೆ. ಮುಂಬೈನ ಬಾಂದ್ರಾ ಪೊಲೀಸರಿಗೆ ಕರೆ ಮಾಡಿರುವ ವ್ಯಕ್ತಿ ಐವತ್ತು ಲಕ್ಷ ರೂ.ಗೆ ಬೇಡಿಕೆ ಇಟ್ಟಿದ್ದಾನೆ. ಇದರ ಬೆನ್ನಲ್ಲೇ ಬಾಂದ್ರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಛತ್ತೀಸ್ ಗಢದ ರಾಯಪುರದ ಫೈಜಾನ್ ಖಾನ್ ಎಂಬುವರ ಹೆಸರಿನಲ್ಲಿ ನೋಂದಾಯಿಸಲಾದ ಮೊಬೈಲ್ ಸಂಖ್ಯೆಯಿಂದ ಬೆದರಿಕೆ ಕರೆ ಸ್ವೀಕರಿಸಲಾಗಿದೆ. ಈ ಸಂಬಂಧ ಫೈಜಾನ್ ಖಾನ್‌ನನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ. ವಿಚಾರಣೆಯಲ್ಲಿ ತಾನು ವಕೀಲನಾಗಿದ್ದು, ನ.2 ರಂದು ಮೊಬೈಲ್ ಕಳ್ಳತನವಾಗಿದೆ. ಈ ಬಗ್ಗೆ ದೂರು ದಾಖಲಾಗಿದೆ. ಶಾರುಖ್ ಖಾನ್‌ಗೆ ಬೆದರಿಕೆ ಹಾಕಲು ಯಾರೋ ಅದನ್ನು ದುರ್ಬಳಕೆ ಮಾಡಿಕೊಂಡಿರಬಹುದು ಎಂದು ಹೇಳಿದ್ದಾನೆ ಎನ್ನಲಾಗಿದೆ. ಕರೆ ಮಾಡಿದ ವ್ಯಕ್ತಿಗೆ ಆತನ ಗುರುತು ಮತ್ತು ಸ್ಥಳದ ಬಗ್ಗೆ ಪೊಲೀಸರು ಪ್ರಶ್ನಿಸಿದ್ದಾರೆ. ಆದ ಆತ ನನ್ನನ್ನು ''ಹಿಂದೂಸ್ತಾನಿ'' ಎಂದು ಕರೆಯಲು ಪೊಲೀಸರಿಗೆ ತಿಳಿಸಿದ್ದಾನೆ. ನ.5 ರಂದು ಮಧ್ಯಾಹ್ನ 1:20ರ ಸುಮಾರಿಗೆ ಕರೆ ಮಾಡಿ ಈ ಬೆದರಿಕೆ ಹಾಕಲಾಗಿದೆ ಎಂದು ಮೂಲಗಳು ಹೇಳಿವೆ. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಶಾರುಖ್ ಖಾನ್ ಅವರಿಗೆ ಜೀವ ಬೆದರಿಕೆ ಬಂದಿತ್ತು. ಅದಾದ ಬಳಿಕ ಅವರ ಭದ್ರತೆಯನ್ನು Z+ ಮಟ್ಟಕ್ಕೆ ಹೆಚ್ಚಿಸಲಾಯಿತು. ದಿನದ 24 ಗಂಟೆ ಆರು ಶಸ್ತ್ರಸಜ್ಜಿತ ಸಿಬ್ಬಂದಿಗಳ ಜೊತೆಯಲ್ಲಿ ಇರುವುದನ್ನು ಖಚಿತಪಡಿಸುತ್ತದೆ. ಇದಕ್ಕೂ ಮೊದಲು ಶಾರುಖ್ ಖಾನ್ ಇಬ್ಬರು ಶಸ್ತ್ರಸಜ್ಜಿತ ಭದ್ರತಾ ಸಿಬ್ಬಂದಿಗಳನ್ನು ಹೊಂದಿದ್ದರು.

# ಚಿತ್ರೀಕರಣದ ವೇಳೆ ಸುನೀಲ್ ಶೆಟ್ಟಿಗೆ ಗಾಯ



ಬಾಲಿವುಡ್ ನಟ ಸುನೀಲ್ ಶೆಟ್ಟಿಗೆ ಚಿತ್ರೀಕರಣದ ವೇಳೆ ಪೆಟ್ಟು ಮಾಡಿಕೊಂಡಿದ್ದಾರೆ. ಆಕ್ಷನ್ ದೃಶ್ಯ ಚಿತ್ರೀಕರಿಸುವಾಗ ಹಲವು ಎಚ್ಚರಿಕೆಯ ಕ್ರಮ ತೆಗೆದುಕೊಂಡಿದ್ದರೂ ಕೂಡ ಸುನೀಲ್ ಶೆಟ್ಟಿಗೆ ಪೆಕ್ಕಲುಬಿಗೆ ಗಾಯವಾಗಿದೆ.

ಪ್ರಸ್ತುತ 'ಹಂಟರ್' ವೆಬ್ ಸರಣಿಯ ಶೂಟಿಂಗ್ ಮುಂಬೈನಲ್ಲಿ ಮಾಡಲಾಗುತ್ತಿದೆ. ಫೈಟಿಂಗ್ ಸೀನ್ ಚಿತ್ರೀಕರಿಸುವಾಗ ಹಲವು ಮುನ್ನಚ್ಚರಿಕೆಯ ಕ್ರಮ ಕೈಗೊಂಡಿದ್ದರೂ ಕೂಡ ಆಕಸ್ಮಿಕವಾಗಿ ಸುನೀಲ್ ಶೆಟ್ಟಿಗೆ ಗಾಯವಾಗಿದೆ. ಕೂಡಲೇ ವೈದ್ಯರನ್ನು ಸ್ಥಳಕ್ಕೆ ಕರೆಸಿ ನಟನಿಗೆ ಚಿಕಿತ್ಸೆ ಕೊಡಿಸಲಾಗಿದೆ.

ಇನ್ನೂ ಆತಂಕದಲ್ಲಿರುವ ಫ್ಯಾನ್ಸ್‌ಗೆ ಸುನೀಲ್ ಶೆಟ್ಟಿ ಸೋಶಿಯಲ್ ಮೀಡಿಯಾದಲ್ಲಿ ಹೆಲ್ತ್ ಅಪ್‌ಡೇಟ್ ತಿಳಿಸಿದ್ದಾರೆ. ಸಣ್ಣ ಗಾಯ, ಸೀರಿಯಸ್ ಏನು ಇಲ್ಲ. ನಾನು ಈಗ ಚೇತರಿಸಿಕೊಂಡಿದ್ದೇನೆ. ಮುಂದಿನ ಚಿತ್ರೀಕರಣಕ್ಕೆ ತಯಾರಿಯಾಗಿದ್ದೇನೆ. ನಿಮ್ಮ ಪ್ರೀತಿ ಮತ್ತು ಅಭಿಮಾನಕ್ಕೆ ಧನ್ಯವಾದಗಳು ಎಂದು ಸುನೀಲ್ ಶೆಟ್ಟಿ ಹೇಳಿದ್ದಾರೆ. ನಟನ ಕಡೆಯಿಂದ ಅಧಿಕೃತ ಅಪ್‌ಡೇಟ್ ತಿಳಿದು ಫ್ಯಾನ್ಸ್ ನಿರಾಳವಾಗಿದ್ದಾರೆ.

# 2ನೇ ಮದುವೆಯಾದ 'ಜೊತೆ ಜೊತೆಯಲಿ' ನಟಿ ಮಾನಸ



ಜೊತೆ ಜೊತೆಯಲಿ, ಲಕ್ಷ್ಮಿ ನಿವಾಸ ಖ್ಯಾತಿಯ ಮಾನಸ ಮನೋಹರ್ ಅವರು ಅದ್ದೂರಿಯಾಗಿ 2ನೇ ಮದುವೆಯಾಗಿದ್ದಾರೆ. ಗ್ರ್ಯಾಂಡ್ ವೆಡ್ಡಿಂಗ್‌ನ ಸುಂದರ ಫೋಟೋಗಳನ್ನು ನಟಿ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಪ್ರೀತಂ ಚಂದ್ರ ಜೊತೆ ಮಾನಸ ಮದುವೆ ಕುಟುಂಬಸ್ಥರು, ಆಪ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆದಿದೆ. ಇದೀಗ ನವಜೋಡಿಗೆ ಫ್ಯಾನ್ಸ್ ಶುಭಹಾರೈಸುತ್ತಿದ್ದಾರೆ.ಅಂದಹಾಗೆ, ಇತ್ತೀಚೆಗೆ ನಟಿ ನಿಶ್ಚಿತಾರ್ಥದ ಸಂಭ್ರಮದಲ್ಲಿ ಅಭಿಮಾನಿಗಳೊಂದಿಗೆ ಹಂಚಿಕೊಂಡಿದ್ದರು. ಆಗ 2ನೇ ಮದುವೆನಾ ಎಂದು ಅಭಿಮಾನಿಗಳು ಪ್ರಶ್ನೆ ಮಾಡಿದ್ದರು. ಅದಕ್ಕೆ ನಟಿ ಖಡಕ್ ಆಗಿ ಉತ್ತರ ನೀಡಿದರು. ಎಲ್ಲಾರ ಸಂದೇಹಗಳಿಗೆ ಉತ್ತರ ಇದೆ. ಇದು ನನ್ನ ಎರಡನೇ ಮದುವೆ. ಕೆಲವು ಬಾರಿ ದೈಹಿಕವಾಗಿ ಮದುವೆಯಾಗುತ್ತೇವೆ ಆದರೆ ಯಾವುದೇ ಭಾವನಾತ್ಮಕ ಸಂಬಂಧವನ್ನು ಹೊಂದಿರುವುದಿಲ್ಲ. ನಾವು ಎಲ್ಲಾರ ಒಳಿತಿಗಾಗಿ ಮುಂದುವರಿಯಬೇಕು. ನಾವು ಮದುವೆಯಾಗುತ್ತಿದ್ದೇವೆ. ನನಗೆ ಯಾವುದೇ ಅಪರಾಧ ಎನಿಸುತ್ತಿಲ್ಲ. ಆದರೆ ಕೃತಜ್ಞತೆ ಮಾತ್ರ ಇದೆ. ಆದ್ದರಿಂದ ಅದನ್ನು ವ್ಯಕ್ತಪಡಿಸುತ್ತಿದ್ದೇನೆ ಎಂದು ನೆಟ್ಟಿಗರೊಬ್ಬರ ಕಾಮೆಂಟ್‌ಗೆ ನಟಿ ಸ್ಪಷ್ಟನೆ ಕೊಟ್ಟಿದ್ದರು. ಇನ್ನೂ ಮಾನಸ ಭಾವಿ ಪತಿ ಪ್ರೀತಮ್ ಚಂದ್ರ ಅವರು ಫುಟ್ ಬಾಲ್ ಪ್ಲೇಯರ್ ಆಗಿದ್ದಾರೆ. ಅವರು ಫುಟ್ ಬಾಲ್ ಅಕಾಡೆಮಿ ಕೂಡ ನಡೆಸುತ್ತಿದ್ದಾರೆ.

# ಟೀಂ ಇಂಡಿಯಾ ಸೋಲಿಗೆ ಸಿಎಸ್‌ಕೆಯೇ ಕಾರಣ

ಟೀಂ ಇಂಡಿಯಾ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ 3-0 ಅಂತರದಿಂದ ಸೋತಿರುವುದಕ್ಕೆ ಮಾಜಿ ಆಟಗಾರ ರಾಬಿನ್ ಉತ್ತಪ್ಪ ಅವರು ಚೆನ್ನೈ ಸೂಪರ್ ಕಿಂಗ್ಸ್ ಅಕಾಡೆಮಿಯ ಪಾತ್ರವನ್ನು ದೂಷಿಸಿದ್ದಾರೆ. ರಚಿನ್ ರವೀಂದ್ರ ಅವರಿಗೆ ಸಿಎಸ್‌ಕೆ ನೀಡಿದ ಅಭ್ಯಾಸದಿಂದಾಗಿ ನ್ಯೂಜಿಲೆಂಡ್ ಆಟಗಾರರು ಭಾರತೀಯ ಪರಿಸ್ಥಿತಿಗಳಿಗೆ ಹೊಂದಿಕೊಂಡು ಉತ್ತಮ ಪ್ರದರ್ಶನ ನೀಡಿದ್ದಾರೆ ಎಂದು ಉತ್ತಪ್ಪ ವಾದಿಸಿದ್ದಾರೆ. ಉತ್ತಪ್ಪ, ಸಿಎಸ್‌ಕೆ ಫ್ರಾಂಚೈಸಿ ದೇಶದ ಹಿತಾಸಕ್ತಿಗಿಂತ ತನ್ನ ಆಟಗಾರರನ್ನು ಪ್ರಾಮುಖ್ಯತೆ ನೀಡುತ್ತಿದೆ ಎಂದು ಟೀಕಿಸಿದ್ದಾರೆ. ಏತನ್ಮಧ್ಯೆ, ಟೀಂ ಇಂಡಿಯಾದ ಮಾಜಿ ಕ್ರಿಕೆಟಿಗ ಹಾಗೂ ಕನ್ನಡಿಗ ರಾಬಿನ್ ಉತ್ತಪ್ಪ, ಟೀಂ ಇಂಡಿಯಾದ ಈ ಸೋಲಿಗೆ ಐಪಿಎಲ್‌ನ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ಕಾರಣ ಎಂದು ದೂರಿದ್ದಾರೆ. ಜೊತೆಗೆ ಸಿಎಸ್‌ಕೆ ಫ್ರಾಂಚೈಸಿಯ ಮೇಲೆ ಪ್ರಶ್ನೆಗಳನ್ನು ಎತ್ತಿದ್ದಾರೆ. ಅಲ್ಲದೆ ದೇಶದ ಹಿತಾಸಕ್ತಿಗಿಂತ ತನ್ನ ತಂಡದ ಆಟಗಾರರಿಗೆ ಫ್ರಾಂಚೈಸಿ ಪ್ರಾಮುಖ್ಯತೆ ನೀಡಿದ್ದನ್ನು ಉತ್ತಪ್ಪ ಟೀಕಿಸಿದ್ದಾರೆ. ವಾಸ್ತವವಾಗಿ, ಭಾರತ ವಿರುದ್ಧದ ಟೆಸ್ಟ್ ಸರಣಿಯ ಆರಂಭಕ್ಕೂ ಮೊದಲು, ಸಿಎಸ್‌ಕೆ ಫ್ರಾಂಚೈಸಿ, ರಚಿನ್ ರವೀಂದ್ರ ಅವರಿಗೆ ಅಭ್ಯಾಸ ಮಾಡಲು ಸೌಲಭ್ಯವನ್ನು ನೀಡಿತ್ತು. ಈ ಅಭ್ಯಾಸದ ಫಲವಾಗಿ ಭಾರತದ ಪರಿಸ್ಥಿತಿಗಳಲ್ಲಿ ಹೇಗೆ ಆಡಬೇಕು ಎಂಬುದನ್ನು ಅರಿತುಕೊಂಡ ರವೀಂದ್ರ, ಇಡೀ ಸರಣಿಯಲ್ಲಿ ವೇಗಿಗಳ ಜೊತೆಗೆ ಸ್ಪಿನ್ನರ್‌ಗಳನ್ನು ಸಮರ್ಥವಾಗಿ ಎದುರಿಸಿ ಗೆಲುವಿನ ಇನ್ನಿಂಗ್ಸ್‌ಗಳನ್ನು ಆಡಿದ್ದರು.ಇದೀಗ ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಟೆಸ್ಟ್ ಸರಣಿಯ ಬಗ್ಗೆ ಮಾತನಾಡಿರುವ ರಾಬಿನ್ ಉತ್ತಪ್ಪ ಟೀಂ ಇಂಡಿಯಾದ ಸೋಲಿನ ವಿಶ್ಲೇಷಣೆ ಮಾಡುತ್ತಲೇ ಟೀಂ ಇಂಡಿಯಾ ಮಾಡಿದ ತಪ್ಪುಗಳ ಬಗ್ಗೆ ಮಾತನಾಡಿದ್ದಾರೆ. ಈ ವೇಳೆ ಅಸಮಾಧಾನ ವ್ಯಕ್ತಪಡಿಸಿದ ಉತ್ತಪ್ಪ, ಸಿಎಸ್‌ಕೆ ಉತ್ತಮ ಫ್ರಾಂಚೈಸಿ. ಆದರೆ ದೇಶದ ಹಿತಾಸಕ್ತಿಗೆ ಸಂಬಂಧಿಸಿದಂತೆ, ಮಿತಿಯನ್ನು ನಿಗದಿಪಡಿಸುವ ಅವಶ್ಯಕತೆಯಿದೆ ಎಂದಿದ್ದಾರೆ. ಸಿಎಸ್‌ಕೆ ನಡೆಯನ್ನು ವಿರೋಧಿಸಿರುವ ಉತ್ತಪ್ಪ, 'ಫ್ರಾಂಚೈಸಿಗಳು ತಮ್ಮ ಆಟಗಾರರಿಗಿಂತ ದೇಶಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಬೇಕು. ವಿಶೇಷವಾಗಿ ವಿದೇಶಿ ಆಟಗಾರರ ವಿಷಯದಲ್ಲಿ ಹೆಚ್ಚು ಜಾಗರೂಕರಾಗಿರಬೇಕು. ಭಾರತ ವಿರುದ್ಧ ಸರಣಿ ಆಡಲು ಇಲ್ಲಿಗೆ ಬಂದಿದ್ದ ಕಿವೀಸ್ ತಂಡದ ಆಟಗಾರನಿಗೆ ಅಭ್ಯಾಸ ಮಾಡಲು ಸಿಎಸ್‌ಕೆ ಅಕಾಡೆಮಿಯಲ್ಲಿ ಅವಕಾಶ ಮಾಡಿಕೊಡಲಾಗಿದೆ.ಇದರ ಲಾಭ ಪಡೆದ ರಚಿನ್ ರವೀಂದ್ರ ಮೊದಲ ಟೆಸ್ಟ್ ಪಂದ್ಯದಲ್ಲಿ 157 ಎಸೆತಗಳಲ್ಲಿ 134 ರನ್‌ಗಳ ಅದ್ಭುತ ಇನ್ನಿಂಗ್ಸ್ ಆಡಿದ್ದರು. ರಚಿನ್ ಅವರ ಈ ಇನ್ನಿಂಗ್ಸ್‌ನಿಂದಾಗಿ ನ್ಯೂಜಿಲೆಂಡ್ ಭಾರಿ ಮುನ್ನಡೆ ಸಾಧಿಸಿದಲ್ಲದೆ, ಮೊದಲ ಟೆಸ್ಟ್ ಪಂದ್ಯವನ್ನು ಗೆದ್ದುಕೊಂಡಿತು.



# ಮೆಗಾ ಹರಾಜಿಗೆ ಬರಲ್ಲ ಮಿನಿ ಹರಾಜು ಬಿಡಲ್ಲ



ಬೆನ್ ಸ್ಟೋಕ್ಸ್ ಕಳ್ಳಾಟಕ್ಕೆ ಬ್ರೇಕ್ ಹಾಕಿದ ಬಿಸಿಸಿಐ

ಬೆನ್ ಸ್ಟೋಕ್ಸ್ 2025ರ ಐಪಿಎಲ್ ಮೆಗಾ ಹರಾಜಿನಲ್ಲಿ ಭಾಗವಹಿಸದಿರುವುದರಿಂದ ಎರಡು ವರ್ಷಗಳ ಕಾಲ ಐಪಿಎಲ್ ಆಡಲು ಅವಕಾಶವಿಲ್ಲ. ಬಿಸಿಸಿಐನ ಹೊಸ ನಿಯಮದ ಪ್ರಕಾರ, ಮೆಗಾ ಹರಾಜಿನಲ್ಲಿ ನೋಂದಾಯಿಸದ ವಿದೇಶಿ ಆಟಗಾರರು ಮುಂದಿನ ವರ್ಷದ ಹರಾಜಿನಲ್ಲೂ ಭಾಗವಹಿಸಲು ಅರ್ಹರಲ್ಲ. ಸ್ಟೋಕ್ಸ್ ಮುಂಬರುವ ಆಷಸ್ ಸರಣಿಯ ಮೇಲೆ ಗಮನಹರಿಸುತ್ತಿರುವುದರಿಂದ ಈ ನಿರ್ಧಾರ ತೆಗೆದುಕೊಂಡಿರಬಹುದು ಎನ್ನಲಾಗಿದೆ.

ಈ ನಿಯಮದಿಂದಾಗಿ ಸ್ಟೋಕ್ಸ್ 2026ರ ಐಪಿಎಲ್‌ನಲ್ಲೂ ಆಡಲು ಸಾಧ್ಯವಾಗುವುದಿಲ್ಲ. 2025ರ ಐಪಿಎಲ್ ಮೆಗಾ ಹರಾಜಿಗೆ ವೇದಿಕೆ ಸಿದ್ಧವಾಗಿದ್ದು, ಇದೇ ತಿಂಗಳ ಅಂದರೆ ನವೆಂಬರ್ 24 ಮತ್ತು 25 ರಂದು ಸೌದಿ ಅರೇಬಿಯಾದ ಜೆಡ್ಡಾದಲ್ಲಿ ನಡೆಯಲಿದೆ. ಈ ಬಾರಿ ಮೆಗಾ ಹರಾಜಿಗೆ 1165 ಭಾರತೀಯ ಆಟಗಾರರು ಸೇರಿದಂತೆ ಒಟ್ಟು 1574 ಕ್ರಿಕೆಟಿಗರು ನೋಂದಾಯಿಸಿಕೊಂಡಿದ್ದಾರೆ. ಇದರಲ್ಲಿ 320 ಕ್ಯಾಪ್ಡ್ ಮತ್ತು 1224 ಅನ್‌ಕ್ಯಾಪ್ಡ್ ಆಟಗಾರರಿದ್ದಾರೆ. ಉಳಿದಂತೆ ಸಹವರ್ತಿ ದೇಶಗಳ 30 ಆಟಗಾರರನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ. ಆದರೆ, ಈ 1574 ಆಟಗಾರರ ಪಟ್ಟಿಯಲ್ಲಿ ಇಂಗ್ಲೆಂಡ್ ಟೆಸ್ಟ್ ತಂಡದ ನಾಯಕ ಬೆನ್ ಸ್ಟೋಕ್ಸ್ ಅವರ ಹೆಸರು ಇಲ್ಲ. ಅಂದರೆ ಬೆನ್ ಸ್ಟೋಕ್ಸ್ ಮೆಗಾ ಹರಾಜಿಗೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿಲ್ಲ. ಮುಂಬರುವ ಆಶ್ಯಸ್ ಸರಣಿಯ ಮೇಲೆ ಹೆಚ್ಚು ಗಮನಹರಿಸುವ ಕಾರಣಕ್ಕೆ ಸ್ಟೋಕ್ಸ್ ಈ ನಿರ್ಧಾರಕ್ಕೆ ಬಂದಿರಬಹುದು ಎಂದು ವರದಿಯಲ್ಲಿ ಹೇಳಲಾಗುತ್ತಿದೆ. ಇದೀಗ ಐಪಿಎಲ್ ಮೆಗಾ ಹರಾಜಿಗೆ ತಮ್ಮ ಹೆಸರನ್ನು ನೋಂದಾಯಿಸದ ಬೆನ್ ಸ್ಟೋಕ್ಸ್‌ಗೆ ಎರಡು ವರ್ಷ ಐಪಿಎಲ್‌ನಲ್ಲಿ ಆಡಲು ಸಾಧ್ಯವಾಗುವುದಿಲ್ಲ. ಹೌದು, ಬಿಸಿಸಿಐ ನಿಯಮಗಳಿಂದಾಗಿ ಸ್ಟೋಕ್ಸ್ ಐಪಿಎಲ್‌ನ ಮುಂಬರುವ ಎರಡು ಸೀಸನ್‌ಗಳ ಭಾಗವಾಗಿರಲು ಸಾಧ್ಯವಾಗುವುದಿಲ್ಲ. ವಾಸ್ತವವಾಗಿ ಮೆಗಾ ಹರಾಜಿಗೂ ಮುನ್ನ ಬಿಸಿಸಿಐ ಐಪಿಎಲ್‌ಗೆ ಸಂಬಂಧಿಸಿದಂತೆ ಕೆಲವು ಹೊಸ ಮಾರ್ಗಸೂಚಿಗಳನ್ನು ಹೊರಡಿಸಿತ್ತು. ಆ ಪ್ರಕಾರ, ಐಪಿಎಲ್ ಮೆಗಾ ಹರಾಜಿನಲ್ಲಿ ಯಾವುದೇ ವಿದೇಶಿ ಆಟಗಾರ ತನ್ನ ಹೆಸರನ್ನು ನೋಂದಾಯಿಸಿಕೊಳ್ಳದಿದ್ದರೆ, ಆತ ಮುಂದಿನ ವರ್ಷ ನಡೆಯಲಿರುವ ಹರಾಜಿನಲ್ಲೂ ಭಾಗವಹಿಸುಂತಿಲ್ಲ ಎಂಬುದು ಕೂಡ ಈ ನಿಯಮಗಳಲ್ಲಿ ಒಂದಾಗಿದೆ. ಇಂತಹ ಪರಿಸ್ಥಿತಿಯಲ್ಲಿ, ಬೆನ್ ಸ್ಟೋಕ್ಸ್ 2026 ರ ಹರಾಜಿನಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ.ಬಿಸಿಸಿಐ ಪ್ರಕಾರ, ಐಪಿಎಲ್ ಆಡುವ ಇಚ್ಛೆಯಿರುವ ಯಾವುದೇ ವಿದೇಶಿ ಆಟಗಾರರು ಮೆಗಾ ಹರಾಜಿಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಒಂದು ವೇಳೆ ಅವರು ತಮ್ಮ ಹೆಸರನ್ನು ನೋಂದಣಿ ಮಾಡದಿದ್ದರೆ ಮುಂದಿನ ವರ್ಷದ ಹರಾಜಿಗೆ ಅವರು ಅನರ್ಹರಾಗುತ್ತಾರೆ. ಇದರರ್ಥ ಸ್ಟೋಕ್ಸ್, 2025 ರ ಐಪಿಎಲ್ ಜೊತೆಗೆ 2026 ರ ಐಪಿಎಲ್‌ನಲ್ಲೂ ಆಡಲು ಸಾಧ್ಯವಾಗುವುದಿಲ್ಲ. ಬಿಸಿಸಿಐ ಈ ನಿಯಮವನ್ನು ಮಾಡಲು ಕಾರಣವೂ ಇದ್ದು, ಕಳೆದ ಕೆಲವು ವರ್ಷಗಳಲ್ಲಿ ವಿದೇಶಿ ಆಟಗಾರರು ಮೆಗಾ ಹರಾಜಿನಲ್ಲಿ ಭಾಗವಹಿಸುವುದಿಲ್ಲ. ಆದರೆ ಆ ನಂತರ ನಡೆಯುವ ಮಿನಿ ಹರಾಜಿನಲ್ಲಿ ಭಾಗವಹಿಸುತ್ತಾರೆ.

# ನಾಯಕನ ಜೊತೆ ಜಗಳವಾಡಿ ಅರ್ಧದಲ್ಲೇ ಮೈದಾನ ತೊರೆದ ವಿಂಡೀಸ್ ಬೌಲರ್

ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ತಂಡವು 50 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 263 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ವೆಸ್ಟ್ ಇಂಡೀಸ್ ಪರ ಬ್ರಾಂಡನ್ ಕಿಂಗ್ (102) ಹಾಗೂ ಕೀಸಿ ಕಾರ್ಟಿ (128) ಭರ್ಜರಿ ಶತಕ ಬಾರಿಸಿದರು. ಕ್ರಿಕೆಟ್ ಮೈದಾನದಲ್ಲಿ ಎದುರಾಳಿ ತಂಡಗಳ ವಿರುದ್ಧ ಕೋಪ ತಾಪಗಳು ಕಂಡು ಬರುವುದು ಸಾಮಾನ್ಯ. ಆದರೆ ವೆಸ್ಟ್ ಇಂಡೀಸ್ ತಂಡ ಆಟಗಾರ ಅಲ್ಝಾರಿ ಜೋಸೆಫ್ ತನ್ನ ನಾಯಕನೇ ವಿರುದ್ಧವೇ ಜಗಳವಾಡಿಕೊಂಡಿದ್ದಾರೆ. ಈ ಜಗಳವು ತಾರಕ್ಕೇರಿ ಅರ್ಧದಲ್ಲೇ ಮೈದಾನ ತೊರೆದ ಘಟನೆ ಕೂಡ ನಡೆದಿದೆ. ಬಾರ್ಬಡೋಸ್‌ನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಮೂರನೇ ಏಕದಿನ ಪಂದ್ಯದ ವೇಳೆ ಈ ಘಟನೆ ನಡೆದಿದ್ದು,



ಪಂದ್ಯದ ನಡುವೆಯೇ ಅಲ್ಝಾರಿ ಜೋಸೆಫ್ ಮೈದಾನ ತೊರೆದಿದ್ದಾರೆ. ಈ ಪಂದ್ಯದ 4ನೇ ಓವರ್‌ನಲ್ಲಿ ಅಲ್ಝಾರಿ ಜೋಸೆಫ್ ದಾಳಿಗಿಳಿದಿದ್ದರು. ಇದೇ ವೇಳೆ ನಾಯಕ ಶಾಯ್ ಹೋಪ್ ಸೆಟ್ ಮಾಡಿದ ಫೀಲ್ಡಿಂಗ್‌ನಿಂದ ಅಲ್ಝಾರಿ ಸಂತುಷ್ಟರಾಗಿರಲಿಲ್ಲ. ಹೀಗಾಗಿ ನಾಯಕನೊಂದಿಗೆ ಫೀಲ್ಡಿಂಗ್ ವಿಚಾರವಾಗಿ ವಾಗ್ವಾದಕ್ಕಿಳಿದಿದ್ದಾರೆ.ಅತ್ತ ಕಡೆಯಿಂದ ಶಾಯ್ ಹೋಪ್ ಕೂಡ ಅಲ್ಝಾರಿ ಜೋಸೆಫ್‌ಗೆ ಪ್ರತ್ಯುತ್ತರ ನೀಡಿದ್ದಾರೆ. ಇದರಿಂದ ಕೋಪಗೊಂಡ ಅಲ್ಝಾರಿ ಬೌನ್ಸರ್ ಎಸೆಯುವ ಮೂಲಕ ಜೋರ್ಡನ್ ಕಾಕ್ಸ್ (1) ವಿಕೆಟ್ ಪಡೆದರು. ಈ ವೇಳೆಯು ನಾಯಕನೊಂದಿಗೆ ವಾಗ್ವಾದ ಮುಂದುವರೆಸಿದರು. ಅಷ್ಟೇ ಅಲ್ಲದೆ 4ನೇ ಓವರ್ ಮುಗಿಯುತ್ತಿದ್ದಂತೆ ಅಲ್ಝಾರಿ ಜೋಸೆಫ್ ಮೈದಾನ ತೊರೆದು ಡ್ರೆಸ್ಸಿಂಗ್ ರೂಮ್‌ಗೆ ತೆರಳಿದ್ದಾರೆ. ಇದೇ ವೇಳೆ ವೆಸ್ಟ್ ಇಂಡೀಸ್ ತಂಡದ ಕೋಚ್ ಡ್ಯಾರೆನ್ ಸ್ಯಾಮಿ ಕೂಡ ಆಟಗಾರರನ್ನು ಬೌಂಡರಿ ಲೈನ್‌ನ ಹೊರಗೆ ನಿಂತು ನಿಯಂತ್ರಿಸುತ್ತಿರುವುದು ಕಾಣಬಹುದು.

# ಪಂಜಾಬ್ ಕಿಂಗ್ಸ್ ಸಂಬಂಧಕ್ಕೆ ಅರ್ಷ್‌ದೀಪ್ ಎಳ್ಳು ನೀರು!



ಎಲ್ಲಾ ಪೋಸ್ಟ್‌ಗಳನ್ನು ಡಿಲೀಟ್

ಪಂಜಾಬ್ ಕಿಂಗ್ಸ್ ತಂಡವು ತಮ್ಮ ಆಟಗಾರರ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಅರ್ಷದೀಪ್ ಸಿಂಗ್ ಅವರನ್ನು ತಂಡದಿಂದ ಕೈಬಿಟ್ಟಿದೆ. ಇದರಿಂದಾಗಿ ಐಪಿಎಲ್ 2025ರ ಮೆಗಾ ಹರಾಜಿನಲ್ಲಿ ಅರ್ಷದೀಪ್ ಬೇರೆ ತಂಡ ಸೇರಬಹುದು ಎಂದು ಊಹಿಸಲಾಗುತ್ತಿದೆ.

ಈ ನಡುವೆ ಅರ್ಷದೀಪ್ ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ಪಂಜಾಬ್ ಕಿಂಗ್ಸ್ ಅನ್ನು ಅನ್‌ಫಾಲೋ ಮಾಡಿದ್ದು ಇದಕ್ಕೆ ಪುಷ್ಟಿ ನೀಡುತ್ತದೆ. ಎಲ್ಲಾ ಐಪಿಎಲ್ ಫ್ರಾಂಚೈಸಿಗಳಂತೆ, ಪಂಜಾಬ್ ಕಿಂಗ್ಸ್ ಕೂಡ ತಮ್ಮ ಧಾರಣ ಪಟ್ಟಿಯನ್ನು ಅಕ್ಟೋಬರ್ 31 ರಂದು ಬಿಡುಗಡೆ ಮಾಡಿತ್ತು. ಆದರೆ ತನ್ನ ಪಟ್ಟಿಯಲ್ಲಿ ಕೇವಲ ಇಬ್ಬರು ಅನ್‌ಕ್ಯಾಪ್ಡ್ ಆಟಗಾರರನ್ನು ಹೆಸರಿಸಿದ್ದ ಪಂಜಾಬ್, ಇಡೀ ಐಪಿಎಲ್ ಅಭಿಮಾನಿಗಳಿಗೆ ಶಾಕ್ ನೀಡಿತ್ತು. ಈ ಮೊದಲು ತಂಡದಲ್ಲಿ ಯಾರೆಲ್ಲ ಉಳಿದುಕೊಳ್ಳಲಿದ್ದಾರೆ ಎಂಬ ಊಹೆಯನ್ನು ಅಭಿಮಾನಿಗಳು ಮಾಡಿಕೊಂಡಿದ್ದರೋ, ಆ ಊಹೆಯನ್ನು ಪಂಜಾಬ್ ಹುಸಿಗೊಳಿಸಿತ್ತು.

ತನ್ನ ಧಾರಣ ಪಟ್ಟಿಯಲ್ಲಿ ಇಬ್ಬರು ಅನ್‌ಕ್ಯಾಪ್ಡ್ ಆಟಗಾರರಾದ ಶಶಾಂಕ್ ಸಿಂಗ್ ಅವರನ್ನು ಅತ್ಯಧಿಕ 5.5 ಕೋಟಿ ಮತ್ತು ಪ್ರಭಾಸಿಮ್ರಾನ್ ಸಿಂಗ್ ಅವರನ್ನು 4 ಕೋಟಿ ರೂಗಳ ಅಲ್ಪ ಮೊತ್ತಕ್ಕೆ ತಂಡದಲ್ಲಿ ಉಳಿಸಿಕೊಂಡಿತ್ತು. ಈ ಮೂಲಕ ಪ್ರೀತಿ ಜಿಂಟಾ ಒಡೆತನದ ಫ್ರಾಂಚೈಸಿ ಅತ್ಯಧಿಕ 110.5 ಕೋಟಿ ರೂಪಾಯಿಗಳೊಂದಿಗೆ ಮೆಗಾ ಹರಾಜಿಗೆ ಪ್ರವೇಶಿಸಲಿದೆ. ಈ ಮೊದಲೇ ತಿಳಿಸಿದಂತೆ ಅರ್ಷದೀಪ್ ಸಿಂಗ್ ಅವರನ್ನು ತಂಡದಲ್ಲಿ ಉಳಿಸಿಕೊಳ್ಳದಿರುವ ಫ್ರಾಂಚೈಸಿಯ ನಿರ್ಧಾರ ಎಲ್ಲಾರಲ್ಲೂ ಅಚ್ಚರಿ ಮೂಡಿಸಿತ್ತು. ಆದರೆ ಮೆಗಾ ಹರಾಜಿನಲ್ಲಿ ಅರ್ಷದೀಪ್ ಅವರನ್ನು ಪಂಜಾಬ್, ರೈಟ್ ಟು ಮ್ಯಾಚ್ ಕಾರ್ಡ್ ಬಳಸಿ ಮತ್ತೆ ತಂಡಕ್ಕೆ ಆಯ್ಕೆ ಮಾಡಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಈಗ ಅದರ ಭರವಸೆ ಸಂಪೂರ್ಣವಾಗಿ ಹುಸಿಯಾಗಿದೆ.

ಸತ್ಯ ಏನೆಂದರೆ, ಐಪಿಎಲ್ 2025 ರ ಮೆಗಾ ಹರಾಜಿನ ಮೊದಲು, ಅರ್ಷದೀಪ್ ಸಿಂಗ್ ತಮ್ಮ ಅಧಿಕೃತ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪಂಜಾಬ್ ಕಿಂಗ್ಸ್ ಅನ್ನು ಅನ್‌ಫಾಲೋ ಮಾಡಿದ್ದಾರೆ. ಅರ್ಷದೀಪ್ ಅವರು ಪಂಜಾಬ್‌ನ ಖಾತೆಯನ್ನು ಅನ್‌ಫಾಲೋ ಮಾಡಿರುವುದು ಮಾತ್ರವಲ್ಲದೆ ಈ ಫ್ರಾಂಚೈಸಿಯೊಂದಿಗಿನ ಒಡನಾಟವನ್ನು ಸೂಚಿಸುವ ಎಲ್ಲಾ ಪೋಸ್ಟ್‌ಗಳನ್ನು ಡಿಲೀಟ್ ಮಾಡಿದ್ದಾರೆ.ಇದರರ್ಥ ಅರ್ಷದೀಪ್ ಹಾಗೂ ಪಂಜಾಬ್ ಫ್ರಾಂಚೈಸಿ ನಡುವೆ ಯಾವುದು ಸರಿ ಇಲ್ಲ ಎಂಬುದು ಖಚಿತವಾಗಿದೆ. ಹೀಗಾಗಿ ನವೆಂಬರ್ 24-25 ರಂದು ಸೌದಿ ಅರೇಬಿಯಾದಲ್ಲಿ ನಡೆಯಲ್ಲಿರುವ ಮೆಗಾ ಹರಾಜಿನಲ್ಲಿ ಅರ್ಷದೀಪ್ ಮೇಲೆ ಪಂಜಾಬ್ ಫ್ರಾಂಚೈಸಿ ಯಾವುದೇ ಕಾರಣಕ್ಕೂ ರೈಟ್ ಟು ಮ್ಯಾಚ್ ಕಾರ್ಡ್ ಬಳಸಿ ಅವರನ್ನು ಖರೀದಿಸಲು ಹೋಗುವುದಿಲ್ಲ ಎಂಬುದು ಸ್ಪಷ್ಟವಾಗಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966